ಹೊಸ ಮನುಷ್ಯ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಅಗಸ್ಟ್-೨೦೧೨ ಸಂಚಿಕೆ-೧



ನಾರಾಯಣ ದೇಸಾಯಿಯವರೊಂದಿಗೆ ಐದು ದಿನಗಳು

ಜನಪದ ವಿಚಾರದಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಗಸ್ಟ್ - ೨೦೧೨

ಸಂಪುಟ - ೧೩

ಸಂಚಿಕೆ - ೧

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

✆ 08236 316344

✆ 08236 299854

e-mail : janapada@yahoo.com

web: janapada.net

ಕದ್ದರೆಂದು

ಅವರು ನಮ್ಮ ಪಾಲಿನ
ರೊಟ್ಟಿ ಕದ್ದರೆಂದು
ನಾವು ದೂರುವುದು ಬೇಡ.
ಅವರ ಹೊಟ್ಟೆ ತಣ್ಣಗಿರಲಿ–
ನಮ್ಮ ಹೊಟ್ಟೆಗಳಿಗೆ ತಣ್ಣೀರು
ಸಮಾಧಾನ ಹೇಳಬಲ್ಲುದು

ಅವರು ನಮ್ಮ ರಾತ್ರಿಯ
ನಿದ್ದೆ ಕದ್ದರೆಂದು
ನಾವು ಹಲುಬುವುದು ಬೇಡ.
ಅವರು ನಿದ್ದೆಯಿಂದ
ಎಚ್ಚರಾಗದಿರಲಿ–
ಈ ನಿದ್ರಾಹೀನ ರಾತ್ರಿಗಳಲ್ಲಿ
ನಕ್ಷತ್ರಗಳು ನಮ್ಮ ಜೊತೆಗಿರುತ್ತವೆ.

ಅವರು ನಮ್ಮ ತುಟಿಯ
ಮೇಲಿನ ನಗೆಯ ಕದ್ದರೆಂದು
ನಾವು ದುಃಖಿಸುವುದು ಬೇಡ.
ಅವರು ಸದಾ ಮಂದಸ್ಮಿತರಾಗಿರಲಿ
ನಾವು ಇಡೀ ಜಗತ್ತಿನ ಕಣ್ಣೀರಿಗೆ
ಬೊಗಸೆಯಾಗೋಣ.

ಅವರು ನಮ್ಮ ರೊಟ್ಟಿ, ನಿದ್ರೆ
ಮತ್ತು ನಗೆಯನ್ನು ಕದ್ದದ್ದಕ್ಕೆ
ಒಂದು ಸಲ ನಾವು ಆ ಮೇಲಿನವನ
ಅದಾಲತ್ತಿನಲ್ಲಿ ನ್ಯಾಯ ಕೇಳೋಣ.
ಆದರೆ, ಸದ್ಯದ ಸ್ಥಿತಿ ಹೇಗಿದೆ
ನೋಡು,
ಅವರು ಕದಿಯ ಬೇಕೆಂದರೂ
ನಮ್ಮ ಬಳಿ ಏನೂ ಉಳಿದಿಲ್ಲ!

ಅವರು ನಮ್ಮಷ್ಟೇ ನಿರುಪಾಯರಾದ
ಬಗ್ಗೆ ನನಗೆ ಖೇದವಿದೆ

– ವಿಭಾ

ವಿಚಾರ ದೀಪ್ತಿ

ಈಗಿನ ನಮ್ಮ ಆಲೋಚನಾ ಕ್ರಮ ಸಂಪೂರ್ಣ ಮಾನವ ಕೇಂದ್ರಿತವಾದದ್ದು; ನಮ್ಮ ಪ್ರಗತಿಯ ಪರಿಕಲ್ಪನೆಯೂ ಮನುಷ್ಯ ಕೇಂದ್ರಿತವೇ. ಪ್ರಕೃತಿಯ ಜೊತೆಗೆ ಶೋಷಣಾತ್ಮಕ ಸಂಬಂಧ, ಆತ್ಮನಿಷೇಧವೇ ಇರದ ಭೋಗಸಂಸ್ಕೃತಿ ಆಧುನಿಕ ಬದುಕಿನ ಸಹಜ ಪ್ರವೃತ್ತಿಯಾಗಿಬಿಟ್ಟಿದೆ.

ಹೀಗಾಗಿಯೇ ಸಸ್ಯ ಜಗತ್ತು, ಪ್ರಾಣಿ ಪಕ್ಷಿ ಜಗತ್ತು, ಎಲ್ಲವನ್ನೂ ನಾಶಪಡಿಸುತ್ತ, ನಾಗರಿಕ ಸಮಾಜ ಕಟ್ಟುತ್ತಿದ್ದೇವೆ. ಸ್ವಾರ್ಥ ಕೇಂದ್ರಿತ ಜಗತ್ತು ರೂಪಿಸುತ್ತಿದ್ದೇವೆ. ಇಂಥ ಹೊತ್ತಿನಲ್ಲಿಯೇ ನನಗೆ ದೇಸಿಸಂಸ್ಕೃತಿಯ ಅರಿವಿನ ಅನುಸಂಧಾನ ಅಗತ್ಯವೆನ್ನಿಸುವುದು.

ಉಪಭೋಗ ಮೂಲವಾದ ಪಾಶ್ಚಾತ್ಯ ನಾಗರಿಕತೆಯಿಂದ ಬಿಡುಗಡೆ ಪಡೆದು ನೆಲತಾಯ ಮಡಿಲಿನಲ್ಲಿ ಆಸರೆ ಪಡೆಯಬೇಕೆನ್ನಿಸುವುದು. ಜಾನಪದ ಕತೆಯೊಂದು ನನಗಿಲ್ಲಿ ನೆನಪಾಗುತ್ತದೆ. ನಮ್ಮ ಕಾಲದ ಶ್ರೇಷ್ಠ ಲೇಖಕ ಚಂದ್ರಶೇಖರ ಕಂಬಾರರು ನನಗಿದನ್ನು ಹೇಳಿದ್ದು:

ಒಬ್ಬ ರಾಜಕುಮಾರ. ಮದುವೆಯಾಗಲು ಬಯಸಿ ಕನ್ಯಾರ್ಥಿಯಾಗಿ ಸೂಕ್ತ ವಧುವಿಗಾಗಿ ಹುಡುಕುತ್ತಿರುತ್ತಾನೆ. ಆತನದೊಂದು ಷರತ್ತು. ಆತ ನೀಡುವ ಒಂದು ಸೇರು ಭತ್ತದಲ್ಲಿ ಆತನಿಗೆ ತೃಪ್ತಿಯಾಗುವ ಹಾಗೆ ಅಡುಗೆ ಮಾಡಿ ಬಡಿಸಬೇಕೆನ್ನುವುದು. ಹಳ್ಳಿಯ ಹೆಣ್ಣುಮಗಳೊಬ್ಬಳು ಈ ಸವಾಲು ಸ್ವೀಕರಿಸುತ್ತಾಳೆ. ಭತ್ತ ಕುಟ್ಟಿ, ಹೊಟ್ಟು ಬೇರ್ಪಡಿಸಿ, ಆ ಹೊಟ್ಟು ಮಾರಿ, ಅಡುಗೆಗೆ ಬೇಕಾದ ಸಲಕರಣೆ ಹೊಂದಿಸಿಕೊಂಡು ಅಡುಗೆ ಮಾಡುತ್ತಾಳೆ.

ರಾಜಕುಮಾರ ತನ್ನ ಗೆಳೆಯನೊಂದಿಗೆ ಬರುತ್ತಾನೆ. ಆ ಹೆಣ್ಣುಮಗಳು ಎರಡು ಎಲೆ ಹಾಕಿ ಊಟಕ್ಕೆ ಸಿದ್ಧಪಡಿಸುತ್ತಾಳೆ. ರಾಜಕುಮಾರ ಒಬ್ಬನೇ ಬಂದು ಕುಳಿತು ತೃಪ್ತಿಯಾಗಿ ಊಟ ಮಾಡುತ್ತಾನೆ. ಅವಳನ್ನು ಮದುವೆಯಾಗಲು ಒಪ್ಪುತ್ತಾನೆ. ಆದರೆ ಆ ಹೆಣ್ಣುಮಗಳು ರಾಜಕುಮಾರನನ್ನು ಮದುವೆಯಾಗಲು ನಿರಾಕರಿಸುತ್ತಾಳೆ.

ಆಶ್ಚರ್ಯಗೊಂಡ ಎಲ್ಲರೂ ಕಾರಣ ಕೇಳಿದಾಗ ಆಕೆ ರಾಜಕುಮಾರನನ್ನು ಉದ್ದೇಶಿಸಿ ಹೇಳುತ್ತಾಳೆ: 'ಅಯ್ಯಾ ರಾಜಕುಮಾರ, ನೀನು ನಿನ್ನ ಗೆಳೆಯನೊಡನೆ ಬಂದೆ. ಆದರೆ ಅವನನ್ನು ಬಿಟ್ಟು ಒಬ್ಬನೇ ಊಟ ಮಾಡಿದೆ; ನಿನ್ನ ಕುದುರೆಗೆ ಹುಲ್ಲು, ಹುರುಳಿ ಹಾಕಿತೇ ಗಮನಿಸಲಿಲ್ಲ; ಎದುರಿಗಿದ್ದ ನನಗೆ ಊಟ ಉಳಿಯಿತೇ ಇಲ್ಲವೇ ಎಂದು ವಿಚಾರಿಸಲಿಲ್ಲ. ಒಬ್ಬನೇ ಸ್ವಾರ್ಥಿಯಾಗಿ ತಿಂದು ತೇಗಿದೆ. ನಿನ್ನಂಥವನ ಜೊತೆ ಒಕ್ಕಲುತನ, ಸಂಸಾರ ಸಾಧ್ಯವೇ? ಆದ್ದರಿಂದ ನಿನ್ನನ್ನು ಮದುವೆಯಾಗಲಾರೆ ಎನ್ನುತ್ತಾಳೆ.

ರಾಜಕುಮಾರ ನಾಗರಿಕ ಸಂಸ್ಕೃತಿಯ ಪ್ರತಿನಿಧಿ. ಹಳ್ಳಿಯ ಹೆಣ್ಣುಮಗಳು ನಮ್ಮ ದೇಸಿ ಸಂಸ್ಕೃತಿಯ ಸತ್ವ. ಈ ಹೆಣ್ಣುಮಗಳ ವಿವೇಕ, ಪ್ರಭುತ್ವವನ್ನು ನಿರಾಕರಿಸುವ ದಿಟ್ಟತನ, ಸಹಬಾಳ್ವೆಯ ಪರಿಕಲ್ಪನೆ, ಎಲ್ಲವನ್ನೂ ಒಳಗೊಳ್ಳುವ ಪ್ರೀತಿ ತುಂಬಿದ ಹೃದಯ – ನಮ್ಮ ವರ್ತಮಾನದ ಅನೇಕ ತಲ್ಲಣಗಳಿಗೆ ಪರಿಹಾರ ಒದಗಿಸಬಲ್ಲುದು. ನಮ್ಮ ಅಧ್ಯಯನ ಈ ದೇಸಿ ಸಂಸ್ಕೃತಿಯ ಅಂತಃಸತ್ವವನ್ನು ಒಳಗೊಳ್ಳಬೇಕಿದೆ.

ಸಾಹಿತ್ಯ ವಿಮರ್ಶೆ ಸಂಸ್ಕೃತಿ ಚಿಂತನೆಯ ವ್ಯಾಪ್ತಿ ಪಡೆಯುವುದು ಈ ನೆಲೆಯಲ್ಲಿ; ಅದು ಜೀವನ್ಮುಖಿಯಾಗಿ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕಾರಣವಾಗುವುದು ಇಂಥ ವಿಸ್ತಾರ ಪಡೆದುಕೊಂಡಾಗ; ಈ ಹಾದಿಯ ಪಯಣದಲ್ಲಿ ನನ್ನದೂ ಕೆಲವು ಹೆಜ್ಜೆಗಳು.

– ನರಹಳ್ಳಿ ಬಾಲಸುಬ್ರಹ್ಮಣ್ಯ

ನಾರಾಯಣ ದೇಸಾಯಿಯವರೊಂದಿಗೆ ಐದು ದಿನಗಳು

– ಸುರೇಂದ್ರ ಕೌಲಗಿ

ನನಗಂತೂ ಗಾಂಧೀಜಿಯವರೊಂದಿಗೆ ನೇರವಾದ ಸಂಪರ್ಕ ಬರಲಿಲ್ಲ. ಅಷ್ಟರ ಮಟ್ಟಿಗೆ ನಾನು ದುರ್ದೈವಿ. ಆದರೆ ನನಗೆ ಗಾಂಧೀ ಮತ್ತು ಗಾಂಧೀ ವಿಚಾರ ಮಾರ್ಗದರ್ಶಕವಾದವು. ಈಗ ನನಗೆ ಎಪ್ಪತ್ತೆಂಟು ವರ್ಷ. ಗಾಂಧೀ ವಿಚಾರ ಆಧಾರಿತ ಸಾರ್ವಜನಿಕ ಜೀವನ ಪ್ರಾರಂಭಿಸಿ ಸುಮಾರು ಅರವತ್ತಾರು ವರ್ಷಗಳ ನಂತರ ಸುದೈವದಿಂದ ಗಾಂಧೀಜಿಯವರ ತೊಡೆಯ ಮೇಲೆ ಬೆಳೆದು ಶಿಕ್ಷಿತನಾದ ಹಾಗೂ ಸಾಬರಮತಿ ಮತ್ತು ಸೇವಾಗ್ರಾಮ್ ಆಶ್ರಮಗಳ ರಾಷ್ಟ್ರೀಯ ಚಟುವಟಿಕೆಗಳ ಮಧ್ಯೆ ದೊಡ್ಡವರಾದಂಥ ಹಾಗು ಯಾರು ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರಿಗೆ ೨೫ ವರ್ಷ ನೆಚ್ಚಿನ ವಿಶ್ವಾಸನೀಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರೋ ಅಂಥ ಮಹದೇವ ದೇಸಾಯಿಯವರ ಮಗ ನಾರಾಯಣ ದೇಸಾಯಿಯಂಥ ನಿಕಟ ಗಾಂಧೀ ವ್ಯಕ್ತಿಯ ಜೊತೆಗೆ ಐದು ದಿನಗಳ ಕಾಲ ಒಡನಾಡುವಂಥ ಮತ್ತು 'ಗಾಂಧೀಕಥಾ' ಕಾರ್ಯಕ್ರಮ ನಡೆಸುವಂಥ ಅವಕಾಶ ಒದಗಿ ಬಂತು. ೧೯೫೧ರಲ್ಲಿ ಯಾವ ದಿನ ಜಯಪ್ರಕಾಶ್ ನಾರಾಯಣರನ್ನು ಸೇರಿಕೊಂಡೆನೋ ಅಂದಿನಿಂದ ನನ್ನ ಸರ್ವೋದಯ ಸಮಾಜ ರಚನೆಯ ಕಾರ್ಯ ಪ್ರಾರಂಭವಾಯಿತು. ೬೨ ವರ್ಷಗಳ ಸರ್ವೋದಯ ಕೆಲಸದ ಫಲ ಎಂಬಂತೆ 'ಗಾಂಧೀಕಥಾ' ಕಾರ್ಯಕ್ರಮ ಅರಳಿ ಬಂದಿತು. ಶ್ರೀ ನಾರಾಯಣ ದೇಸಾಯಿ ಮತ್ತು ನಾನು ಅಖಿಲ ಬಾರತ ಸರ್ವೋದಯ ಮಂಡಲಿಯ ಕಾರ್ಯಕಾರಿ ಮಂಡಲಿಯ ಸದಸ್ಯರು. ಅಗಾಗ್ಗೆ ಸಭೆಗಳಲ್ಲಿ ಭೇಟಿಯಾಗುತ್ತಿದ್ದೆವು. ಆದರೆ ಓರ್ವ ಪ್ರಚಂಡ ಕರ್ತೃತ್ವ ಶಕ್ತಿಯ ನಾರಾಯಣ ದೇಸಾಯಿಯವರ ನಿಕಟ ಬರುವುದಕ್ಕೆ ಈ ಸುದೀರ್ಘ ಅವಧಿಯಲ್ಲಿ ಆಗಿರಲಿಲ್ಲ. ಅವರು 'ಗಾಂಧೀಕಥಾ' ಕಾರ್ಯಕ್ರಮ ನಡೆಸಿಕೊಡುವುದಕ್ಕೆ ಮೈಸೂರಿಗೆ ಬರಲು ಒಪ್ಪಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಅವರ ಮೈಸೂರು ಬರುವಿಕೆಯಿಂದಾಗಿ ನನಗೆ ಎಲ್ಲಿಲ್ಲದ ತವಕ, ಕುತೂಹಲ ಮತ್ತು ಗಡಿಬಿಡಿ. ಅಂತೂ ಅವರು ಬರುವ ದಿನಾಂಕ ಮೇ–೩೧ ಬಂತು. ಆ ದಿನ ರಾತ್ರಿ ಮೈಸೂರಿನ ಸರ್ವೋದಯ ಮಿತ್ರ ಮಂಡಲಿಯ ಕಾರ್ಯಕರ್ತರಾದ ಡಾ॥ ಶಿವರಾಜಪ್ಪ, ಉಮೇಶ್ ಮತ್ತು ರಮೇಶ್ ಹಾಗು ನಾನು ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ನಾರಾಯಣ ದೇಸಾಯಿ ಬರುವುದನ್ನೇ ಕಾಯುತ್ತಾ ಕುಳಿತಿದ್ದೆವು. ಅವರು ಕಾರಿನಿಂದ ಇಳಿದರು. ಅವರೊಂದಿಗೆ ಜಪಾನ್ ದೇಶದ ಓರ್ವ ಯುವತಿ ಇದ್ದಳು. ಅವಳ ಹೆಸರು ಕುರಿಹಾರ್‌ಕಾವೋರಿ. ಅವಳಿಗೆ ಕಾವೇರಿ ಎಂದು ಮರುನಾಮಕರಣವಾಗಿತ್ತು. ಕಾವೇರಿ ಸುಮಾರು ೨೨ ವರ್ಷದ ಯುವತಿ. ನಾರಾಯಣ ದೇಸಾಯಿಯವರು ಸ್ಥಾಪಿಸಿದ

ಗುಜರಾತಿನ ವೇಡಚಿಯಲ್ಲಿರುವ ಸಂಪೂರ್ಣ ಕ್ರಾಂತಿ ವಿದ್ಯಾಲಯಕ್ಕೆ ಬಂದಂಥ ವಿದ್ಯಾರ್ಥಿನಿ. ಅಲ್ಲಿಗೆ ಹೋಗುವ ಮೊದಲು ಕಾವೇರಿ ಜಪಾನ್‌ನ ಬ್ಯಾಂಕ್ ಒಂದರಲ್ಲಿ ದೊಡ್ಡ ಕೆಲಸದಲ್ಲಿ ಇದ್ದಳು. ೨೪ ಗಂಟೆಯೂ ಹಣದ ಪ್ರಪಂಚ. ಹಣ, ಹಣ ನೋಡಿ ಬೇಸರವಾಗಿ ಬೇರೊಂದು ಪರ್ಯಾಯ ಜೀವನ ಮಾರ್ಗ ಹುಡುಕಲು ಆರಂಭಿಸಿದಳು. ಗಾಂಧೀಜಿ ಬಗ್ಗೆ ಆಗಲೇ ಸ್ವಲ್ಪ ಓದಿದ್ದ ಕಾವೇರಿಗೆ ಗಾಂಧೀ ಜೀವನ ಶೈಲಿ ಹೆಚ್ಚು ಅಪ್ಯಾಯಮಾನವೆನಿಸಿತು. ಅದಕ್ಕಾಗಿ ಗಾಂಧೀ ವಿಚಾರವನ್ನು ಹೆಚ್ಚು ಆಳವಾಗಿ ಅಧ್ಯಯನ ಮಾಡಬೇಕು, ಗಾಂಧೀಮಾರ್ಗದಲ್ಲಿ ಮಹತ್ತನ್ನು ಸಾಧಿಸಬೇಕು ಎಂದು ಸಂಕಲ್ಪಿಸಿದಳು ಆ ಯುವತಿ. ಗಾಂಧೀಜಿಯಿಂದಲೇ ಸ್ಥಾಪಿತವಾದ ಗಾಂಧೀ ವಿದ್ಯಾಪೀಠದಲ್ಲಿಯೇ ಓದಿ ಪದವಿ ಪಡೆಯಬೇಕೆಂಬ ಹಂಬಲದಿಂದ ತನ್ನ ಬ್ಯಾಂಕ್ ಕೆಲಸಕ್ಕೆ ರಾಜಿನಾಮೆ ಕೊಟ್ಟಳು. ನೇರವಾಗಿ ನಾಯಾಯಣ ದೇಸಾಯಿಯವರ ಸಂಪೂರ್ಣ ಕ್ರಾಂತಿ ವಿದ್ಯಾಲಯಕ್ಕೆ ಬಂದಳು. ಮೂಲ ಗಾಂಧೀ ಸಾಹಿತ್ಯ ಗುಜರಾತಿಯಲ್ಲಿ ಹೆಚ್ಚು ಇರುವುದರಿಂದ ಗುಜರಾತಿ ಮೂಲಕವೆ ಗಾಂಧೀ ಸಾಹಿತ್ಯವನ್ನು ಓದಿ ಪದವಿ ಪಡೆಯಬೇಕೆಂದು ನಿಶ್ಚಯಿಸಿದಳು. ಅದರಂತೆ ಈಗ ಗುಜರಾತಿ ಕಲಿತು ನಾರಾಯಣ ದೇಸಾಯಿಯವರ ಮಾರ್ಗದರ್ಶನದಲ್ಲಿ ಗಾಂಧೀ ವಿಚಾರ ಅಧ್ಯಯನ ಮಾಡುತ್ತಿದ್ದಾಳೆ. ಆ ಆಸಕ್ತಿಯೇ ಅವಳು ಗಾಂಧೀಕಥಾ ಕಾರ್ಯಕ್ರಮದ ಸಂಬಂಧವಾಗಿ ನಾರಾಯಣ ದೇಸಾಯಿಯವರ ಸಹಾಯಕಿಯಾಗಿ ಮೈಸೂರಿಗೆ ಬರುವಂತಾಯಿತು. ೮೮ ವರ್ಷದ, ಅಷ್ಟೊಂದು ಆರೋಗ್ಯವಿಲ್ಲದ ದೇಸಾಯಿಯವರ ಸೇವೆಯನ್ನು ಪಿತೃಭಕ್ತಿಯಿಂದ, ಗುರುಭಕ್ತಿಯಿಂದ ಮಾಡುತ್ತಿದ್ದಾಳೆ.

ಶ್ರೀ ನಾರಾಯಣ ದೇಸಾಯಿಯವರು ಗಾಂಧೀಜಿಯವರ ಜೀವನ ಕುರಿತು ಗುಜರಾತಿಯಲ್ಲಿ ಜೀವನ ಚರಿತ್ರೆ ಬರೆದಿದ್ದಾರೆ. ಅದು ಆರು ಸಂಪುಟಗಳಷ್ಟಿದೆ. ಗಾಂಧೀಜಿಯವರ ಜೀವನವನ್ನೇನೋ ಬರಹದಲ್ಲಿ ಇಳಿಸಿಯಾಯಿತು, ಆದರೆ ಈ ವಿಷಯ ಸಾಮಾನ್ಯ ಜನರಿಗೆ ತಲುಪುತ್ತದೆಯೇ ಎಂಬ ಪ್ರಶ್ನೆ ನಾರಾಯಣ ದೇಸಾಯಿಯವರನ್ನು ಕಾಡಲಾರಂಭಿಸಿತು. ಗಾಂಧೀ ಜನತೆಯ ಮನುಷ್ಯ. ಆತ ಹೀಗೆ ಗ್ರಂಥಸ್ಥನಾಗಿ ವಾಚನಾಲಯಗಳ ಬೀರುಗಳಲ್ಲಿ ಬಂಧಿತನಾಗಿ ಇರಲು ಸಾಧ್ಯವಿಲ್ಲ ಎಂಬ ಅನಿಸಿಕೆ ನಾರಾಯಣ ದೇಸಾಯಿಯವರಲ್ಲಿ ಬಂದದ್ದೇ ತಡ ಗಾಂಧೀಕಥಾ ಕಲ್ಪನೆ ಮನಸ್ಸಿನಲ್ಲಿ ಒಡಮೂಡಿತು. ಹರಿಕಥಾ ಎಂಬುದು ನಮ್ಮ ದೇಶದ ಜನರಿಗೆ ಚಿರಪರಿಚಿತವಾದ ಮಾಧ್ಯಮ. ಆ ಮಾಧ್ಯಮ ಉಪಯೋಗಿಸಿ ಗಾಂಧೀ ಜೀವನವನ್ನು ಜನತೆಗೆ ಪರಿಚಯ ಮಾಡಿಕೊಡಲು ಸಿದ್ಧರಾದರು ನಾರಾಯಣ ದೇಸಾಯಿ. ಅಲ್ಲದೆ ಹರಿಕಥೆಯ ಮೂಲಕ ಗಾಂಧೀ ಜೀವನ ಚರಿತ್ರೆ ಅಷ್ಟೇ ಅಲ್ಲ ಗಾಂಧೀ ಜೀವನದ ಘಟನೆಯ ಮತ್ತು ಗಾಂಧೀ ಸತ್ಯದೊಂದಿಗೆ ಪ್ರಯೋಗಾರ್ಥವಾಗಿ ಮಾಡಿದ ಒಂದೊಂದು ಪ್ರತಿಜ್ಞೆಯ ಒಳಾರ್ಥವನ್ನು ತಿಳಿಸಬೇಕೆಂಬುದು ಅವರ ಹಂಬಲವಾಗಿತ್ತು. ಅಂಥ ಗಾಂಧೀಕಥಾದ ೧೦೩ನೇ ಕಾರ್ಯಕ್ರಮ ಮೈಸೂರು ನಗರದಲ್ಲಿ ನೆರವೇರಿತು. ೨೦೧೨ ಜೂನ್ ಒಂದರಿಂದ ಐದರವರೆಗೆ ನಡೆದ ಗಾಂಧೀಕಥಾ ಕಾರ್ಯಕ್ರಮ ಜನರನ್ನು ಮೋಡಿಗೊಳಿಸಿತು. ಕಥಾದ ಸಂದರ್ಭಕ್ಕನುಸಾರವಾಗಿ ಸ್ವತಃ ದೇಸಾಯಿಯವರೇ ರಚಿಸಿರುವ ಅರ್ಥಗರ್ಭಿತ ಹಾಡುಗಳಿಂದ ಕಥಾಕ್ಕೆ

ಒಂದು ಮೆರಗು ದೊರೆತಿತು. ಸ್ವತಃ ದೇಸಾಯಿಯವರೇ ಕಥಾದ ಎಲ್ಲ ಸಿದ್ಧತೆಯನ್ನು ಮುಖ್ಯವಾಗಿ ಸಂಗೀತದ ವ್ಯವಸ್ಥೆಯನ್ನು ಪರಿಚಯಿಸಿಕೊಂಡರು. ಹಾಡುಗಾರರಿಗೆ ಮಾರ್ಗದರ್ಶನ ನೀಡಿದರು. ಅವರು ಕೊಡುತ್ತಿದ್ದ ಮಾರ್ಗದರ್ಶನ ನೋಡಿದಾಗ ಅವರಿಗೆ ಸಂಗೀತದ ಆಳವಾದ ಜ್ಞಾನವಿರುವುದು ಖಚಿತವಾಯಿತು.

ಗಾಂಧೀಜಿ ಆಶ್ರಮಜೀವನದ ಶಿಸ್ತು ದೇಸಾಯಿಯವರ ದೈನಂದಿನ ಜೀವನದಲ್ಲಿ ಕಾಣಬರುತ್ತಿತ್ತು. ಸೂರ್ಯೋದಯಕ್ಕೆ ಮೊದಲೇ ಎದ್ದೇಳುತ್ತಿದ್ದರು. ಅರ್ಧಗಂಟೆ ಬೆಳಗಿನ ವಾಯುವಿಹಾರ ನಡೆಯುತ್ತಿತ್ತು. ನಂತರ ಬಿಡುವು ಸಿಕ್ಕಾಗಲೆಲ್ಲ ಪೆಟ್ಟಿ ಚರಕಾದ ಮೇಲೆ ಕೈದಾರ ತೆಗೆಯುತ್ತಿದ್ದರು. ಶ್ರೀ ನಾರಾಯಣ ದೇಸಾಯಿ ಗಾಂಧೀಜಿಯವರ ಆಶ್ರಮದಲ್ಲಿ ಜೀವನಶಿಕ್ಷಣ, ನೂಲುಗಾರಿಕೆ ಮತ್ತು ನೇಯ್ಗೆ ವಿಷಯದಲ್ಲಿ ಪರಿಣತಿ ಪಡೆದಿದ್ದರು. ಆದ್ದರಿಂದ ನೂಲುಗಾರಿಕೆಯಲ್ಲಿ ಅವರು ಕುಶಲರಾಗಿದ್ದರು. ಅವರು ತೆಗೆಯುತ್ತಿದ್ದ ದಾರವು ಏಕರೂಪವಾಗಿಯೂ, ದೃಢವಾಗಿಯೂ ಇರುತ್ತಿತ್ತು. ಅಲ್ಲದೆ ಅದು ಎಷ್ಟೇ ಅಲ್ಪ ಪ್ರಮಾಣದಲ್ಲಿದ್ದರೂ ರಾಷ್ಟ್ರೀಯ ಆಂತರಿಕ ಆದಾಯಕ್ಕೆ ಸೇರುತ್ತಿತ್ತು. ಎಂಭತ್ತೆಂಟರ ಈ ಇಳಿವಯಸ್ಸಿನಲ್ಲೂ ಅಷ್ಟೊಂದು ಕರಾರುವಕ್ಕಾದ ದಾರವನ್ನು ತೆಗೆಯುತ್ತಿದ್ದದ್ದನ್ನು ನೋಡುವುದೇ ಒಂದು ಖುಷಿ. ಅಲ್ಲದೆ ಇಂದಿನ ಜಾಗತಿಕ ಬದಲಾವಣೆಗಳ ಮಧ್ಯೆಯೂ ತಾರಕವಾಗಿ ಚರಕಾದ ಹಿಂದಿರುವ ಅರ್ಥಶಾಸ್ತ್ರ, ಅಂದರೆ ಗಾಂಧೀ ಅರ್ಥಶಾಸ್ತ್ರ ಉಳಿಯುತ್ತದೆ ಎಂಬ ವಿಶ್ವಾಸ ಎದ್ದು ಕಾಣುತ್ತಿತ್ತು. ಕುರಿಹಾರ್ ಸ್ವಚ್ಛ ಮಾಡಿದ ಬಟ್ಟೆಯನ್ನು ನಾರಾಯಣ ದೇಸಾಯಿಯವರು ಧರಿಸುತ್ತಿದ್ದರು. ಬಟ್ಟೆ ಇಸ್ತ್ರಿ ಕಾಣುತ್ತಿರಲಿಲ್ಲ. ಆ ಸರಳ ಉಡುಪಿನಲ್ಲಿಯೂ ಅವರ ವ್ಯಕ್ತಿತ್ವ ಹೊರಹೊಮ್ಮುತ್ತಿತ್ತು. ಎಂಥವರನ್ನೂ ಸಹ ಒಂದು ವಿಶಿಷ್ಟ ಪ್ರಭಾವಕ್ಕೆ ಒಳಪಡಿಸುತ್ತಿತ್ತು.

ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪ್ರೊ|| ಬಿ.ಜಿ.ತಳವಾರ್‌ರವರು ನಾರಾಯಣ ದೇಸಾಯಿಯವರನ್ನು ಭೇಟಿಮಾಡಲು ಅತಿಥಿ ಗೃಹಕ್ಕೆ ಬಂದರು. ದೇಸಾಯಿಯವರೊಂದಿಗೆ ತುಂಬ ಆತ್ಮೀಯವಾಗಿ ಮಾತನಾಡಿದರು. ವಿಶ್ವದ್ಯಾನಿಲಯದ ಅತಿಥಿಯನ್ನಾಗಿ ದೇಸಾಯಿಯವರನ್ನು ನೋಡಿಕೊಳ್ಳುವ ಅವಕಾಶ ತಮಗೆ ಸಿಕ್ಕಿದ್ದಕ್ಕಾಗಿ ತಮ್ಮ ಸಂತೋಷ ವ್ಯಕ್ತಪಡಿಸಿದರು. ಅಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಗಾಂಧೀ ವಿಚಾರ ಕಾರ್ಯಕ್ರಮಗಳು ನಡೆಯುತ್ತಿರುವುದನ್ನು ತಿಳಿಸಿದರು. ಗಾಂಧೀಕಥಾದ ವೀಡಿಯೋ ಚಿತ್ರೀಕರಣ ಮಾಡಿಕೊಳ್ಳುವುದಾಗಿ ತಿಳಿಸಿದರು. ನಂತರ ವಿಡಿಯೋದ ಹಲವಾರು ಪ್ರತಿಗಳನ್ನು ಮಾಡಿ ಕಾಲೇಜುಗಳಿಗೆ ಕೊಡುವುದಾಗಿ ಹೇಳಿದರು. ಇನ್ನೊಂದು ದಿನ ಆಜಾದಿ ಬಚಾವೋ ಆಂದೋಲನದ ಕಾರ್ಯಕರ್ತರಾದ ಸುಧೀಂದ್ರ ಮತ್ತು ಪನ್ನಾಲಾಲ್ ಭೇಟಿ ಮಾಡಲು ಬಂದರು. ರಾಜೀವ್ ದೀಕ್ಷಿತ್‌ರ ಕೆಲ ಅಭಿಪ್ರಾಯಗಳ ಬಗ್ಗೆ ನಾರಾಯಣ ದೇಸಾಯಿಯವರು ಅಸಮ್ಮತಿ ಸೂಚಿಸಿದರಲ್ಲದೆ ರಾಜೀವ್ ದೀಕ್ಷಿತ್ ತಮ್ಮ ಉಪನ್ಯಾಸಗಳಲ್ಲಿ ಪ್ರಸ್ತಾಪಿಸುತ್ತಿದ್ದ ಅಂಕಿ-ಸಂಖ್ಯೆಗಳ ನಿಖರತೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಇನ್ನೊಂದು ದಿನ ಸಾಮಾಜಿಕ ಚಿಂತಕ ಪ್ರೊ|| ಬಿ.ಎಸ್. ಶ್ರೀಧರ್ ಭೇಟಿ ಮಾಡಲು ಬಂದರು. ಅವರು ಪರಿಸರ ವಿಷಯವಾಗಿ

ನಡೆಯುತ್ತಿರುವ ಚಳುವಳಿ ಬಗ್ಗೆ ಪ್ರಸ್ತಾಪಿಸಿದರು.

ಗಾಂಧೀಕಥಾ ಕಾರ್ಯಕ್ರಮ ಕೇಳುವುದಕ್ಕಾಗಿ ಧಾರವಾಡದಿಂದ ಶ್ರೀ ಮಳಿಗಿ, ಶ್ರೀಮತಿ ಚೆನ್ನಮ್ಮ ಹಳ್ಳೀಕೇರಿ ಮತ್ತು ಇನ್ನು ಹಲವಾರು ಮಿತ್ರರು ಬಂದಿದ್ದರು. ಬೆಳಗಾವಿಯಲ್ಲಿ ಗಾಂಧೀಕಥಾ ಕಾರ್ಯಕ್ರಮವನ್ನು ಆಯೋಜಿಸಲು ಇಷ್ಟಪಟ್ಟಿರುವುದಾಗಿ ಅವರು ಹೇಳಿದರು. ಆದರೆ ದೇಸಾಯಿಯವರು ಸಮ್ಮತಿಸಲಿಲ್ಲ. ಇನ್ನು ಒಂದು ವರ್ಷದ ವರೆಗೆ ಬಿಡುವಿಲ್ಲದ ಕಾರ್ಯಕ್ರಮ ಇರುವುದಾಗಿ ಹೇಳಿದರು. ಆನಂತರ ಬೆಳಗಾವಿ ಗಾಂಧೀಕಥಾ ಕಾರ್ಯಕ್ರಮದ ಬಗ್ಗೆ ಯೋಚಿಸುವುದಾಗಿ ತಿಳಿಸಿದರು.

ಒಂದು ದಿನ ದೇಸಾಯಿಯವರು ಮೈಸೂರಿನಲ್ಲಿರುವ ಗುಜರಾತಿ ಸಮಾಜಕ್ಕೆ ಭೇಟಿಕೊಟ್ಟರು. ಗುಜರಾತಿ ಸಮಾಜದವರು ಶ್ರೀ ದೇಸಾಯಿಯವರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಶ್ರೀ ದೇಸಾಯಿಯವರು ತಮ್ಮ ಭಾಷಣದಲ್ಲಿ ಗುಜರಾತಿಗಳು ಯಾವ ರೀತಿ ಗಾಂಧೀ ವಿಚಾರವನ್ನು ಮರೆತು ಕೇವಲ ಹಣಸಂಪಾದನೆ ಉದ್ಯೋಗದಲ್ಲಿ ತೊಡಗಿದ್ದಾರೆ ಎಂಬುದನ್ನು ಕಟುವಾಗಿ ಹೇಳಿದರು. ತಮ್ಮ ಗಾಂಧೀಕಥಾ ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಎಲ್ಲ ಗುಜರಾತಿ ಬಾಂಧವರು ಬರಬೇಕೆಂದು ಹೇಳಿದರು. ತಮ್ಮ ಬಗ್ಗೆ ಪ್ರೀತಿ ಇರುವುದಾದರೆ ತಾವು ಗಾಂಧೀಕಥಾ ಕಾರ್ಯಕ್ರಮದ ಮೂಲಕ ಹೇಳುವ ವಿಷಯವನ್ನು ತಿಳಿಯಬೇಕಾಗಿ ಹೇಳಿದರು.

ಶ್ರೀ ನಾರಾಯಣ ದೇಸಾಯಿಯವರು ಒಂದು ದಿನ ಮೈಸೂರು ನಗರದ ಪತ್ರಿಕಾ ಸಂಘದಲ್ಲಿ ಪತ್ರಿಕಾ ಗೋಷ್ಠಿ ನಡೆಸಿದರು. ಇನ್ನೊಂದು ದಿನ ಮೈಸೂರು ಆಕಾಶವಾಣಿಯಲ್ಲಿ ಭಾಷಣ ಮಾಡಿದರು. ಆ ಭಾಷಣದ ಪಾಠ ಇಂತಿದೆ:-

"ಗಾಂಧೀಜಿಯವರ ಜೊತೆಗೆ ಮೂವತ್ತು ವರ್ಷಗಳ ಕಾಲ ಇರುವ ಸುಯೋಗ ನನಗೆ ಸಿಕ್ಕಿತು. ಆ ದಿನಗಳ ಮಧುರ ನೆನಪುಗಳನ್ನು ನಿಮ್ಮೊಡನೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ. ಜಾಗತಿಕ ಸಮಸ್ಯೆಗಳ ಬಗ್ಗೆ ಗಾಂಧೀಜಿಯವರಿಂದ ಪ್ರೇರಿತವಾದ ನನ್ನ ಕೆಲವು ಅನಿಸಿಕೆಗಳಿವೆ. ಇಂದಿನ ಜಗತ್ತು ಎದುರಿಸುತ್ತಿರುವ ಸಮಸ್ಯೆಗಳನ್ನು ಮೂರು ವಿಧಗಳಿಂದ ವಿಂಗಡಿಸಬಹುದು. ವೈಯಕ್ತಿಕ, ಸಾಮಾಜಿಕ ಮತ್ತು ಪರಿಸರಕ್ಕೆ ಸಂಬಂಧಿತ. ನನಗನ್ನಿಸುತ್ತದೆ ಗಾಂಧೀ ವಿಚಾರ ಧಾರೆಯಲ್ಲಿ ಈ ಮೂರಕ್ಕೂ ಪರಿಹಾರೋಪಾಯಗಳಿವೆ ಎಂದು. ಇಂದಿನ ಯುವ ಜನಾಂಗ ಮೌಲ್ಯಗಳ ಪತನಕ್ಕೆ ಸಾಕ್ಷಿಯಾಗಿ ದಿಕ್ಕೆಟ್ಟಂಥವರಾಗಿದ್ದಾರೆ. ಅವರಿಗೆ ಬಡ ಜನರ ಬಗ್ಗೆ ಅನುಕಂಪವೂ ಇದೆ ಹಾಗೆಯೇ ತಾವು ಶ್ರೀಮಂತರಾಗಬೇಕೆಂಬ ಕನಸೂ ಇದೆ. ಈ ದ್ವಂದ್ವವನ್ನು ಅವರು ಗಾಂಧೀ ಜೀವನಶೈಲಿಯನ್ನು ಅಪ್ಪಿಕೊಳ್ಳುವುದರಿಂದ ಪರಿಹರಿಸಿಕೊಳ್ಳಬಹುದು. ಗಾಂಧೀ ಸರಳವಾಗಿ ಬದುಕಿದರು. ಅವರ ನಡೆನುಡಿಗಳಲ್ಲಿ ವ್ಯತ್ಯಾಸವಿರಲಿಲ್ಲ. ತನ್ನ ಆಂತರಿಕ ಕಾಣ್ಕೆಗೆ ನಿಷ್ಠರಾಗಿದ್ದುದೇ ಅವರ ಸೊಗಸು. ಸಮಾಜವನ್ನು ಕಾಡುತ್ತಿರುವ ಅಸಮಾನತೆ, ದೌರ್ಜನ್ಯ, ಶೋಷಣೆಗಳಿಗೆ ಸರಳ ಸಹಜ ಜೀವನಶೈಲಿಗೆ ಎಲ್ಲರು ಮರಳುವುದೇ ಪರಿಹಾರ ಎಂದು ನಂಬಿದ್ದರು. ಸತ್ಯ ಅಹಿಂಸೆ ಪ್ರಮಾಣಿಕತೆಗಳು ಕಾಲಾತೀತ, ದೇಶತೀತವಾಗಿವೆ. ಇಂದು ಆ ಮೌಲ್ಯಗಳು ಹೆಚ್ಚು ಪ್ರಸ್ತುತವಾಗಿವೆ. ಆರ್ಥಿಕ ಮುನ್ನಡೆಯೊಂದೇ ಮಾನವ ಕುಲದ ಉದ್ಧಾರಕ್ಕೆ

ಕಾರಣವಾಗಲಾರದು. ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಯಾಗಬೇಕಿದೆ. ಇವತ್ತು ನಾವು ನಮ್ಮ ಪರಿಸರವನ್ನು ಹೆಚ್ಚು ಹೆಚ್ಚು ಹಾನಿಗೊಳಿಸುತ್ತಿದ್ದೇವೆ. ನಮ್ಮ ಧೋರಣೆಗಳು ಬದಲಾಗಬೇಕು. ಮೊಟ್ಟಮೊದಲು ಮೌಂಟ್ ಎವರೆಸ್ಟ್ ಶಿಖರ ಹತ್ತಿದ ಎಡ್ಮಂಡ್ ಹಿಲರಿ ಮತ್ತು ತೇನ್‌ಸಿಂಗ್ ತಮ್ಮ ಗುರಿಮುಟ್ಟಿದಾಗ ವಿಭಿನ್ನ ರೀತಿಯಲ್ಲಿ ಪ್ರತಿಕ್ರಿಯಿಸಿದ್ದರು. ಹಿಲರಿ ತಾನು ತಂದಿದ್ದ ಎರಡು ಮೂರು ದೇಶಗಳ ಧ್ವಜವನ್ನು ನೆಟ್ಟು ಗೆದ್ದು ವಶಪಡಿಸಿಕೊಂಡ ಮನೋಭಾವ ತೋರಿದರೆ, ತೇನ್‌ಸಿಂಗ್ ಹಿಡಿ ಮಂಜನ್ನು ತಲೆಯ ಮೇಲೆ ಇಟ್ಟುಕೊಂಡು ಭೂಮಾತೆಗೆ ನಮಿಸಿ ವಿನೀತ ಭಾವ ಪ್ರದರ್ಶಿಸಿದ. ನಾವು ನಮ್ಮ ಕಲುಷಿತ ಧೋರಣೆಗಳನ್ನು ಶುದ್ಧಗೊಳಿಸಿ ಗಾಂಧೀ ವಿಚಾರಧಾರೆಯನ್ನು ಅಪ್ಪಿಕೊಳ್ಳುವ ಮುಖಾಂತರ ಬಂದೆರಗಲಿರುವ ವಿಪತ್ತುಗಳನ್ನು ಸಮರ್ಥವಾಗಿ ಹಿಮ್ಮೆಟ್ಟಿಸಬಹುದೆಂದು ನನಗನ್ನಿಸುತ್ತದೆ."

ಗಾಂಧೀ ವಿಚಾರದ ಕಡೆಗೆ ಆಸಕ್ತಿಯುಳ್ಳ ಯುವಕರಲ್ಲಿ ಶ್ರೀ ದೀಪಕ್ ಮಲಘಾನ್ ಒಬ್ಬರು. ಅವರು ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್- ಬೆಂಗಳೂರಿನಲ್ಲಿ ಪಾಠ ಮಾಡುತ್ತಾರೆ. ಬಹಳ ಸರಳ ವ್ಯಕ್ತಿತ್ವದ, ಮೃದು ಸ್ವಭಾವದ ಯುವಕ ದೀಪಕ್ ಮಲಘಾನ್ ಅವರು ನಾರಾಯಣ ದೇಸಾಯಿಯವರ ಗಾಂಧೀಕಥಾ ಕೇಳಲು ರಜೆ ಹಾಕಿ ಬೆಂಗಳೂರಿನಿಂದ ಮೈಸೂರಿಗೆ ಬಂದಿದ್ದರು. ಸಾಧ್ಯವಾದಾಗಲೆಲ್ಲಾ ದೇಸಾಯಿಯವರನ್ನು ಭೇಟಿಮಾಡಿ ಗಾಂಧೀಜಿಯವರ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದರು. ಮಹದೇವ ದೇಸಾಯಿ ಕುರಿತು ಬರೆದಿರುವ ಮೂರನೆ ಸಂಪುಟ ಕೊಟ್ಟು ಅದರಲ್ಲಿ ನಾರಾಯಣ ದೇಸಾಯಿಯವರ ಸಂದೇಶ ಬರೆದುಕೊಡಲು ವಿನಂತಿಸಿದರು. ಆಗ ನಾರಾಯಣ ದೇಸಾಯಿಯವರು ಈ ರೀತಿ ಸಂದೇಶ ಬರೆದರು:- 'ಸತ್ಯಾಗ್ರಹ, ರಚನಾತ್ಮಕ ಕಾರ್ಯ ಮತ್ತು ಏಕಾದಶ ವ್ರತಗಳು- ಈ ಮೂರು ಗಾಂಧೀಜಿ ಜಗತ್ತಿಗೆ ಕೊಟ್ಟ ಕೊಡುಗೆ'. ಗಾಂಧೀಕಥಾದಲ್ಲಿ ಅವರು ಹೇಳುವ ಸನ್ನಿವೇಶಗಳ ಸಂಗ್ರಹದ ಮೂಲಗಳು ಯಾವವೆಂದು ಕೇಳಲಾಗಿ ವಿವಿಧ ಜನರು ಗಾಂಧೀಜಿ ಕುರಿತು ಬರೆದಿರುವ ಜೀವನಿಗಳು ಮತ್ತು ತೆಂಡೂಲ್ಕರರ ಸಾಹಿತ್ಯ ಹಾಗೂ ಮಹದೇವ ದೇಸಾಯಿಯವರ ಗುಜರಾತಿ ಮೂಲದ ದಿನಚರಿ ಎಂದು ಉತ್ತರಿಸಿದರು. ನಾರಾಯಣ ದೇಸಾಯಿಯವರು ಗಾಂಧೀ ಜೀವನ ಚರಿತ್ರೆಯನ್ನು ಗುಜರಾತಿಯಲ್ಲಿ ಬರೆದಿದ್ದಾರೆ ಅದನ್ನು ಓರಿಯಂಟಲ್ ಲಾಂಗ್‌ಮನ್ ಕಂಪನಿಯವರು ಇಂಗ್ಲಿಷ್‌ನಲ್ಲಿ ಅನುವಾದ ಮಾಡಿಸಿದ್ದಾರೆ ಎಂಬುದಾಗಿ ಸಹಜವಾಗಿ ಮಾತನಾಡುವಾಗ ತಿಳಿಸಿದರು.

ಭಾರತದಲ್ಲಿ ಮಾತ್ರ ಗಾಂಧೀ ಪ್ರಸ್ತುತವೇ ಎಂದು ಕೇಳುತ್ತಾರೆ ವಿದೇಶಗಳಲ್ಲಿ ಇಂಥ ಪ್ರಶ್ನೆ ಕೇಳುವುದಿಲ್ಲ. ಭಾರತೀಯರು ತಾವೇಕೆ ಗಾಂಧಿಗೆ ಪ್ರಸ್ತುತವಾಗಿಲ್ಲ? ಎಂದು ದೇಸಾಯಿ ಕೇಳುತ್ತಾರೆ. ಗಾಂಧೀಜಿ ಪುನರ್ ಜೀವಿತಗೊಳಿಸಬೇಕೆಂದು ಬಯಸಿದ್ದ ಕೈಮಗ್ಗಗಳು ಸ್ವಾತಂತ್ರ್ಯ ಬಂದಮೇಲೆ ಕೇಂದ್ರ ಸರ್ಕಾರವು ಸ್ಥಾಪಿಸಿದ ಖಾದಿ ಗ್ರಾಮೋದ್ಯೋಗ ಆಯೋಗದ ತಪ್ಪು ಮತ್ತು ದೋಷಪೂರ್ಣ ನೀತಿಯಿಂದಾಗಿ ಹಾಗೂ ಆಡಳಿತದಲ್ಲಿಯ ಭ್ರಷ್ಟಾಚಾರದಿಂದಾಗಿ ನಾಶವಾದವೆಂದು ನಾರಾಯಣ ದೇಸಾಯಿ ಒಂದು ಸಲ ಅಭಿಪ್ರಾಯಪಟ್ಟರು.

ಗಾಂಧೀಜಿಯವರ ಮೊದಲ ಸಂಘರ್ಷ ಸಾಮ್ರಾಜ್ಯವಾದದೊಂದಿಗೆ. ಅದು ವರ್ಣ ಭೇದದ ವಿರುದ್ಧವಾಗಿತ್ತೆಂದು ನಾರಾಯಣ ದೇಸಾಯಿಯವರು ತಿಳಿಸಿದರು. ಗಾಂಧೀಜಿ ತನ್ನ ಅಜ್ಞಾನವನ್ನು ಮುಚ್ಚಿಕೊಳ್ಳುವ ವಕೀಲನಾಗಿರಲಿಲ್ಲ. ಗಾಂಧೀಜಿಯಲ್ಲಿಯ ವಕೀಲ ತನ್ನ ಅಜ್ಞಾನವನ್ನು ಮುಚ್ಚಿಡಲು ಇಷ್ಟಪಡುತ್ತಿರಲಿಲ್ಲ. ಹೊಸ ವಿಷಯ ತಿಳಿಯಲು ಬಯಸುತ್ತಿದ್ದ ಎಂಬ ಅಭಿಪ್ರಾಯ ನಾರಾಯಣ ದೇಸಾಯಿ ಅವರದ್ದಾಗಿತ್ತು. ಇನ್ನೊಂದು ಸಲ ಮಾತನಾಡುತ್ತಾ ಹೀಗೆ ಹೇಳಿದರು, "ಗಾಂಧೀಜಿಯವರು ಪತ್ರಿಕೆಗೆ ಬರೆದ ಯಾವುದೇ ಪತ್ರವೂ ನಿರಾಕರಿಸಲ್ಪಡುತ್ತಿರಲಿಲ್ಲ. ಏಕೆಂದರೆ ಅಷ್ಟೊಂದು ವಿಶಿಷ್ಟ ಶೈಲಿಯ ಮತ್ತು ಮಾರ್ಮಿಕ ಪತ್ರ ಅದಾಗಿರುತ್ತಿತ್ತು. ಸಂಪಾದಕರು ಆ ಪತ್ರ ಕುರಿತು ಸಂಪಾದಕೀಯ ಬರೆಯುತ್ತಿದ್ದರೇ ವಿನಃ ಆ ಪತ್ರವನ್ನು ತಿರಸ್ಕರಿಸುತ್ತಿರಲಿಲ್ಲ". ಒಂದು ದಿನ ವಿರಾಮವಾಗಿ ಕುಳಿತಾಗ ನಾರಾಯಣ ದೇಸಾಯಿಯವರು ಹೀಗೆ ಉದ್ಗರಿಸಿದರು, "ಗಾಂಧೀ ಗಂಗಾ ನದಿಯಂತೆ, ಮಹದೇವ್ ದೇಸಾಯಿ ಯಮುನಾ ನದಿಯಂತೆ, ನಾನು ಸರಸ್ವತೀ ನದಿಯಂತೆ. ಗಾಂಧೀ ರಾಮನಾನದರೆ ಮಹದೇವ ದೇಸಾಯಿ ತಮ್ಮನ್ನು ಹನುಮಾನನೆಂದು ಭಾವಿಸಿದ್ದರು. ಆದರೆ ನಾನು ತುಳಸೀದಾಸನಾಗಲು ಬಯಸುತ್ತೇನೆ" ಎಂದು ಹೇಳಿದರು. ನೀವು ಎಲ್ಲ ಕಡೆಗೂ ಅದೇ ಕಥೆಯನ್ನೇ ಐದು ದಿನ, ಒಂದು ವಾರ ಹೇಳುವುದಕ್ಕೆ ಬೇಸರವಾಗುವುದಿಲ್ಲವೇ? ಎಂದು ಕೇಳಲಾಗಿ 'ಹೊಸ ಪ್ರಾಣ'ದಿಂದ ಹೇಳಿದರೆ ಬೇಸರವಾಗುವುದಿಲ್ಲ ಎಂದು ಉತ್ತರಿಸಿದರು.

ಶ್ರೀ ನಾರಾಯಣ ದೇಸಾಯಿಯವರ ಊಟದ ವ್ಯವಸ್ಥೆಯನ್ನು ಮೈಸೂರಿನಲ್ಲಿಯೇ ಹುಟ್ಟಿ ಬೆಳೆದು ಮೈಸೂರಿನವರೇ ಆದ ಗುಜರಾತಿ ಮೂಲದ ಧೀರೇಂದ್ರ ಮೆಹತಾರ ಮನೆಯಲ್ಲಿ ಮಾಡಲಾಗಿತ್ತು. ಶ್ರೀ ಮೆಹತಾ ಭೂ ವ್ಯವಹಾರಕ್ಕೆ ಸಂಬಂಧಿಸಿದ ವಕೀಲರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಹೆಂಡತಿ ಕವಿತಾ ತುಂಬ ಪ್ರೀತಿಯಿಂದ ಐದು ದಿನಗಳ ಕಾಲ ಮೂರೂ ಹೊತ್ತು ಊಟೋಪಚಾರವನ್ನು ಮಾಡಿ ತುಂಬ ಸಹಾಯ ಮಾಡಿದ್ದಾರೆ. ಅವರಿಗೂ ಸಹ ಗಾಂಧೀಜಿಯವರಿಗೆ ಸಂಬಂಧಿಸಿದ ಓರ್ವ ಹಿರಿಯ ವ್ಯಕ್ತಿಯ ಸಂಪರ್ಕವಾದದ್ದು ವಿಶೇಷ ಭಾಗ್ಯವೆನಿಸಿತು. ಊಟದ ಸಮಯದಲ್ಲಿ ಶ್ರೀ ದೇಸಾಯಿಯವರೊಂದಿಗೆ ಗುಜರಾತಿ ಭಾಷೆಯಲ್ಲಿ ಗಾಂಧೀಜಿಯವರಿಗೆ ಸಂಬಂಧಿಸಿದ ಅನೇಕ ವಿಷಯ ತಿಳಿದುಕೊಳ್ಳುತ್ತಿದ್ದರು. ಐದು ದಿನಗಳ ಕಾಲ ಮೆಹತಾ ಮನೆಯವರಿಗೆ ಸಾರ್ವಜನಿಕ ಜೀವನದ ಒಂದು ಪಾಠಶಾಲೆ ನಡೆದಂತಿತ್ತು. ಶ್ರೀ ನಾರಾಯಣ ದೇಸಾಯಿಯವರಂಥ ಮೇಧಾವಿ ಮತ್ತು ಕರ್ಮಠ ವ್ಯಕ್ತಿಯನ್ನು ಅತಿಥಿಯನ್ನಾಗಿ ಒದಗಿಸಿಕೊಟ್ಟದ್ದಕ್ಕಾಗಿ ಮೆಹತಾ ನನಗೆ ಹಲವಾರು ಬಾರಿ ವಂದನೆ ಹೇಳಿದರು. ಆತಿಥ್ಯ ಮಾಡುವುದಲ್ಲದೆ ಪ್ರತಿದಿನವೂ ತಪ್ಪದೆ ಗಾಂಧೀಕಥಾ ಕಾರ್ಯಕ್ರಮದಲ್ಲಿ ಅವರು ಭಾಗವಹಿಸುತ್ತಿದ್ದರು. ತಮಗೆ ಆದ ಅನುಭವ, ಗೊತ್ತಾದ ಹೊಸ ವಿಚಾರ ಇವನ್ನು ಕುರಿತು ಊಟದ ಸಮಯದಲ್ಲಿ ಮಾತನಾಡುತ್ತಿದ್ದರು. ಒಂದರ್ಥದಲ್ಲಿ ಗಾಂಧೀಕಥಾದ ಉಪಯುಕ್ತತೆಯ ಬಗ್ಗೆ ಫೀಡ್‌ಬ್ಯಾಕ್ ದೊರೆತಂತಾಗಿ ನಾರಾಯಣ ದೇಸಾಯಿಯವರಿಗೆ ಸಂತೋಷವಾಗುತ್ತಿತ್ತು. ಮೈಸೂರು ಮತ್ತು ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಕೊಡಲು ನಾರಾಯಣ

ದೇಸಾಯಿಯವರು ಬಯಸುತ್ತಾರೆಂದು ಸ್ಥಳೀಯ ಕಾರ್ಯಕರ್ತರು ಭಾವಿಸಿದ್ದರು. ಆದರೆ ಅವರು ಎಲ್ಲಿಗೂ ಹೋಗಲು ಇಷ್ಟಪಡದೆ, ಅಧ್ಯಯನ, ನೂಲುಗಾರಿಕೆ ಮತ್ತು ಹತ್ತಿರ ಇದ್ದಂಥವರೊಂದಿಗೆ ಮಾತುಕತೆಯಲ್ಲಿ ಮತ್ತು ಕಥಾದ ಸಿದ್ಧತೆಯಲ್ಲಿ ಕಾಲಕಳೆದರು. ಶ್ರೀ ನಾರಾಯಣ ದೇಸಾಯಿಯವರ ಕರ್ನಾಟಕದ ಭೇಟಿಯನ್ನು ಸರ್ವೋದಯ ಆಂದೋಲನದ ಬಲಸಂವರ್ಧನೆಗೆ ಉಪಯೋಗಿಸಿಕೊಳ್ಳಬೇಕೆಂಬ ಕನಸು ಕನಸಾಗಿಯೇ ಉಳಿಯಿತು. ನನಸಾಗಲಿಲ್ಲ. ವ್ಯಥೆ ಎನಿಸಿತು. ಆದರೂ ಸಹ ನಾರಾಯಣ ದೇಸಾಯಿಯವರ ಸಂಪರ್ಕದಿಂದ ಹೊಸ ಉತ್ಸಾಹ ಮೂಡಿತು. ಅವರ ಕಥಾದ ಕಾರ್ಯಕ್ರಮದ ಕೊನೆ ದಿನವೇ ನಾನು ರಕ್ತ ಒತ್ತಡದ ಕಾರಣದಿಂದ ಆಸ್ಪತ್ರೆ ಸೇರಬೇಕಾಯಿತು. ಆದಾಗ್ಯೂ ಇಂದಲ್ಲ ನಾಳೆ ಆರೋಗ್ಯ ಸುಧಾರಣೆಯಾದ ಮೇಲೆ ಗಾಂಧೀಯವರ ಆಶೀರ್ವಾದದಿಂದ ಸರ್ವೋದಯ ಆಂದೋಲನವನ್ನು ಕಟ್ಟಲು ಪ್ರಯತ್ನ ಮಾಡುವೆನೆಂಬ ಆಶಾ ಭಾವನೆ ಹೊಂದಿದ್ದೇನೆ. ೧೯೩೪ರ ಜುಲೈನಲ್ಲಿ ಮೈಸೂರಿಗೆ ಗಾಂಧೀಜಿ ಭೇಟಿಕೊಟ್ಟಿದ್ದರು. ಅದೊಂದು ಐತಿಹಾಸಿಕ ಭೇಟಿಯಾಗಿತ್ತು. ಆ ನಂತರ ಮೈಸೂರು ನಗರಕ್ಕೆ ಭೇಟಿ ಕೊಟ್ಟಂಥ ಗಾಂಧೀ ಪರಿವಾರಕ್ಕೆ ಸೇರಿದ ವ್ಯಕ್ತಿ ನಾರಾಯಣ ದೇಸಾಯಿ. ಅವರು ಮಹದೇವ ದೇಸಾಯಿಯವರ ಪುತ್ರರಷ್ಟೇ ಅಲ್ಲ ಶಿಕ್ಷಣ ತಜ್ಞರಾಗಿ ವಿಶ್ವವಿದ್ಯಾನಿಲಯದ ಸ್ಥಾನಮಾನ ಹೊಂದಿರುವ ಗುಜರಾತ್ ವಿದ್ಯಾಪೀಠದ ಉಪಕುಲಪತಿಯಾಗಿದ್ದರು. ಅಖಿಲ ಭಾರತ ಶಾಂತಿ ಸೇನಾ ಮಂಡಲಿಯ ಸಂಸ್ಥಾಪಕರು. ಜಯಪ್ರಕಾಶ್ ನಾರಾಯಣರ ವಿಚಾರ ಆಧಾರಿತ ಸಂಪೂರ್ಣ ಕ್ರಾಂತಿ ವಿದ್ಯಾಲಯದ ಸಂಸ್ಥಾಪಕರು. ಜನತಾ ಸರ್ಕಾರ ರಚನೆಯಾಗುವುದರಲ್ಲಿ ಮಹತ್ವದ ಪಾತ್ರ ವಹಿಸಿದವರು. ಇಡೀ ಗುಜರಾತನ್ನು ವಿನೋಬಾ ಭಾವೆಯವರ ಭೂದಾನ ಆಂದೋಲನ ನಿಮಿತ್ತ ಪಾದಯಾತ್ರೆ ಮಾಡಿ ಲಕ್ಷಾಂತರ ಭೂ ಹೀನರಿಗೆ ಭೂಮಿಯನ್ನು ಹಂಚಿ ಮಹಾನ್ ಸಾಧನೆ ಮಾಡಿದವರು. ಇಂಥ ವ್ಯಕ್ತಿಯ ಭೇಟಿಯನ್ನು ಮೈಸೂರು ನಗರದ ಜನತೆ ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲ ಎಂಬ ವ್ಯಥೆ ಇದೆ. ಮೈಸೂರು ವಿಶ್ವವಿದ್ಯಾನಿಲಯದ ಅತಿಥಿಗೃಹದದಲ್ಲಿ ಅವರು ಐದು ದಿನ ತಂಗಿದ್ದರು. ಅವರು ಅಲ್ಲಿ ತಂಗಿರುವ ವಿಚಾರ ಪತ್ರಿಕೆಗಳ ಮೂಲಕ ಪ್ರಚುರ ಪಡಿಸಲಾಗಿತ್ತು. ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು ನಾರಾಯಣ ದೇಸಾಯಿಯವರನ್ನು ಭೇಟಿ ಮಾಡಲು ಬರಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ನಿರೀಕ್ಷಿಸಿದಷ್ಟು ಜನರು ದೇಸಾಯಿಯವರನ್ನು ಭೇಟಿ ಮಾಡಲು ಬಾರದಿದ್ದದ್ದು ವಿಷಾದವೆನಿಸಿತು. ಅದೇ ಒಬ್ಬ ರಾಜಕಾರಣಿ ಅಥವಾ ಕೇಂದ್ರ ಸರ್ಕಾರದ ಮಂತ್ರಿ ಬಂದಿದ್ದರೆ ಇಂಥ ಸ್ಥಿತಿ ಇರುತ್ತಿತ್ತೇ ಎಂಬ ಪ್ರಶ್ನೆ ಕಾಡುತ್ತದೆ.

ಗಾಂಧೀಕಥಾ ಕಾರ್ಯಕ್ರಮದ ಯಶಸ್ಸಿಗೆ ಮೈಸೂರು ನಗರದ ವಿಜಯ ವಿಠಲ, ಮಹಾಜನ, ಸದ್ವಿದ್ಯಾ, ಪ್ರಮತಿ ಮತ್ತು ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಇವರಿಗೆ ಎಲ್ಲ ಶ್ರೇಯಸ್ಸು ಸಲ್ಲುತ್ತದೆ.

ಜಿ.ವಿ.ಎಂಬ ಸ್ನೇಹ ಜೀವಿ

– ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ

ಕ್ಯಾಲೆಂಡರ್ ಮಗುಚುತ್ತಿದ್ದರೆ ಯಾರದ್ದೇ ಆಗಲಿ ಆಯುರ್ಮಾನದ ಎಣಿಕೆ ಏರುತ್ತಾ ಹೋಗುತ್ತದೆ. ಆದರೆ 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ' ಎನ್ನುವ ಔಪನಿಷದ ಆದೇಶವನ್ನು ಪಾಲಿಸುವ ಸಾಧ್ಯತೆ (ಕರ್ಮ ಮಾಡುತ್ತಾ ಮಾಡುತ್ತಾ ಶತಂಜೀವಿಯಾಗಬೇಕು) ಇರುವ ಯೋಗ–ಹೇಗೂ ನಮ್ಮ ಕೈಯಲ್ಲಿಲ್ಲ, ಇದ್ದರೂ ಉಳಿಸಿಕೊಳ್ಳುವ ಮನಃಸಿದ್ಧಿ ಇನ್ನೂ ಕಡಮೆ. ಜಿ. ವೆಂಟಸುಬ್ಬಯ್ಯ ತಮ್ಮ ಮೊಮ್ಮಕ್ಕಳಿಗಿಂತ ಹೆಚ್ಚು ಲೋಕ ಕುತೂಹಲವನ್ನು, ಲೋಕಾನುಸಂಧಾನವನ್ನು, ಲೋಕಸಂಬಂಧವನ್ನು fresh ಆಗಿ ದಿನದಿನ ಜಾರಿಯಲ್ಲಿಟ್ಟಿದ್ದಾರೆ. ಎಷ್ಟೇ ಲಿಖಿತ ಆಧಾರಗಳನ್ನು ತಂದು ಸುರುವಿ ಈ ಮನುಷ್ಯನಿಗೆ ನೂರಾಗಿದೆ ಎಂದು ಒರಲಿದರೂ ಒಪ್ಪಿಕೊಳ್ಳುವ ಸಂದೇ ಇಲ್ಲದ ಸಂದೇಹಾತೀತ ಆಯುರ್ದಾರ್ಢ್ಯ ಜಿ.ವಿ.ಯವರದು.

ನನಗೆ ಜಿ.ವಿ.ಯವರು 'ನಿಕಟ' ಎನ್ನಬಹುದಾದ ಪರಿಚಯ ಈಚಿನ ೭–೮ ವರ್ಷಗಳದ್ದು. ಸರಿಸುಮಾರು ನನ್ನ ಎರಡುರಷ್ಟು ವಯಸ್ಸಿನ ಜಿ.ವಿ.ಯವರನ್ನ ಹಿರಿತನದ ನೆಲೆಯಲ್ಲಿ ತಾತ, ಅಜ್ಜ ಅಂತ ಕರೆಯಬೇಕಾದ್ದು ಸಾಮಾಜಿಕ ವ್ಯವಹಾರನ್ಯಾಯ. ಆದರೆ ಅಸಲು ಸಂಗತಿ ಬೇರೆಯೇ ಇದೆ. ಯಾರೇ ಅವರ ಜೊತೆ ಬೇಟಿ ಮಾಡಿ ಗಂಟೆಗಟ್ಟಲೆ ಹರಟೆ ಹೊಡೆಯಲಿ, ಅಷ್ಟು ಹೊತ್ತೂ ಅವರನ್ನು ತಾತ ಅಂತಲೋ ಅಜ್ಜ ಅಂತಲೋ ಸಂಬೋಧಿಸುವ ಸ್ಫುರಣೆಯೇ ಬರುವುದಿಲ್ಲ. ಅವರ ದೇಹ, ಮಾತು, ಮನಸ್ಸು ಇಂತಹ ಉದ್ಗಾರಕ್ಕೆ ಆಸ್ಪದವನ್ನೇ ಕೊಡುವುದಿಲ್ಲ. ಪಂಚಾಂಗದ ಪ್ರಕಾರ ವರ್ಷ ನೂರಾಗಿದೆ, ಮನಸ್ಸಿನ ಪಂಚಾಂಗ (ಜ್ಞಾನೇಂದ್ರಿಯ) ದೇಹದ ಪಂಚಾಂಗ (ಕರ್ಮೇಂದ್ರಿಯ) ಅದೆಲ್ಲೋ ನಡುದಾರಿಯಲ್ಲಿ ಗಡದ್ದಾಗಿ ನಿಟಾರಾಗಿ ನಿಂತುಬಿಟ್ಟಿದೆ. ತೀರ ದೂರದಿಂದ, ಅಪರೂಪಕ್ಕೊಮ್ಮೆ ಕಾಣುವವರಿಗೆ ಜಿ.ವಿ.ಯವರ ಜೀವಿತ ವಿಸ್ಮಯಮಂಜೂಷಗುತ್ತದೆ. ಹತ್ತಿರದಿಂದ ನೋಡುವವರಿಗೆ, ಅವರ ಮನಃಪಾಕ ಅನುಭವಕ್ಕೆ ಬಂದವರಿಗೆ, 'ಹೀಗೂ ಇರಲು ಸಾಧ್ಯ, ನಮಗೆ ಆಗುತ್ತಿಲ್ವಲ್ಲಾ' ಅಂತ ಹಳಹಳಿಕೆ ಹುಟ್ಟುತ್ತದೆ. ಹೀಗೂ ಇರಲು ಸಾಧ್ಯವೆಂದರೆ ಹೇಗೆ? ನಾನು ಅವರ ಜೊತೆ ಒಡನಾಡಿದ ಕೆಲವೇ ಕೆಲವು ಘಟನೆಗಳ ಮೂಲಕ, ಮುಪ್ಪು ಮೂಡದ ಮರ್ಮವನ್ನು–ನಾನು ಕಂಡಂತೆ–ಚಿತ್ರಿಸುತ್ತೇನೆ.

'ಉತ್ಥಾನ'ದ ಪರವಾಗಿ ಸಂದರ್ಶನ ಕ್ಕೆಂದು ಅವರ ಮನಗೆ ಹೋಗಿದ್ದೆ. ಸ್ವಲ್ಪಹೊತ್ತಿನಲ್ಲಿ ಬಿಳಿಪಂಚೆ ಬಿಳಿ ಬನಿಯನ್ನಿನಲ್ಲಿ ಜಿ.ವಿ. ಹಜಾರಕ್ಕೆ ಬಂದು 'ನಿನ್ನೆ ಮೂರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೆ. ಯಾರದೋ ಆಯುಷ್ಯಹೋಮ, ಅರೋಗ್ಯವಂತ ಹಿರಿತಲೆಯವರು ತಲೆ ಮೇಲೆ ಮಂತ್ರಾಕ್ಷತೆ ಹಾಕಿದರೆ ಆಯುಷ್ಯ ಆರೋಗ್ಯ ಕುದುರತ್ತೆ ಅಂತ ನನ್ನನ್ನ ಕರೆದುಕೊಂಡು ಹೋಗಿದ್ದರು–ಸಂಬಂಧಿಕರೇ.

ಅಲ್ಲಿ ಹೊಗೆಯೋ ಹೊಗೆ. ಆಯುಷ್ಯ ಹೆಚ್ಚಾಗುತ್ತೋ ಇಲ್ಲವೋ ಹೊಗೆ ಅಂತೂ ಹೆಚ್ಚೋ ಹೆಚ್ಚಾಯ್ತು. ಇವತ್ತು ಬೆಳಗಿನಿಂದಲೂ ಸುಸ್ತು (ಆಗ ೧೧ ಗಂಟೆ). ಕೊಂಚ ಗಿಡ್ಡಿನೆಸ್ ಇದೆ. 'ಗಿಡ್ಡಿ' ಕನ್ನಡದ್ದಲ್ಲ ಸ್ವಾಮಿ, ಇಂಗ್ಲಿಷಿಂದು. ನೋಡಿ ಎಂಥ ವಿಪರ್ಯಾಸ, ಈ ವಯಸ್ಸಲ್ಲಿ ವೆಂಕಟಸುಬ್ಬಯ್ಯನಿಗೆ 'ತಲೆ ತಿರುಗ್ತಾ ಇದೆ' – ಅಂತ ಹೇಳ್ತಾ ಶುಭ್ರವಾಗಿ ನಗುತ್ತಾ 'ಕೊಂಚ ವಿಶ್ರಾಂತಿ ತಗೊಂಡು ಬರ್ತೇನೆ. ಹತ್ತು ನಿಮಿಷ. ಕ್ಷಮಿಸಿ' ಅಂದರು. ತನ್ನ ಮನೋದೇಹದ ಬಳಲಿಕೆಯನ್ನು ಹೇಳುವುದರಲ್ಲೂ ಶಬ್ದಜೀವಿಯ ಲವಲವಿಕೆ. ಅಷ್ಟು ಹಿರಿಯರಾದರೂ ನಮ್ಮಂತಹ ಪಡ್ಡೆಗಳಲ್ಲಿ 'ಕ್ಷಮಿಸಿ' ಎನ್ನುವ ದೊಡ್ಡತನ. ಇಂತಹ ಮುಗ್ಧತೆ, ವಿನೋದಶೀಲತೆ ಇರುವಾಗ ಮುದಿತನ ಬರಲು ಬಾಗಿಲಾದರೂ ಎಲ್ಲಿದೆ?

ಮೈಕೋ ಚಂದ್ರು–ನಾಟಕ ಸಿನಿಮಾ ಟಿವಿ ರಂಗದಲ್ಲಿ ಪರಿಚಿತ ವ್ಯಕ್ತಿ. ನನಗೂ ಅವರಿಗೂ ೨೫ ವರ್ಷದ ಗಾಢಸ್ನೇಹ. ದುರ್ದೈವ, ಚಂದ್ರುವನ್ನು ಜೀವಿತಾವಧಿಯಲ್ಲೇ ನರಕದ ಎಲ್ಲಾ ಬಾವಿಗಳಲ್ಲೂ ಇಳಿಸಿ ಬೆಂಡತ್ತಿತ್ತು. ತನ್ನ ಮರಣಶಾಸನದ ತಾಜಾ ಪ್ರತಿಯನ್ನು ಕೈಯಲ್ಲಿ ಹಿಡಿದುಕೊಂಡೇ ಡಯಾಲಿಸಿಸ್ಸಿನ ಬರ್ಬರ ಚಿಕಿತ್ಸೆಯ ಪಾಶವೀಯಾತನೆಯಲ್ಲಿ ಸಾವಿನ ಸೈರನ್ನಿನ ನಿರೀಕ್ಷೆಯಲ್ಲಿದ್ದರು. ಚಂದ್ರುವಿಗೆ ಒಂದು ನಾಟಕ ತೋರಿಸಿ ಆಪ್ತರಿಂದ ಸಂಮಾನ ಮಾಡುವ ಸಂಕಲ್ಪ ಮಾಡಿದೆ. 'ಮಧ್ಯಮ ವ್ಯಾಯೋಗ'ದ ಕನ್ನಡ ಅನುವಾದ ಮಾಡಿದ್ದೆ. ಅದರದೇ ನಾಟಕ ಎಚ್.ಎನ್.ಕಲಾಕ್ಷೇತ್ರದಲ್ಲಿ. ಭಾಸನ ನಾಟಕದ ಕನ್ನಡದ ರೂಪಂತರವನ್ನು ಚಂದ್ರವಿಗೆ ಅರ್ಪಿಸಲಿಕ್ಕಿತ್ತು, ಹಾಗೂ ವೇದಿಕೆಯಲ್ಲಿ ಸಂಭ್ರಮದಿಂದ ಅಭಿನಂದಿಸಲಿಕ್ಕಿತ್ತು. ಅದಕ್ಕಾಗಿ ಜಿ.ವಿ.ಯವರನ್ನೇ ಕೇಳೋಣ ಅಂತ ಅವರ ಮನೆಗೆ ಹೋದೆ. ವಿಷಯ ಎಲ್ಲ ಹೇಳಿದೆ. "ಚಂದ್ರು ಗೊತ್ತು, ನಾಟಕಗಳಲ್ಲಿ ಸಾಕಷ್ಟು ಮಾಡಿದಾನೆ. ಎಂಥ ದುಃಸ್ಥಿತಿ ಬಂದು ಬಿಟ್ಟಿತು. ಚಟುವಟಿಕೆಯಲ್ಲಿದ್ದ ಜೀವ ಎಷ್ಟು ಚಡಪಡಿಸುತ್ತೋ! ಖಂಡಿತಾ ಬರ್ತೇನೆ. ಇದು ನಮ್ಮ ಕರ್ತವ್ಯ. ಉಸಿರು ಇರೋ ಕ್ಷಣದವರೆಗೂ ಅಂತಹವರನ್ನ ನಮ್ಮವರನ್ನಾಗಿ ನಡೆಸ್ಕೊಳ್ಳಬೇಕು. ದಿನಾಂಕ ನಿಶ್ಚಯ ಮಾಡಿ" ಅಂದರು. ನಾಟಕ ಮುಗಿದ ಮೇಲೆ ಜಿ.ವಿ.ಯವರೇ ಶಾಲು ಹಣ್ಣು ಕೊಟ್ಟದ್ದಲ್ಲದೇ, ತಮ್ಮ ಮನೆಯಿಂದ ಒಂದು ಒಳ್ಳೇ ಶಾಲನ್ನು ತಂದದ್ದನ್ನು ಹೊದೆಸಿದರು. ಸಾಯುವವನಿಗೂ ಬದುಕಿರುವಷ್ಟು ಕಾಲ ಖುಷಿ ಊರುವಂತೆ ಆಪ್ತವಾಗಿ ಚುಟುಕಾಗಿ ಭಾಷಣವನ್ನೂ ಮಾಡಿದರು. ಅದನ್ನು 'ತನ್ನ ಜೀವನದ ಅವಿಸ್ಮರಣೀಯ ಕ್ಷಣ' ಅಂತ ಚಂದ್ರು ಕಡೆತನಕ ನೆನೆಸಿಕೊಳ್ಳುತ್ತಿದ್ದರು. ಜಿ.ವಿ.ಯವರ ಮಾನುಷಸ್ಪಂದನ ಅಷ್ಟು ಸಹಜವಾದದ್ದು, ನಿರಾಡಂಬರವಾದ್ದು. ಇನ್ನೊಬ್ಬರ ನೋವಿಗೆ ತುಡಿಯುವವನ ಕಡೆ ಹಾಯುವ ಧೈರ್ಯ ಯಾವ ಮುಪ್ಪಿಗಿದೆ?

ಲೋಖಾಭಿರಾಮದ ಪಟ್ಟಾಂಗ ಕೊಚ್ಚಿ ಇಳಿಸುತ್ತಿದ್ದ ಒಂದು ಸಂಜೆ, ಪ್ರಾಸಂಗಿಕವಾಗಿ ದಕ್ಷಿಣಕನ್ನಡ, ಗೋವಿಂದ ಪೈ, ಶಿವರಾಮ ಕಾರಂತ, ಸೇಡಿಯಾಪು ಕೃಷ್ಣಭಟ್ಟ ಮೊದಲಾದ ಮಹನೀಯರ ಒಟ್ಟಿಗಿದ್ದ ಸಾಮೀಪ್ಯ ಸಂಬಂಧ ಭೇಟಿಗಳ ನೆನಪಿನ ತೇರಿನಲ್ಲಿ ಜಿ.ವಿ. ಸವಾರಿ ಹೊರಟಾಗ, ಕರಾವಳಿ ಮಂದಿಯ ಭಾಷಾಶುದ್ಧತೆ ಸ್ಪಷ್ಟೋಚಾರವನ್ನು ಪ್ರಶಂಸಿಸಿ, 'ಅದಕ್ಕೆ ಮುಖ್ಯ ಕಾರಣ ಕರಾವಳಿ ಅಂಚಿನ

ಯಕ್ಷಗಾನ' ಅಂದವರೇ 'ಉಪಾಧ್ಯಾಯರೇ, ತಾಳಮದ್ದಳೆ ಕೇಳ ಬೇಕಲ್ಲ, ಸಾಧ್ಯವೇ?' ಅಂತ ಕೇಳಿದರು. ತಿಂಗಳೊಪ್ಪತ್ತಲ್ಲಿ ಎಸ್.ಆರ್.ರಾಮಸ್ವಾಮಿಯವರ ಸೌಹಾರ್ದದಲ್ಲಿ ಗೋಖಲೆ ಸಂಸ್ಥೆಯಲ್ಲಿ ತಾಳಮದ್ದಳೆ ನಿಶ್ಚಯವಾಯಿತು. 'ಜಿ.ವೆಂಕಟಸುಬ್ಬಯ್ಯನವರ ಗೌರವಾರ್ಥ' ಅಂತಲೇ ಕಾರ್ಯಕ್ರಮದಲ್ಲಿ ನಮೂದಿಸಲಾಗಿತ್ತು. 'ಕೃಷ್ಣಸಂಧಾನ' ಪ್ರಸಂಗ. ನನ್ನ ಅಣ್ಣ ದಿ॥ಕೊರ್ಗಿ ವೇಂಕಟೇಶ ಉಪಾಧ್ಯಾಯ, ಮೇಲುಕೋಟೆ ಉಮಾಕಾಂತ ಭಟ್ಟರು, ದಿವಾಕರ ಹೆಗಡೆ ಭಾಗವಹಿಸಿದ್ದರು. ಸುಮಾರು ಮೂರೂವರೆ ಗಂಟೆ ಕಾಲ ಬಿರುಸಿನ ಹೊಯ್ ಕೈಯ ಮಾತಿನ ಸೆಣಸಾಟದ 'ಕೂಟ' ನಶೆ ಏರಿಸಿತ್ತು. ಮೊದಲ ಸಾಲಲ್ಲಿ ಕುಳಿತ ಜಿ.ವಿ. ಸರ್ವಾತ್ಮನಾ ಎಚ್ಚರದಿಂದ ವಾಕ್ಯವಾಕ್ಯವನ್ನೂ ಹದ್ದುಗಣ್ಣಿಂದ ಇರಿದು ಕೇಳುತ್ತಿದ್ದರು. 'ಜಿ.ವಿ.' ಇದ್ದಾರೆ ಅನ್ನುವ ಅಮಿತೋತ್ಸಾಹದಲ್ಲಿ ಅರ್ಥಧಾರಿಗಳು ಕೇಶಿರಾಜರೇ ಆಗಿಬಿಟ್ಟಿದ್ದರು. ಶಾಸ್ತ್ರ ಕಾವ್ಯ ನ್ಯಾಯ ವ್ಯಾಕರಣ ಸಂಹಿತೆಗಳ ಬಾಣ ಬಿರುಸು ಮತಾಪು. ಜಿ.ವಿ.ಯವರ ೯೫ರ ದೇಹ ಎಲ್ಲಿ ಆಯಾಸಗೊಳ್ಳುತ್ತದೋ ಎಂಬ ಆತಂಕದಿಂದ ಆಗಾಗ ಅವರತ್ತ ಲಕ್ಷ್ಯ ಕೊಡುತ್ತಿದ್ದ ನನಗೆ ಕಂಡದ್ದು, ಎಂಟಾಣೆ ಟಿಕೇಟಿನ ಗಾಂಧಿಕ್ಲಾಸಿನಲ್ಲಿ ಕುಳಿತು ಯಕ್ಷಗಾನ ನೋಡುವ ಪಡ್ಡೆಹುಡುಗನ ಉಮೇದಿನ ಕುಣಿಗಣ್ಣು, ತೆರೆಬಾಯಿ, 'ವ್ಹಾರೆ ವ್ಹಾ' ಅಂತ ಯಾವ ಎಗ್ಗಿಲ್ಲದೇ ಉದ್ಗರಿಸುವ ತಾಜಾ ರಸಿಕತನ. ಸಮಾರೋಪದಲ್ಲಿ ಜೀವಿ ತಮ್ಮ ಚೀಲದಿಂದ ಒಂದು ಜಬರದಸ್ತು ಶಾಲು ಹೊರತೆಗೆದರು. ಪ್ರೇಕ್ಷಕರತ್ತ ತಿರುಗಿ "ಎಂಥಾ ಒಳ್ಳೆ ಔತಣ ಹಾಕಿದರು ಇವರು. ೫೦ ವರ್ಷದ ಹಿಂದೆ ಕಾಸರಗೋಡಿನಲ್ಲಿ ತಾಳ ಮದ್ದಳೆ ಕೇಳಿದ್ದೆ. ಆವತ್ತು ಶೇಣಿ ಗೋಪಾಲ ಕೃಷ್ಣ ಭಟ್ಟರು ಅರ್ಥ ಹೇಳಿದ್ರು. ಈ ಕಲಾವಿದರ ಮಾತು ಕೇಳಿದರೆ ನನ್ನಂತಹವನಿಗೆ, ಇನ್ನೂ ಕೊಂಚ ವರ್ಷ ಕನ್ನಡ ಸಾಯೋದಿಲ್ಲ ಅಂತ ಭರವಸೆ ಮೂಡುತ್ತೆ. ಎಷ್ಟು ಸೊಗಸಾದ ಶೈಲಿ, ಎಂತಹ ಧಾರೆ, ಪೌರಾಣಿಕ ಆವರಣ ಕಟ್ಟುವ ಕೌಶಲ! ಇದೊಂದೇ ಪ್ರಕಾರದಲ್ಲಿ (ಯಕ್ಷಗಾನದಲ್ಲಿ) ಭಾಷೆ ತನ್ನ ಶುದ್ಧಿ ಉಳಿಸಿಕೊಂಡಿರೋದು. ನನಗನಿಸುತ್ತೆ, ಇಷ್ಟು ವರ್ಷ ಈ ವೆಂಕಟಸುಬ್ಬಯ್ಯ ಬದುಕಿದ್ದು ಸಾರ್ಥಕವಾಯ್ತು ಇವತ್ತು. ಇಂತಹ ಕಲಾವಿದರನ್ನ ಹೇಗೆ ಗೌರವಿಸಿದರೂ ಕಡಮೆಯೇ. ನಾನೊಂದು ಎಡವಟ್ಟು ಮಾಡಿದ್ದೇನೆ. ಒಂದೇ ಒಂದು ಶಾಲು ತಂದಿದ್ದೇನೆ. ಯಾರಿಗೆ ಹಾಕಲಿ?" ಅಂತ ಎತ್ತರ ಬಿತ್ತರ ಹಮ್ಮುಬಿಮ್ಮು ಯಾವುದೂ ಇಲ್ಲದೇ ಶಾಲು ಹಿಡಿದು ನಿಂತರು. ಕಲೆಯನ್ನು, ಅದರಲ್ಲೂ ಭಾಷಾಸಂಬಂಧವಾದ ಶುದ್ಧತೆಯನ್ನು ಪಾಂಡಿತ್ಯದ ಪೊಗರೇ ಇಲ್ಲದೇ ಆಸ್ವಾದಿಸುವ ವಿನಯ ಇರುವಾಗ ಯಾವ ಮುಪ್ಪು ಸುಳಿದೀತು?

ಇನ್ನೊಮ್ಮೆ ಕಟ್ಟೆ ಪಂಚಾಯತಿಯ ಭರಾಟೆಯಲ್ಲಿ ಸುಗಮಸಂಗೀತ ಶ್ರುತಿಗೊಳ್ಳಬೇಕೇ? ಬಿ.ಎಂ.ಶ್ರೀಯಿಂದ ಕಾಳಿಂಗರಾಯರವರೆಗೂ ಸುತ್ತಾಟ ಮುಗಿಯಿತು. ತೇ ಹಿ ನೋ ದಿವಸಾಃ ಗತಾಃ ಅಂತ ನಿಟ್ಟುಸಿರಾದರು. 'ಭಾವಗೀತೆ ಕೇಳಬೇಕಾ ಸರ್, ಗರ್ತಿ ಕೆರೆ ರಾಗಣ್ಣನವರು ಗೊತ್ತಲ್ವಾ' ಅಂದದ್ದಷ್ಟೇ ನಾನು, ಯಾವ ವರ್ಷ ಯಾವ ಸಂದರ್ಭ ಯಾವ ವೇದಿಕೆಯಲ್ಲಿ ರಾಗಣ್ಣ ಸಿಕಿದ್ದರು ಅಂತ ಸರ್ಚ್ ಕೀ ಆಪರೇಷನ್ನಿಗಿಂತಲೂ ವೇಗವಾಗಿ ಹೇಳಿ 'ಅರೇಂಜ್ ಮಾಡಿ, ಕೇಳೋಣ' ಅಂದರು. 'ನಿಮ್ಮ ಮನೆಯಲ್ಲೇ ಶ್ರುತಿಸೇವೆ ನಡೆದರೆ ಆಗಬಹುದೋ?' ಅಂದೆ.

'ಮನೆಯಲ್ಲೂ ಬಂದು ಹಾಡುವ ಕಲಾವಿದರು ಇದ್ದಾರೆಯೇ? ಬಂದರೆ ತುಂಬಾ ಸಂತೋಷ. ಬೇಕಾದ ಹಾಗೆ ಕೇಳುವ ಸ್ವಾತಂತ್ರ್ಯವೂ ಇರತ್ತೆ' ಅಂದರು. ಕೆಲವೇ ದಿನದಲ್ಲಿ ಜಿ.ವಿ.ಯವರ ಮನೆಯಲ್ಲಿ ಏರ್ಪಾಡಾಯ್ತು. ತಬಲಾ, ಹಾರ್ಮೋನಿಯಂ ಸಹವಾದನ. ತಮ್ಮ ಆಪ್ತ ವಲಯಕ್ಕೆ ಜಿ.ವಿ.ಬರಹೇಳಿದ್ದರು. ಸುಮಾರು ಎರಡೂವರೆ ಗಂಟೆ ರಾಗಣ್ಣ, ಅವರ ಮಗಳು ಶ್ರೀದೇವಿ ಒಂದಾದ ಮೇಲೆ ಒಂದರಹಾಗೆ ನವೋದಯ ಕವಿಗಳ ಅಕ್ಷರಶಃ ಭಾವಗೀತೆ ಹಾಡಿದರು. ಅದು ಮನೆ ಆದ್ದರಿಂದ, ಹಾಡಿಕೆಯ ನಡುವೆ 'ಓ ಇವರು ಇದನ್ನ ಹೀಗೆ ಹಾಡುತ್ತಿದ್ದರು' ಅಂತಲೋ 'ಈ ಹಾಡಿನ ಹಿಂದೆ ಒಂದು ಕತೆ ಇದೆ' ಅಂತಲೋ ಜಿ.ವಿ. ಪ್ರತಿಕ್ರಿಯಿಸುವವರು. ಡಿವಿಜಿ ಅವರ 'ವನಸುಮ' ಹಾಡು ಶುರುವಾಯಿತು. 'ಇದನ್ನ ಅಠಾಣದಲ್ಲಿ ಹಾಡುತ್ತಿದ್ದರು. ಅದಕ್ಕೆ ಮೊದಲು ಟ್ಯೂನ್ ಮಾಡಿದವರು.....ಇವರು. ನೀವು ಬೇರೆ ರಾಗ ಹಾಕಿದ್ದಿರಿ, ಒಳ್ಳೇದು. ಇದೇ ಹೆಚ್ಚು ಸೂಕ್ತ ಅಂತ ಕಾಣುತ್ತೆ. ಪದ್ಯದ ಭಾವಕ್ಕೆ ಈ ರಾಗವೇ ಹೆಚ್ಚು ಹೊಂದುತ್ತೆ. ಡಿವಿಜಿ ಕೇಳಿದ್ದರೂ ಒಪ್ಪುತ್ತಿದ್ದರು' ಅಂತ ಪ್ರಶಂಸಿಸಿದರು. ಕೊನೆಗೆ ಎಲ್ಲ ಕಲಾವಿದರಿಗೆ ಶಾಲು – ಹಣ್ಣು, ಹೊಟ್ಟೆ ತುಂಬಾ ಉಪಾಹಾರ. ಹಾಡಿನಿಂದ ಹಿಗ್ಗುವವನ ರಸಿಕತೆಯ ಸನಿಹ ಯಾವ ಮುಪ್ಪು ಮೂತಿ ತೂರೀತು?

ಡಾ.ಎಸ್.ಎಲ್.ಭೈರಪ್ಪ ಅವರ 'ಮಂದ್ರ' ಕಾದಂಬರಿಯನ್ನು ನಾಟಕವಾಗಿ ರಂಗರೂಪಕ್ಕಿಳಿಸಿದ್ದೆ. ಕಲಾಗಂಗೋತ್ರಿ ತಂಡದಿಂದ ಅದರ ಹಲವು ಪ್ರದರ್ಶನವಾಗಿತ್ತು. ಜಿ.ವಿ.ಯವರು 'ಮಂದ್ರ' ನೋಡುತ್ತಾರೋ ಇಲ್ಲವೋ ಎಂಬ ಅನುಮಾನದಿಂದಲೇ ಕೇಳಿದಾಗ ಬರುತ್ತೇನೆ ಅಂತ ಮದುಮಗನ ಗೆಟಪ್ಪಲ್ಲಿ ಚಿಗಿದು ನಿಂತೇ ಬಿಟ್ಟರು. ಒಟ್ಟು ಎರಡು ಬಾರಿ 'ಮಂದ್ರ'ವನ್ನು ಜಿ.ವಿ.ನೋಡಿದ್ದಾರೆ. ಅವರು ಯಾವತ್ತೂ ಬಾಯಿಸತ್ತ ಪ್ರೇಕ್ಷಕ ಅಲ್ಲ. ನೋಡಿದ್ದರ ಬಗ್ಗೆ ಅಭಿಪ್ರಾಯ, ಮೆಚ್ಚುಗೆಯನ್ನು ಬಾಯಾರೆ ಸಮೃದ್ಧವಾಗಿ ಹೇಳಬೇಕು, ಆಗಲೇ ಅವರಿಗೆ ನೆಮ್ಮದಿ. ೨೦೧೧ ಜೂನ್ ೨೮ರಂದು 'ಮಂದ್ರ' ಪ್ರಯೋಗ ರಂಗಶಂಕರದಲ್ಲಿ. ಭೈರಪ್ಪನವರೂ ಬಂದಿದ್ದರು. ಮಂದ್ರಕ್ಕೆ ಸರಸ್ವತೀ ಸಮ್ಮಾನ್ ಪ್ರಕಟವಾದ ಸಂಭ್ರಮದಲ್ಲಿ ಅಂದು ನಾಟಕ. ಜಿ.ವಿ.ಯವರ ಅಧ್ಯಕ್ಷತೆಯಲ್ಲಿ ಭೈರಪ್ಪ ಅವರಿಗೆ ಸಮ್ಮಾನ. ಆಮೇಲೆ ನಾಟಕ. ಮರುದಿನ ಜೀವಿಯವರಿಂದ ನನಗೆ ಫೋನು. 'ಬಿಡುವು ಮಾಡಿಕೊಂಡು ಎಷ್ಟು ಹೊತ್ತಿಗಾದರೂ ಮನೆಗೆ ಬಂದು ಹೋಗಿ.' ಅಪೇಕ್ಷೆಗೂ ಅಪ್ಪಣೆಗೂ ಒಂದೇ ಅರ್ಥ ಅಂತ ತಲೆ ಕೊಡವಿ ಹೋದೆ.

"ನಾನು ಭೈರಪ್ಪನವರ ಪಕ್ಕದಲ್ಲೇ ಕೂತಿದ್ದೆ. ನಾಟಕ ಚೆನ್ನಾಗಿತ್ತು. ಭೈರಪ್ಪನವರೂ ಆಗಾಗ ಸ್ಪಂದಿಸುತ್ತಾ ಇದ್ದರು. ಅವರು ಖುಷಿಪಟ್ಟರು. 'ಸಾಹಸ ಮಾಡಿದ್ದಾರೆ' ಅಂತ ನಾನಂದದ್ದಕ್ಕೆ 'ಹೌದು' ಅಂತ ಮೆಚ್ಚುಗೆ ವ್ಯಕ್ತಪಡಿಸಿದರು. ಅದನ್ನ ನಿಮಗೆ ಮುಖತಃ ತಿಳಿಸಬೇಕು ಅಂತ ನಿಮ್ಮನ್ನ ಬರಲಿಕ್ಕೆ ಹೇಳಿದೆ, ತೊಂದರೆ ಆದ್ದಕ್ಕೆ ಕ್ಷಮಿಸಿ." ಕಿರಿತನದ ಉಪೇಕ್ಷ ಇಲ್ಲದೆ ಹಿರಿತನದ ಹಮ್ಮಿಲ್ಲದೆ ಗೆಳೆತನ ಕುದುರಿಸುವ ಸೌಜನ್ಯ ಇರುವವನ್ನು ಯಾವ ಮುಪ್ಪು ಮುಟ್ಟುವ ಧೈರ್ಯ ಮಾಡೀತು?

'ಯೇಗ್ದಾಗೆಲ್ಲ ಐತೆ' ಬೆಳಗೆರೆ ಕೃಷ್ಣಶಾಸ್ತ್ರಿಗಳ ಜನಪ್ರಿಯ ನಾಟಕ ರೂಪಾಂತರ ಮಾಡಿ ಪ್ರಯೋಗವನ್ನು ಮಾಡುತ್ತಿದ್ದೆವು. ಗೋಖಲೆ ಸಭಾಂಗಣದಲ್ಲಿ

ಪ್ರದರ್ಶನ. ಎಸ್.ಆರ್.ರಾಮಸ್ವಾಮಿಯವರಿಗೆ ಡಿ.ಲಿಟ್ ಬಂದ ಸಂಭ್ರಮಾಚರಣೆ. ೯೭ರ ಕೃಷ್ಣಶಾಸ್ತ್ರಿಗಳು, ೯೮ರ ಜಿ.ವಿ. ನಮ್ಮ ಗೌರವ ಪ್ರೇಕ್ಷಕರು. ನಾಟಕದುದ್ದಕ್ಕೂ ಕೇಕೆ ಹಾಕಿ, ಚಪ್ಪಾಳೆ ತಟ್ಟಿ, ದಶದಿಕ್ಕಿಗೆ ಹಲ್ಲಹೊಳಪು ಹರಡುವಷ್ಟು ಗಹಗಹಿಸಿ, ನಿರಂತರ ಅನಂದಾಶ್ರು ಒರೆಸಿಕೊಳ್ಳುತ್ತಾ, ಗ್ರೀನ್ ರೂಮಿಗೇ ಬಂದು ಮೆಚ್ಚುಗೆಯ ಮಹಾಪೂರವನ್ನು ಹರಿಸಿದರು ಜಿ.ವಿ. 'ಇಂಥಾ ಕಾರ್ಯಕ್ರಮ ತೋರಿಸಿ ನನ್ನ ವಾರ್ಧಕ್ಯಾನ ಇನ್ನೂ ಕಡಮೆ ಮಾಡ್ತೀರಿ' ಅನ್ನುವ ಉಪಚಾರ ಬೇರೆ. ಕಲೆಯೊಂದಿಗೆ ಜಗತ್ತನ್ನೇ ಮರೆತು ಬೆರೆವವನ ಹತ್ತಿರ ಬರಲು ಮುಪ್ಪಿಗೆ ಜಾಡಾದರೂ ಎಲ್ಲಿ?

ಜಿ.ವಿ.ಯವರ ಮನೆಯಿಂದ ಸುಮಾರು ಏಳು ಕಿ.ಮೀ ನನ್ನ ಮನೆಗೆ. ನಮ್ಮ ಮನೆಯಲ್ಲೇ ಪ್ರಖ್ಯಾತ ವೇಣುವಾದಕ ಚೆನ್ನೈನ ಕೆ.ಎಸ್. ಗೋಪಾಲಕೃಷ್ಣನ್ ಅವರ ಕಚೇರಿ ಏರ್ಪಾಟಾಗಿತ್ತು. ಯಾವುದಕ್ಕೂ ಇರಲಿ, ಶಾಸ್ತ್ರೀಯ ಸಂಗೀತ, ಜಿ.ವಿ. ಬರೋದು ಡೌಟು ಅಂತಲೇ ಕೇಳಿದರೆ 'ಸಂಗೀತವೇ, ತುಂಬಾ ದಿನ ಆಗಿತ್ತು ಕೇಳದೆ, ಬರ್ತೇನೆ' ಅನ್ನೋದೆ! ಸಂಜೆ ಆರರಿಂದ ರಾತ್ರಿ ೯.೩೦ರ ತನಕ ಕಚೇರಿ. ಪುಣ್ಯಾತ್ಮ ಧ್ಯಾನಶೀಲರಾಗಿ, ಪ್ಲಾಸ್ಟಿಕ್ ಕುರ್ಚಿಯ ಮೇಲೆ ಯಾವ ಶರ ಮಂಚಾಸನದಲ್ಲಿ ಕುಳಿತು ದೇಹಬಾಧೆ ಸಹಿಸಿ ಕೊಂಡರೋ, ಪೂರ್ತಿ ಮುಗಿವವರೆಗೆ ಉತ್ಸಾಹಿಗಳಾಗಿ ತಾಳಹಾಕಿಕೊಂಡು ಆಸ್ವಾದಿಸುತ್ತಾ ಇದ್ದರು. ಎಲ್ಲ ಕಲಾವಿದರಿಗೂ ಜಿ.ವಿ. ಕೈಯಿಂದಲೇ ಗೌರವಿಸಿದಾಗ ಅವರಿಗೆಲ್ಲಾ ಖುಷಿಯೋ ಖುಷಿ.

ಜಿ.ವಿ.ಯವರ ದಿನನಿತ್ಯದ ಜೀವನ ಅತ್ಯಂತ ಶಿಸ್ತಿನದ್ದು. ಇಷ್ಟು ಗಂಟೆಗೆ ಊಟ ಅಂದರೆ ಅಷ್ಟೇ ಕಟ್ಟುನಿಟ್ಟು. ರಾತ್ರಿ ೦೮ಕ್ಕೆ ಆಹಾರ ಸೇವನೆ, ಇಲ್ಲಿ ಇವರು ಗಡದ್ದಾಗಿ ಸಂಗೀತದ ಸ್ವರ ಅಗೀತಾ ಕೂತುಬಿಟ್ಟಿದ್ದರು. ಜಿ.ವಿ.ಯವರ ಮಗ ಅರುಣ ನಡುವೊಮ್ಮೆ ಫೋನ್ ಮಾಡಿ 'ಈಗ ಅವರ ಊಟದ ಹೊತ್ತು' ಅಂತ ನೆನಪಿಸಿದರು. ಜಪ್ಪಯ್ಯ ಅನ್ನಲಿಲ್ಲ ಆಸಾಮಿ. ಮಧ್ಯೆ ಒಂದು ಕಾಫಿ ಮಾತ್ರ. ಎಲ್ಲಾ ಮುಗಿದ ಮೇಲೆ 'ಎಂಥ ಗಾಂಧರ್ವಲೋಕ ತೋರಿಸಿದ್ರಪ್ಪ. ಆ ಕಲಾವಿದ (ಕೆ.ಎಸ್.ಜಿ.) ಖುಷೀನೇ ಬಿಡಿ, ತನಗಾಗಿಯೇ ನುಡಿಸ್ತಾನೆ, ತನ್ನ ಜೊತೆಗೇ ಮಾತಾಡಿಕೊಳ್ತಾನೆ, ಹಾಗಾಗಿ ಆತ್ಮೀಯ ನಾದಾವರಣ ಆತ ಸೃಷ್ಟಿಸಬಲ್ಲ. ಇನ್ನೂ ಒಂದು ಗಂಟೆ ಆತ ನುಡಿಸಿದ್ದರೂ ನನ್ನ ತಕರಾರಿರಲಿಲ್ಲ, ನಾನು ಕೇಳ್ಳಿಕ್ಕೆ ರೆಡಿ ಇದ್ದೆ' ಅಂತ ಹೊರಟುನಿಂತ ಜಿ.ವಿ ಹೇಳಿದಾಗ ಆರ್ಧ ಮುಪ್ಪು ಆವರಿಸಿದ್ದು ನಮ್ಮನ್ನು–ದಂಗುಬಡಿಸಿ. ಕಲೆಯೊಂದಿಗೆ ತನ್ನನ್ನು ಏಕೀಭವಿಸಿಕೊಳ್ಳುವ ಯಾವ ಸಹೃದಯನನ್ನು ಮುಪ್ಪು ಅಲ್ಲಾಡಿಸೀತು?

ದಿ॥ ಸುಂದರೀ ಸಂತಾನಂ ಭರತ ನಾಟ್ಯದ ಮೂಲಕ ಪ್ರಸ್ತುತಪಡಿಸಿದ 'ಪುಣ್ಯ ಕೋಟಿ' ರೂಪಕಕ್ಕೂ ಜಿ.ವಿ. ಬಂದಿದ್ದರು, ನಿಮ್ಹಾನ್ಸಿನ ಸಭಾಭವನಕ್ಕೆ. ಅದಕ್ಕೂ ಮೊದಲೇ ಪುಣ್ಯಕೋಟಿಯ ಕಥಾನಕದಲ್ಲಿ ನಾನು ಮಾಡಿಕೊಂಡ ಮಾರ್ಪಾಟುಗಳನ್ನು ಅವರಿಗೆ ಸಾಹಿತ್ಯದ ಜೊತೆ ತೋರಿಸಿದ್ದೆ. ಅದರ ಗೇಯ ಸಾಹಿತ್ಯ ಯಕ್ಷಗಾನ ರಚನೆಯಲ್ಲಿಟ್ಟಿದ್ದೆ. ಕಾರ್ಯಕ್ರಮ ನೋಡಿ ಆದ ಮೇಲೆ, ಕಲಾವಿದೆಯನ್ನು ಕರೆದು 'ತುಂಬಾ ಹೃದಯಂಗಮವಾಗಿ ಮಾಡಿದ್ದೀರಿ, ಕಣ್ಣೀರು ತಡಿಲಿಕ್ಕೇ ಆಗಲಿಲ್ಲ. ಭಾವಪೂರ್ಣ ನಾಟ್ಯ' ಅಂತ ಹುರಿದುಂಬಿಕೆಯ ಮಾತಾಡಿದರು. ಪುಣ್ಯಕೋಟಿಯ ಪಾತ್ರಾಭಿನಯಕ್ಕೆ ಕಣ್ಣೀರಾಗುವವನ ಕಡೆ ಯಾವ ಮುಪ್ಪು ಕಣ್ಣು ಹಾಕೀತು?

ಇದೆಲ್ಲ ಕಲಾವಿಭಾಗದ ನನ್ನ ಅನುಭವ. ಸಾಹಿತ್ಯದ ಸಂಸರ್ಗದಲ್ಲೂ ಇನ್ನೂ ಹೆಚ್ಚಿನ ತರುಣೋತ್ಸಾಹ ಜಿ.ವಿ.ಯವರದು. ಯಾರೋ ಕೇಳಿದ ಶಬ್ದನಿರ್ವಚನ, ಪದ್ಯೋಲ್ಲೇಖನದ ಖಚಿತತೆ, ಕಾವ್ಯಪಂಕ್ತಿಯ ಅರ್ಥ ಸ್ಪಷ್ಟತೆ ಇಂತಹ ಏನಾದರೂ ಎಡಬಿಡಂಗಿ ಹಿಡಿದು ನಾನು ಅವರ ಬಳಿ ಹೋಗುವುದಿತ್ತು. ಹೆಚ್ಚೆಂದರೆ ಐದು ನಿಮಿಷ, ಸಂಬಂಧ ಪಟ್ಟ ಗ್ರಂಥ, ಕೋಶ, ನಿಘಂಟು ಸಮೇತ ಜಿ.ವಿ. ಹಾಜರು. ಪುಸ್ತಕದ ಜೋಡಣೆ ಅಷ್ಟು ನಿಖರ. 'ಮೈಸೂರು ಮಲ್ಲಿಗೆ' ನಾಟಕಕ್ಕೆ ಅವರನ್ನು ಆಹ್ವಾನಿಸಲು ಹೋದಾಗ "ಏನು ಹೆಸರಿಟ್ಟಿದ್ದಿರಿ? 'ಮೈಸೂರು ಮಲ್ಲಿಗೆ' ಅಂತಲೋ, 'ಮೈಸೂರು ಮಲ್ಲಿಗೆ' ಅಂತಲೋ? ಯಾಕಂದ್ರೆ ನರಸಿಂಹಸ್ವಾಮಿ 'ಮೈಸೂರ ಮಲ್ಲಿಗೆ' ಅಂತ ಇಟ್ಟಿದ್ದಾನೆ. ಅದರ ಮೊದಲ ಮುದ್ರಣ ೧೯೪೨ರಲ್ಲಿ ಬಂತು" ಅಂದವರೇ ಆ ಪುಸ್ತಕವನ್ನು ತಂದು ತೋರಿಸಿದರು.

ಸಂಸ್ಕೃತ ಕವಿ ಲೀಲಾಶುಕನ ಕೃಷ್ಣಕರ್ಣಾಮೃತವನ್ನ ಕನ್ನಡದ ಪದ್ಯರೂಪಕ್ಕೆ ಅನುವಾದಿಸಿದ್ದೆ. ಆ ಪುಸ್ತಕಕ್ಕೆ ಬೆನ್ನುಡಿ ಬರೆದುಕೊಡುವಂತೆ ಕೋರಿದ್ದೆ. 'ಪ್ರೂಫ್ ತಂದು ಕೊಡಿ, ಬರೆದುಕೊಡ್ತೇನೆ' ಅಂತ ಅವರು ಹೇಳಿದಾಗ ತ್ರಿವಿಕ್ರಮನಿಗಿಂತ ಒಂದಂಗುಲ ಮೇಲೆ ಬೆಳೆದಿದ್ದೆ. ಅವರು ಹೇಳಿದ ದಿನವೇ ಬೆನ್ನುಡಿ ಪಡೆಯಲು ಹೋದಾಗ ನಮ್ಮ ಅಕ್ಷರೋದ್ಯೋಗ ನಿಷ್ಠೆಯ ಸಡಿಲು ಏನು ಅಂತ ತೋರಿಸಿದರು. ಆ ಪ್ರೂಫ್‌ನ್ನ ಅವರು ತಿದ್ದಿದ್ದರು; ಮೂಲಸಂಸ್ಕೃತದ ಶ್ಲೋಕದ ಪಾಠಾಂತರವನ್ನು ಬರೆದಿಟ್ಟಿದ್ದರು. ಜೊತೆಗೆ ಮೂಲಕಾವ್ಯದ ಪುಸ್ತಕವನ್ನೂ ತೋರಿಸಿದರು. 'ವೆಂಕಟಸುಬ್ಬಯ್ಯ ಸುಮ್‌ಸುಮ್ನೆ ಏನೋ ನಾಲ್ಕು ಸಾಲು ಗೀಚಿದ ಅಂತ ನೀವು ತಿಳಕೊಬಾರದು. ನಾನು ಪೂರ್ತಿ ಓದಿದ್ದೇನೆ ಅಂತ ನಿಮಗೆ ಗೊತ್ತಾಗಲಿ' ಅಂತ ಅವರು ಮುಗುಳ್ನಕ್ಕು ಹೇಳಿದಾಗ ತಲೆ ತಗ್ಗಿಸುವ ಸರದಿ ನನ್ನದು. ಇಂತಹ ಸಾಹಿತ್ಯೋಪಾಸಕ ದೃಢವ್ರತಿಯ ಬಳಿಗೆ ಯಾವ ಮುಪ್ಪು ಪ್ರೂಫ್ ತಂದೀತು?

ನನ್ನ ನೆನಪಿನ ಪೂರ್ಣವಿರಾಮವಾಗಿ, ಜಿ.ವಿ.ಯವರ ಅಕಾಡೆಮಿಕ್ ಡಿಸಿಪ್ಲಿನ್ನಿನ್ನ ಸಂಗತಿ ಹೇಳಿ ಮುಗಿಸುತ್ತೇನೆ.

ಜಯನಗರ ೮ನೇ ಬ್ಲಾಕಿನಲ್ಲಿರುವ ಜಯರಾಮ ಸೇವಾಮಂಡಳಿ ರಾಮು/ ರಾಮಾಯಣ ಕುರಿತಾದ ಸಂಗ್ರಾಹ್ಯ ಶೋಧನ ಗ್ರಂಥವನ್ನು ಹೊರತರುತ್ತಿದೆ. ಆ ಪ್ರಕಾಶನದ ಯಾವತ್ತೂ ಅಕ್ಷರಕಲಾಪಕ್ಕೆ ವೆಂಕಟಸುಬ್ಬಯ್ಯ ಖಾಯಂ ಅಧ್ಯಕ್ಷರು. ಈಗ ಎರಡು ವರ್ಷದ ಹಿಂದೆ 'ವಾಲ್ಮೀಕಿ ರಾಮಾಯಣ ಮತ್ತು ಸಂಸ್ಕೃತ ನಾಟಕ' ಎನ್ನುವ ವಿಶೇಷ ವಸ್ತುವನ್ನು ಅಧಿಕರಿಸಿ ಗ್ರಂಥಸಂಪಾದನೆಗೆ ಜಿ.ವಿ. ಶ್ರೀಕಾರ ಹಾಕಿದರು. ಆ ಪುಸ್ತಕದಲ್ಲಿ ರಾಮಾಯಣ ಮತ್ತು ಯಕ್ಷಗಾನವೂ ಇರಲಿ ಅಂತ ನನಗೆ ಹೇಳಿದಾಗ, ನನ್ನ ಅಣ್ಣನಿಂದ ಆ ಕುರಿತು ತುಲನಾತ್ಮಕ ಲೇಖನ ತರಿಸಿದೆ. ಆ ಗ್ರಂಥ ನಿರ್ಮಾಣದ ಎಲ್ಲ ಹಂತಗಳಲ್ಲಿ ಮೀಟಿಂಗಿಗೆ ನಾನು ಹೋಗುತ್ತಿದ್ದೆ. ಆಗಲೇ ನನಗೆ ಜಿ.ವಿ.ಯವರ ಗ್ರಂಥಸಂಪಾದನೆಯ ಇನ್ನೊಂದು ಮುಖದ ಶ್ರೀಮದ್ಗಾಂಭೀರ್ಯದ ಝಳ ತಾಗಿದ್ದು. ಪೊಟ್ಟು ಮಾತಾಡಿಕೊಂಡು ಜಾಲಿಯಾಗಿರುತ್ತಿದ್ದ ಜಿ.ವಿ.ಅಲ್ಲಿ ಕಾಣಲೇ ಇಲ್ಲ. ಎಲ್ಲವೂ ಕರಾರುವಾಕ್ಕು, ಖಚಿತ, ನಿಖರ. ಪ್ರತಿಯೊಂದೂ on record. ಮೀಟಿಂಗ್ ಶುರುವಾಗುವಾಗಲೇ ಕಾರ್ಯಸೂಚಿಯ ಮುದ್ರಿತ ಪ್ರತಿಯ ವಿತರಣೆ, ಯಾರ್ಯಾರಿಗೆ

ಯಾವ್ಯಾವ ಗ್ರಂಥದ ಅವಲೋಕನ, ಆ ವಿದ್ವಾಂಸರ ವಿಳಾಸ, ದೂರವಾಣಿ ಸಂಖ್ಯೆ, ಲೇಖನ ಕೊಡಬೇಕಾದ ದಿನಾಂಕ, ಲೇಖನದ ಗಾತ್ರ–ಎಲ್ಲವನ್ನೂ ನಮೂದಿಸಿದ ಸರ್ಕ್ಯುಲರ್ ಅವರೇ ಹಂಚಿದರು. 'ಯಾರಿಗೆ ಯಾವ ಗ್ರಂಥ ಸಿಕ್ಕುವುದಿಲ್ಲ, ಅದನ್ನು ತಿಳಿಸಿ. ನಿಮಗೆ ಒದಗಿಸಲಾಗುವುದು' ಎನ್ನುವ ಗುಡುಗುದನಿ. ಒಟ್ಟಿನಲ್ಲಿ ಯಾರೂ ಪಿಳ್ಳೆ ನೆವ ಹೇಳಿ ತಪ್ಪಿಸಿಕೊಳ್ಳುವಂತಿಲ್ಲ. ಜಿ.ವಿ. ಹಿಡಿತ ಅಂದರೆ ಉಡದ ಹಿಡಿತ. ಎರಡನೇ ಮೀಟಿಂಗಿನಲ್ಲಿ ಪ್ರಗತಿ ಪರಿಶೀಲನೆ. ಆ ಗ್ರಂಥದ ಪ್ರಕಾಶನದ ದಿನಾಂಕವನ್ನೂ ಐದು ತಿಂಗಳ ಮೊದಲೇ ನಿಗದಿಪಡಿಸುವ ರಾಮಶಾಸನ. ಪ್ರಕಾಶನ ಪೂರ್ವದಲ್ಲಿ ಆಯಾ ವಿದ್ವಾಂಸರಿಂದ ನಿರ್ದಿಷ್ಟ ದಿನಾಂಕದಂದು ಅದೇ ಗ್ರಂಥದ ಕುರಿತು ಒಂದು ಗಂಟೆಯ ಭಾಷಣ–ಕಡ್ಡಾಯ. ಅದಕ್ಕೆ ತಯಾರಾಗಬೇಕಾದ ಕ್ರಮ ಹೇಗೆ, ಭಾಷಣದ ಸ್ವರೂಪ ಏನು, ಸಂಭಾವನೆ ಎಷ್ಟು ಎಲ್ಲವೂ ತೆರೆದ ದಾಖಲೆ. ಯಾರಿಗೂ ಮುಜುಗರವಿಲ್ಲ. ಸಂದೇಹಿಸುವ ಅವಕಾಶವೂ ಇಲ್ಲ. ಆ ಭಾಷಣದ ಕಾರ್ಯಕ್ರಮದ ನಿರ್ವಹಣೆಯೂ ಸಾಹಿತ್ಯಕುಮಾರ ೯೮ರ ಜಿ.ವಿ.ಯವರದೇ. ಈ ವಿಶನ್, ನಿಲುವು, ಹಿಡಿದ ಕೆಲಸ ಮುಗಿಸುವ ಬದ್ಧತೆ ಯಾವ ಸಂಸ್ಥೆ ವಿಶ್ವವಿದ್ಯಾಲಯಗಳಲ್ಲಿ ಕಾಣಸಿಕ್ಕೀತು? ಇವತ್ತಿಗೂ ದಿನವೂ ೪–೫ ಗಂಟೆ ಗ್ರಂಥವ್ಯಾಸಂಗ ಮಾಡುವ, ದಿನ ಪತ್ರಿಕೆಯ ಬಕ್ವಾಸುಗಳಿಗೆ ಹುಬ್ಬುಬಿಗಿದು ಹೇವರಿಸುವ, ಸಹೃದಯರೊಂದಿಗೆ ಅವರವರ ವಯಸ್ಸಿನ ಶ್ರುತಿಗೆ ಸಮನಾಗಿ ತನ್ನ ವಯಸ್ಸನ್ನು ಶ್ರುತಿ ಮಾಡಿಕೊಂಡು ಜುಗಲ್ ಬಂದಿ ನಡೆಸಿ, ಒಡಲಾಳದಿಂದ ನಿರ್ಮಲವಾಗಿ ಬಾಯ್ತುಂಬ ನಕ್ಕು ಹಗುರಾಗುವ ವೆಂಕಟಸುಬ್ಬಯ್ಯನವರ ತೂಕದ ವ್ಯಕ್ತಿತ್ವದ ಮಾಪನಕ್ಕೆ ಸದ್ಯ ಯಾವ ತೂಕದ ಬೊಟ್ಟೂ ಇಲ್ಲ. ಹಾಗಾಗಿ ಮುಪ್ಪೂ ಇವರನ್ನು ಅಳೆಯಲಾಗದೆ ತಲೆ ತಪ್ಪಿಸಿಕೊಂಡಿದೆ.

ಕನ್ನಡ ಭಾಷೆಯ ಚರಿತ್ರಾಕ್ಷರದ ವಿಸ್ಮಯ ಜಿ.ವೆಂಕಟಸುಬ್ಬಯ್ಯನವರ ಹರಕೆ ಕನ್ನಡಕ್ಕೆ, ಕನ್ನಡನಾಡಿಗೆ, ಕನ್ನಡಿಗರಿಗೆ ತಾರುಣ್ಯವನ್ನು ತರಲಿ.

(ಸಾಭಾರ : ಉತ್ಥಾನ)

* * *

ಶೈಕ್ಷಣಿಕ ಮಾಧ್ಯಮದ ಬಗ್ಗೆ ವಿವಿಧ ಚಿಂತಕರ ಚಿಂತನೆ.

ಇಂಗ್ಲಿಷ್ ಮಾಧ್ಯಮ ಏಕೆ? ಹೇಗೆ?

– ಡಾ. ನಟರಾಜ್ ಹುಳಿಯಾರ್

ಎರಡು ವರ್ಷಗಳ ಕೆಳಗೆ ಗುಲ್ಬರ್ಗ ಸೆಂಟ್ರಲ್ ಯೂನಿವರ್ಸಿಟಿಯ ಇಂಗ್ಲಿಷ್ ವಿಭಾಗದ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದಾಗ ಒಂದು ಅಂಶವನ್ನು ಗಮನಿಸಿದ್ದೆ: ಇಂಗ್ಲಿಷ್ ಎಂ.ಎ. ಓದುತ್ತಿದ್ದ ಒಟ್ಟು ಅರವತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರಲ್ಲಿ ಕೇವಲ ಇಬ್ಬರು ಮಾತ್ರ ತಪ್ಪಿಲ್ಲದೆ ಇಂಗ್ಲಿಷ್ ಮಾತಾಡಬಲ್ಲವರಾಗಿದ್ದರು.

ಇನ್ನುಳಿದ ವಿದ್ಯಾರ್ಥಿಗಳಿಗೆ ಈ ಸಾಮರ್ಥ್ಯ ಇಲ್ಲದಿರುವುದಕ್ಕೆ ಅವರ ಸಾಮಾಜಿಕ ಹಿನ್ನೆಲೆಯ ಜೊತೆಗೇ ಅವರೆಲ್ಲ ಇಂಗ್ಲಿಷ್ ಕಲಿಕೆಯನ್ನು ತಡವಾಗಿ ಆರಂಭಿಸಿದ್ದು ಕೂಡ ಕಾರಣವಾಗಿತ್ತು. ಈ ಸ್ಥಿತಿಯನ್ನು ನೋಡಿದಾಗ, ಇಂಗ್ಲಿಷ್ ಭಾಷೆಯನ್ನು ತಡವಾಗಿ ಕಲಿಯುತ್ತಿರುವವರ ಕಷ್ಟಗಳು ನನಗೆ ಮನದಟ್ಟಾಯಿತು. ಬಾಲ್ಯದಲ್ಲಿ ಎಲ್ಲ ಮಕ್ಕಳಿಗೂ ಸಾಧ್ಯವಿರುವ ಭಾಷಾಕಲಿಕೆಯ ಸಾಮರ್ಥ್ಯವನ್ನು ಸರಿಯಾಗಿ ಬಳಸಿಕೊಳ್ಳದಿರುವುದೇ ಮಕ್ಕಳ ಕಷ್ಟಕ್ಕೆ ಕಾರಣವಾಗಿತ್ತು.

ಈಗಾಗಲೇ ಸಿದ್ಧವಾಗಿರುವ ಹಾಗೆ ಬಾಲ್ಯದಲ್ಲಿ ಸಹಜವಾಗಿ ಇರುವ 'ಲಿಂಗ್ವಿಸ್ಟಿಕ್ ಪ್ಲಾಸಿಸಿಟಿ' ಅಥವಾ ಭಾಷಾಕಲಿಕೆಯ ಸಾಮರ್ಥ್ಯದಿಂದಾಗಿ ಮಕ್ಕಳು ನಾಲ್ಕು ಭಾಷೆಗಳನ್ನು ಕಲಿಯಬಲ್ಲರು. ಆದರೆ ಆ ಹಂತ ದಾಟಿದ ನಂತರ ಇಂಗ್ಲಿಷ್ ಕಲಿಕೆಯನ್ನು ಆರಂಭಿಸಿದ ಮಕ್ಕಳು ಅನೇಕ ಬಗೆಯ ಹಿನ್ನಡೆ, ಕೀಳರಿಮೆಗಳನ್ನು ಅನುಭವಿಸುತ್ತಿರುವುದನ್ನು ದಿನನಿತ್ಯ ನೋಡುತ್ತಿದ್ದೇವೆ.

ಆದರೆ ನಮ್ಮ ಸರ್ಕಾರಗಳು ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭವಾದ ನಂತರವೂ ಎಲ್ಲ ಶಾಲೆಗಳಲ್ಲೂ ಕನ್ನಡ ಮಾಧ್ಯಮವನ್ನು ಜಾರಿಗೆ ತರುತ್ತೇವೆಂದು ಹುಸಿ ಭರವಸೆ ಕೊಡುತ್ತಾ ಕಳೆದ ಇಪ್ಪತ್ತು ವರ್ಷಗಳಿಂದ ಕಾಲ ತಳ್ಳುತ್ತಲೇ ಬಂದವು. ಸರ್ಕಾರಿ ಶಾಲೆಗಳ ಮಕ್ಕಳು ಹಿಂದುಳಿಯುತ್ತಲೇ ಬಂದವು. ಆರು ವರ್ಷಗಳ ಕೆಳಗೆ ವಿವಾದ ಕೋರ್ಟಿನಲ್ಲಿದೆ ಎಂಬ ನೆಪವೊಡ್ಡಿ ಕೆಲವರು ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಲೂ ಅಡ್ಡಗಾಲು ಹಾಕಲು ಯತ್ನಿಸಿದ್ದರು.

ಇಷ್ಟಾಗಿಯೂ ಕಳೆದ ನಾಲ್ಕು ವರ್ಷಗಳಲ್ಲಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಸುಮಾರಾಗಿಯಾದರೂ ಕಲಿಯಲೆತ್ನಿಸಿರುವ ಮಕ್ಕಳಿಗೆ ಆರನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮವನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ. ಈ ನಿರ್ಧಾರ ಬದಲಾದ ಸಾಮಾಜಿಕ ಸನ್ನಿವೇಶದಲ್ಲಿ ಅನಿವಾರ್ಯವಾಗಿದೆ.

ಒಂದು ಅಂದಾಜಿನ ಪ್ರಕಾರ, ರಾಜ್ಯದಲ್ಲಿರುವ ಸುಮಾರು ಇಪ್ಪತ್ತೈದು ಸಾವಿರ ಪ್ರಾಥಮಿಕ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಹಾಗೂ ಉರ್ದು ಮಾಧ್ಯಮದ ಶಾಲೆಗಳಿವೆ. ಹತ್ತು ಸಾವಿರಕ್ಕೂ ಹೆಚ್ಚು ಅಧಿಕೃತ, ಅನಧಿಕೃತ ಇಂಗ್ಲಿಷ್ ಮಾಧ್ಯಮ ಶಾಲೆಗಳಿವೆ.

ಅವುಗಳಲ್ಲೂ ಹಲಬಗೆಯ ಶ್ರೇಣಿಗಳಿವೆ. ಆದರೆ ಕರ್ನಾಟಕದ ಅರ್ಧ ಭಾಗಕ್ಕಿಂತ ಹೆಚ್ಚು ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಓದುತ್ತಿದ್ದಾರೆ. ಈ ಎರಡು ಬಗೆಯ ಶಾಲೆಗಳ ನಡುವಣ ಸ್ಪರ್ಧೆಗಳಲ್ಲಿ ಸರ್ಕಾರಿ ಶಾಲೆಗಳ ಮಕ್ಕಳು ಬಡತನ, ವಾತಾವರಣ ಹಾಗೂ ಇಂಗ್ಲಿಷ್ ಭಾಷೆಯ ಕೊರತೆಯ ಕಾರಣದಿಂದಾಗಿಯೂ ಹಿಂದೆ ಬಿದ್ದಿದ್ದಾರೆ.

ಮೊನ್ನೆ ತಾನೇ ಫಲಿತಾಂಶ ಪ್ರಕಟವಾಗಿರುವ ಪಿಯುಸಿ ನಂತರದ ಸಿ.ಇ.ಟಿ. ಪರೀಕ್ಷೆಯಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ ತೊಂಬತ್ತರಷ್ಟು ಭಾಗದ ಮಕ್ಕಳು ರ?ಯಾಂಕುಗಳನ್ನು ಪಡೆದಿದ್ದಾರೆ. ಹೀಗಾಗಿ ಸರ್ಕಾರಿ ಶಾಲೆಗಳ ಮಕ್ಕಳಿಗೆ ಕೂಡ ಇಂಗ್ಲಿಷ್ ಮಾಧ್ಯಮದ ಅನುಕೂಲವನ್ನು ಒದಗಿಸುವುದು ಅನಿವಾರ್ಯ.

ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಶಾಲೆಗಳ ಶೇ.೧೮ ಭಾಗ ಶಿಕ್ಷಕ, ಶಿಕ್ಷಕಿಯರು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸಲು ತರಬೇತಿಗೊಂಡಿದ್ದಾರೆ; ಜೊತೆಗೆ, ಈಗಾಗಲೇ ವಿಜ್ಞಾನ ವಿಷಯಗಳನ್ನು ಇಂಗ್ಲಿಷಿನಲ್ಲಿ ಕಲಿಸುತ್ತಿರುವವರು ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಡಿ.ಎಡ್ ಪದವಿ ಪಡೆದಿರುವವರು ಕೂಡ ಈ ಕಾರ್ಯಕ್ಕೆ ಸಿದ್ಧವಾಗಿದ್ದಾರೆ. ಆದ್ದರಿಂದ ಇಂಗ್ಲಿಷ್ ಮಾಧ್ಯಮ ಕೇವಲ ಕೆಲವು ಆಯ್ದ ಶಾಲೆಗಳಲ್ಲಿ ಮಾತ್ರ ಅಲ್ಲ; ಕರ್ನಾಟಕದಾದ್ಯಂತ ಮಾಧ್ಯಮಿಕ ಹಂತದಲ್ಲಿ ಐಚ್ಛಿಕವಾಗಿಯಾದರೂ ಆರಂಭವಾಗಬೇಕು.

ಆದರೆ, ಸರ್ಕಾರಿ ಶಾಲೆಗಳಲ್ಲಿ ಈಗಾಗಲೇ ಖಾಸಗಿ ಶಾಲೆಗಳಲ್ಲಿರುವಂತೆ ಅವೈಜ್ಞಾನಿಕವಾಗಿ, ಮಾತೃಭಾಷೆಯನ್ನು ಸಂಪೂರ್ಣವಾಗಿ ಹೊರಗಿಟ್ಟು ವಿಷಯಗಳನ್ನು ಕಲಿಸಬಾರದು. ಬದಲಿಗೆ ಮಾತೃಭಾಷೆ ಹಾಗೂ ಇಂಗ್ಲಿಷ್ ಎರಡೂ ಮಾಧ್ಯಮಗಳನ್ನು ಬೆರೆಸಿ ಕಲಿಸುವ ಕ್ರಮವನ್ನು ಆರಂಭಿಸಬೇಕು.

ಇದು ಯಾಂತ್ರಿಕ ಅನುವಾದ ವಿಧಾನ ಅಲ್ಲ. ಬದಲಿಗೆ ಮಾತೃಭಾಷೆಯಲ್ಲಿ ವಿಷಯವನ್ನು ಗ್ರಹಿಸುವ ಹಾಗೂ ಅದನ್ನು ಎರಡು ಭಾಷೆಗಳಲ್ಲಿ ಮಂಡಿಸುವ ಸಾಮರ್ಥ್ಯವನ್ನು ಕಲಿಸುವ ವಿಧಾನ. ಅದಕ್ಕಾಗಿ ಒಂದು ಪಠ್ಯಪುಸ್ತಕದ ಎಡ ಪುಟದಲ್ಲಿ ಕನ್ನಡ ಅಥವಾ ಇನ್ನಿತರ ಮಾತೃಭಾಷೆಯಲ್ಲಿಯೂ ಹಾಗೂ ಬಲಪುಟದಲ್ಲಿ ಇಂಗ್ಲಿಷ್ ಭಾಷೆಯಲ್ಲಿಯೂ ವಿಷಯಗಳನ್ನು ಮುದ್ರಿಸಬೇಕು. ಪುಸ್ತಕ ದೊಡ್ಡದಾಗುತ್ತದೆ ಎಂಬ ಹುಸಿ ನೆಪ ಹೇಳದೆ ಈ ಕೆಲಸ ಮಾಡಬೇಕು.

ಯಾಕೆಂದರೆ ಖಾಸಗಿ ಶಾಲೆಗಳ ವಿದ್ಯಾರ್ಥಿಗಳ ಪುಸ್ತಕಗಳ ಗಾತ್ರಗಳಿಗೆ ಹೋಲಿಸಿದರೆ, ಸರ್ಕಾರಿ ಶಾಲೆಗಳ ಪುಸ್ತಕಗಳು ತೀರಾ ಕಡಿಮೆ ವಿಷಯಗಳನ್ನು ಒಳಗೊಂಡಿವೆ. ಜೊತೆಗೆ, ಉಚಿತವಾಗಿ ಕೊಡುತ್ತಿದ್ದೇವೆ ಎಂಬ ಅಹಂಕಾರದಿಂದ ಈ ಪುಸ್ತಕಗಳನ್ನು ಆಕರ್ಷಕವಾಗಿ ಮುದ್ರಿಸುತ್ತಲೂ ಇಲ್ಲ. ಸರ್ಕಾರಿ ಶಾಲೆಗಳ ಕಲಿಕೆಯ ವಾತಾವರಣವನ್ನು ಆಕರ್ಷಕವಾಗಿಸಿ, ಮಕ್ಕಳಲ್ಲಿ ಉತ್ಸಾಹ ಉಕ್ಕುವಂತೆ

ಮಾಡಬೇಕಾಗಿದೆ.

ಇವತ್ತು ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಭಾವುಕವಾಗಿ ವಿರೋಧಿಸುತ್ತಿರುವವರು ತಮಗರಿವಿಲ್ಲದೆಯೇ ಎಲ್ಲ ಜಾತಿಗಳ ಕಡುಬಡವರ ಪ್ರಗತಿಗೆ ವಿರುದ್ಧವಾಗಿದ್ದಾರೆ. ಯಾಕೆಂದರೆ ಇವತ್ತು ಮಕ್ಕಳಿಗಾಗಿ ತಿಂಗಳಿಗೆ ಕನಿಷ್ಠ ಐನೂರು ರೂಪಾಯಿಯನ್ನು ಖರ್ಚು ಮಾಡಬಲ್ಲ ಬಡ ತಂದೆ ತಾಯಂದಿರು ಕೂಡ ತಮ್ಮ ಮಕ್ಕಳನ್ನು ಎಂಥದೋ ಒಂದು ಖಾಸಗಿ ಇಂಗ್ಲಿಷ್ ಶಾಲೆಗೆ ಕಳಿಸುತ್ತಿದ್ದಾರೆ.

ಇತ್ತ ಬಹುತೇಕ ಕಾಲೇಜು, ವಿವಿಗಳ ಶಿಕ್ಷಕ, ಶಿಕ್ಷಕಿಯರು, ಅನೇಕ ಸಾಹಿತಿಗಳು ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಕಳಿಸುತ್ತಿದ್ದಾರೆ. ಇವರ?ಯಾರಿಗೂ ಇಲ್ಲದ ಕನ್ನಡ ರಕ್ಷಣೆ ಜವಾಬ್ದಾರಿಯನ್ನು ಅತಿ ಬಡ ಮಕ್ಕಳು ಮತ್ತು ಅವರ ಪಾಲಕರು ಮಾತ್ರ ಯಾಕೆ ಹೊರಬೇಕು? ಹಲ ಬಗೆಯ ಪ್ರತಿಕೂಲ ವಾತಾವರಣಗಳಲ್ಲಿ ಕಲಿಯುತ್ತಾ, ಕನ್ನಡವನ್ನು ಕಾಪಾಡುತ್ತಿರುವ ಈ ಮಕ್ಕಳಿಗೆ ಆರನೆಯ ತರಗತಿಯಿಂದ ಕೂಡ ಉಳ್ಳವರ ಮಕ್ಕಳ ಜೊತೆ ಸ್ಪರ್ಧಿಸಲು ಅವಕಾಶ ಕೊಡಬಾರದೆಂದು ವಾದಿಸುವುದು ಭಯಾನಕ ಕ್ರೌರ್ಯವಾಗುತ್ತದೆ.

ಹಾಗೆ ನೋಡಿದರೆ, ಈ ಮಕ್ಕಳಿಗೆ ಭಾಷೆಯ ಬಲ ಹಾಗೂ ಆತ್ಮವಿಶ್ವಾಸ ತುಂಬುವ ಸಲುವಾಗಿ ಇಂಗ್ಲಿಷ್ ಬರವಣಿಗೆ ಹಾಗೂ ಅಭಿವ್ಯಕ್ತಿಯನ್ನು ಅತ್ಯಂತ ಸಮರ್ಥವಾಗಿ ಕಲಿಸಿ ಹೊಸ ಜಗತ್ತಿಗೆ ಅಣಿಗೊಳಿಸುವುದು ನಮ್ಮ ಆದ್ಯತೆಯಾಗಬೇಕು. ಇಂಗ್ಲಿಷನ್ನು ಸಂವಹನಕ್ಕಾಗಿ ಮಾತ್ರವಲ್ಲದೆ, ಜಗತ್ತಿನ ಜ್ಞಾನ, ಸಾಹಿತ್ಯವನ್ನು ಗ್ರಹಿಸುವ ಕಿಟಕಿಯಾಗಿಯೂ ಕಲಿಸಬೇಕು.

ಅತಿಯಾದ ಉಚ್ಚಾರಣೆಯ ಸಮಸ್ಯೆಯನ್ನು ಮೈಮೇಲೆ ಹಾಕಿಕೊಳ್ಳದೆ, ಜಗತ್ತಿನಲ್ಲಿ ಬಗೆಬಗೆಯ ಇಂಗ್ಲಿಷುಗಳಿವೆ, ಉಚ್ಚಾರಣೆಗಳಿವೆ ಎಂಬ ಅರಿವಿನಲ್ಲಿಯೂ ಇಂಗ್ಲಿಷನ್ನು ಕಲಿಸಬೇಕು. ಇಂಗ್ಲಿಷ್ ಶಿಕ್ಷಣದ ವ್ಯಾಪಾರಿಗಳ ದಂಧೆಗೆ ಕೊನೆ ಹೇಳಲು ಸರ್ಕಾರಿ ಶಾಲೆಗಳಲ್ಲಿ ಅದನ್ನು ಸರಿಯಾಗಿ ಕಲಿಸಬೇಕು.

ಈ ಸನ್ನಿವೇಶವನ್ನು ಸರಿಯಾಗಿ ಗ್ರಹಿಸಲು ಒಂದು ಉದಾಹರಣೆ ನೋಡಿ: ಹಿಂದುಳಿದ ಪ್ರದೇಶವೊಂದರಲ್ಲಿ ಎಕನಾಮಿಕ್ಸ್ ಎಂ.ಎ. ಕಲಿಯುತ್ತಿರುವ ಬಡ ವಿದ್ಯಾರ್ಥಿಯೊಬ್ಬ ತನ್ನ ಎರಡು ವರ್ಷಗಳ ಎಂ.ಎ.ಕೋರ್ಸಿಗೆ ವಿಶ್ವವಿದ್ಯಾಲಯಕ್ಕೆ ಪಾವತಿಸುತ್ತಿರುವ ಬೋಧನಾ ಶುಲ್ಕ ೧೦೦೦೦ ರೂಪಾಯಿ; ಆದರೆ ಖಾಸಗಿ ಸಂಸ್ಥೆಯೊಂದರಲ್ಲಿ ಎರಡು ತಿಂಗಳ ಇಂಗ್ಲಿಷ್ ಕಲಿಕೆಯ ಕೋರ್ಸಿಗೆ ಕೊಟ್ಟ ಶುಲ್ಕ ೫೦೦೦ ರೂಪಾಯಿ! ಅಲ್ಲಿ ಕೂಡ ಅವನು ಸಾಂದರ್ಭಿಕವಾಗಿ ಬಳಸುವ ಇಂಗ್ಲಿಷನ್ನು ತಕ್ಕಮಟ್ಟಿಗೇ ಕಲಿತನೇ ಹೊರತು ಚೆನ್ನಾಗಿಯೇನೂ ಕಲಿಯಲಿಲ್ಲ. ಬಾಲ್ಯದಲ್ಲೇ ಶಾಲೆಯಲ್ಲಿ ಇಂಗ್ಲಿಷ್ ಭಾಷೆ ಕಲಿತಿದ್ದರೆ ಆ ಸಮಸ್ಯೆಯಿಂದ ಪಾರಾಗುತ್ತಿದ್ದನೇನೋ.

ಇದೇ ಸಂದರ್ಭದಲ್ಲಿ ಉರ್ದು ಮಾಧ್ಯಮದಲ್ಲಿ ಓದುತ್ತಿರುವ ಬಡ ಮುಸ್ಲಿಂ ಮಕ್ಕಳ ಕಷ್ಟವನ್ನು ಕೊಂಚ ವಸ್ತುನಿಷ್ಠವಾಗಿ ಗಮನಿಸಬೇಕು. ಈ ಮಕ್ಕಳಿಗೆ ಏಳನೆಯ ತರಗತಿಯ ನಂತರ ಯಾವ ವಿಷಯಗಳನ್ನೂ ಉರ್ದುವಿನಲ್ಲಿ ಕಲಿಸುತ್ತಿಲ್ಲ. ಹಾಗಾದರೆ ಈ ಮಕ್ಕಳು ಎಲ್ಲಿಗೆ ಹೋಗಬೇಕು? ಈ ಮಕ್ಕಳು ಹೈಸ್ಕೂಲ್ ಹೊತ್ತಿಗೆ ಸ್ಕೂಲು ಬಿಡುತ್ತಿವೆ ಅಥವಾ ಅನಿವಾರ್ಯವಾಗಿ ಎಲ್ಲೋ ವಿರಳವಾಗಿಯಷ್ಟೇ ಇರುವ

ಇಂಗ್ಲಿಷ್ ಮಾಧ್ಯಮವನ್ನು ಹುಡುಕಿಕೊಂಡು ಹೋಗುತ್ತಿವೆ.

ಈ ಮಕ್ಕಳು ತಮ್ಮ ಆರ್ಥಿಕ ಬೆಳವಣಿಗೆಗಾಗಿಯಾದರೂ ವಿಷಯಗಳನ್ನು ಅತ್ಯಂತ ಸಮರ್ಥವಾಗಿ ಇಂಗ್ಲಿಷಿನಲ್ಲಿ ಕಲಿಯುವುದು ಅನಿವಾರ್ಯವಾಗಿದೆ. ಇನ್ನು ಇವತ್ತಿನ ಖಾಸಗಿ ಉದ್ಯೋಗಗಳ ಜಗತ್ತಿನಲ್ಲಿ ಇಂಗ್ಲಿಷನ್ನು ಚೆನ್ನಾಗಿ ಬಳಸುವ ಸಾಮರ್ಥ್ಯವನ್ನು ರಾಜ್ಯದ ಒಳಹೊರಗೆ ಬಗೆಬಗೆಯ ಉದ್ಯೋಗಗಳನ್ನು ಹುಡುಕುವ ಎಲ್ಲ ವರ್ಗದವರೂ ಪಡೆಯಬೇಕಾಗಿದೆ; ಇದು ಹೊಟ್ಟೆಪಾಡಿಗೆ ಸಂಬಂಧಿಸಿದ ಪ್ರಶ್ನೆ ಕೂಡ.

ಭಾಷೆಯೇ ಒಂದು ಆಸ್ತಿಯಾಗಿರುವ ಈ ಕಾಲದಲ್ಲಿ ಹೆಣ್ಣುಮಕ್ಕಳ ಉದ್ಯೋಗದ ಸಾಧ್ಯತೆಗಳು ಹಾಗೂ ಆತ್ಮವಿಶ್ವಾಸ ಹೆಚ್ಚಿರುವುದರಲ್ಲಿ ಇಂಗ್ಲಿಷಿನ ಪಾಲೂ ಹೆಚ್ಚಾಗಿದೆ ಎಂಬುದನ್ನು ಮರೆಯಬಾರದು.

ಇವತ್ತು ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಜಾರಿಯನ್ನು ವಿರೋಧಿಸುತ್ತಿರುವವರು ಹಾಗೂ ಅದನ್ನು ಕನ್ನಡ ವಿರೋಧಿ ಎಂದು ತಿಳಿದವರು ನಿಜಕ್ಕೂ ಕನ್ನಡವನ್ನು ಉಳಿಸಬೇಕಾಗಿರುವುದು ಖಾಸಗಿ ಶಾಲೆಗಳಲ್ಲಿ. ಕನ್ನಡವನ್ನು ಒಂದು ಭಾಷೆಯಾಗಿ ಕೂಡ ಕಲಿಯಲು ಅವಕಾಶ ಕೊಡದ ಅನೇಕ ಶಾಲೆಗಳು ಇಂಗ್ಲಿಷ್, ಹಿಂದಿ, ಸಂಸ್ಕೃತಗಳನ್ನು ಕಲಿಸುತ್ತಿರುವುದರಿಂದ ಹಾಗೂ ಈ ಧೋರಣೆಗೆ ಕನ್ನಡ ತಂದೆತಾಯಿಗಳೇ ಕುಮ್ಮಕ್ಕು ಕೊಡುತ್ತಿರುವುದರಿಂದ ಕನ್ನಡಕ್ಕೆ ಹೆಚ್ಚಿನ ಧಕ್ಕೆಯಾಗುತ್ತಿದೆ.

ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಪ್ರತಿ ತರಗತಿಗೆ ಎರಡು ಕನ್ನಡ ಭಾಷಾಪತ್ಯಗಳನ್ನಿಟ್ಟು ಈ ಮಕ್ಕಳು ಕನ್ನಡವನ್ನು ದಕ್ಷವಾಗಿ ಕಲಿಯುವಂತೆ ಮಾಡುವುದು ಅತ್ಯಂತ ಮುಖ್ಯವಾಗಿದೆ. ಹಾಗೆಯೇ ಕನ್ನಡ ಮಾಧ್ಯಮದ ಮಕ್ಕಳು ಕಲಿಯುತ್ತಿರುವ ಇಂಗ್ಲಿಷಿನ ಕ್ರಮವನ್ನು ಇನ್ನಷ್ಟು ಸುಧಾರಿಸಬೇಕು.

ಹಾಗೆಯೇ ಐದನೇ ತರಗತಿಯವರೆಗೆ ಹಾಗೂ ಆನಂತರ ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಸರ್ಕಾರಿ ಹುದ್ದೆಗಳನ್ನು ಹಾಗೂ ಹೆಚ್ಚು ಶೈಕ್ಷಣಿಕ ಅವಕಾಶಗಳನ್ನು ಮೀಸಲಿಟ್ಟು, ಪ್ರೋತ್ಸಾಹ ವೇತನಗಳನ್ನು ಕೂಡ ನೀಡಿ ಈ ಬಡ ಮಕ್ಕಳ ಭವಿಷ್ಯವನ್ನು ರೂಪಿಸಬೇಕು.

* * *

ಗ್ರಹಿಕೆಗೆ ಇಂಗ್ಲಿಷ್; ವಿಷಯ ಜ್ಞಾನಕ್ಕೆ ಕನ್ನಡ

– ಯು.ಆರ್.ಅನಂತಮೂರ್ತಿ

ಶಿಕ್ಷಣ ಮಾಧ್ಯಮದ ಕುರಿತ ಚರ್ಚೆಯು ಕನ್ನಡದ ವಿರುದ್ಧ ಇಂಗ್ಲಿಷ್ ಅಥವಾ ಇಂಗ್ಲಿಷ್ ವಿರುದ್ಧ ಕನ್ನಡ ಎಂಬ ತಿರುವು ಪಡೆದುಕೊಳ್ಳುತ್ತಿದೆ. ಈ ಬಗೆಯ ಚರ್ಚೆ ಶೈಕ್ಷಣಿಕವಾಗಿ ಮಕ್ಕಳಿಗೆ ಯಾವುದು ಉತ್ತಮ ಎಂಬುದನ್ನು ಹೇಳುವುದಕ್ಕಿಂತ ಹೆಚ್ಚಾಗಿ ಭಾಷೆಯನ್ನು ಕೇಂದ್ರವಾಗಿಟ್ಟುಕೊಂಡು ನಡೆಯುವ ರಾಜಕಾರಣವನ್ನು ಉದ್ದೀಪಿಸುತ್ತದೆ.

ಗೆಳೆಯ ನಟರಾಜ್ ಹುಳಿಯಾರ್ ಅವರು 'ಅಂತರಾಳ'ದಲ್ಲಿ (೧೬ ಜೂನ್, ೨೦೧೨) ಬರೆದಿರುವ ಲೇಖನವೂ ಈ ಬಗೆಯ ಸರಳೀಕೃತ ವಾದವೊಂದನ್ನೇ ಮಂಡಿಸುತ್ತಿದೆ. ಒಬ್ಬ ಬೋಧಕನಾಗಿ ಶಿಕ್ಷಣ ನೀತಿಗಳನ್ನು ರೂಪಿಸುವ ಕ್ರಿಯೆಯಲ್ಲಿ ಸಕ್ರಿಯ ಪಾತ್ರವಹಿಸಿದ ಅನುಭವಗಳ ಹಿನ್ನೆಲೆಯಲ್ಲಿ ಶೈಕ್ಷಣಿಕವಾಗಿ ಯಾವುದು ಅಗತ್ಯ ಎಂಬುದನ್ನು ಇಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ.

ಕೇರಳದಲ್ಲಿ ಸರ್ಕಾರಿ ಶಾಲೆಗಳಿಗೆ ಪ್ರವೇಶ ಪಡೆಯುವ ಮಕ್ಕಳ ಸಂಖ್ಯೆ ಗಮನಾರ್ಹ ಪ್ರಮಾಣದಲ್ಲಿ ಕುಸಿಯಿತು. ಆಗ ಮುಖ್ಯಮಂತ್ರಿಯಾಗಿದ್ದ ಎ.ಕೆ. ಆಂಟನಿ ಈ ಕುಸಿತಕ್ಕೆ ಕಾರಣವೇನು ಎಂದು ಅರ್ಥ ಮಾಡಿಕೊಂಡು ಪರಿಹಾರ ಕಂಡುಕೊಳ್ಳಲು ಬಯಸಿದರು. ಸರ್ಕಾರಿ ಶಾಲೆಗಳಿಗೆ ಸೇರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಸರ್ಕಾರ ನೇಮಿಸಿರುವ ಶಿಕ್ಷಕರಿಗೆ ಕೆಲಸವಿಲ್ಲದಂತಾಗಿ ಹಲವು ಶಿಕ್ಷಕರಿಗೆ ಕೆಲಸ ಮಾಡಿಸಿಕೊಳ್ಳದೆಯೇ ಸಂಬಳ ಕೊಡಬೇಕಾಗಿ ಬಂದಿತ್ತು. ಈ ಸಮಸ್ಯೆಯ ಸ್ವರೂಪ ಅರಿತು, ಪರಿಹಾರವನ್ನು ಶಿಫಾರಸು ಮಾಡಬೇಕೆಂದು ನನ್ನ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿದರು. ನಾವು ಕೇರಳದಾದ್ಯಂತ ಸಂಚರಿಸಿ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು, ಅವುಗಳ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರ ಅಭಿಪ್ರಾಯವನ್ನು ತಿಳಿದೆವು. ಈ ಸಂದರ್ಭದಲ್ಲಿ ನಮಗೆ ಕಂಡುಬಂದ ವಿಚಾರಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತಗೊಳಿಸಬಹುದು.

ಸರ್ಕಾರಿ ಶಾಲೆಗಳಲ್ಲಿ ಬೋಧನೆಯ ತರಬೇತಿ ಪಡೆದ ಒಳ್ಳೆಯ ಶಿಕ್ಷಕರಿದ್ದಾರೆ. ಖಾಸಗಿ ಶಾಲೆಗಳಲ್ಲಿದ್ದ ಬಹುತೇಕ ಶಿಕ್ಷಕರು ಬೋಧನೆಗೆ ಸಂಬಂಧಿಸಿದ ಮೂಲಭೂತ ತರಬೇತಿಯನ್ನೂ ಪಡೆದಿಲ್ಲ. ಇದು ಗೊತ್ತಿದ್ದರೂ ಪಾಲಕರು ಮಕ್ಕಳನ್ನು ಇಂಗ್ಲಿಷ್ ಹೇಳಿಕೊಡುತ್ತಾರೆ ಎಂಬ ಏಕೈಕ ಕಾರಣಕ್ಕಾಗಿ ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಖಾಸಗಿ ಶಾಲೆಗಳ ಮಟ್ಟಿಗೆ ಇಂಗ್ಲಿಷ್ ಎಂಬುದು ಸೀಟು ಮಾರಾಟದ ತಂತ್ರ. ಸರ್ಕಾರಿ ಶಾಲೆಗಳಿಗೆ ಮಲಯಾಳಂನಲ್ಲಿ ಕಲಿಸುವುದೇ ಒಂದು ಮಿತಿ. ಕೇರಳದಲ್ಲಿ ಈ ಸ್ಥಿತಿ ಉದ್ಭವಿಸಿದ್ದರ ಹಿಂದೆ ಅನೇಕ ಸಾಮಾಜಿಕ ಕಾರಣಗಳಿದ್ದವು. ಸಾಮಾನ್ಯವಾಗಿ ಮಲಯಾಳಿ ಯುವಕರಿಗೆ ತಮ್ಮದೇ ರಾಜ್ಯದಲ್ಲಿ ಕೆಲಸ ಸಿಗುವುದಿಲ್ಲ. ಕೆಲಸ ಹುಡುಕಿ ಹೊರಡುವ ಇವರಿಗೆ ಜಗತ್ತಿನ ಯಾವುದೇ ಭಾಗದಲ್ಲಿ ದುಡಿಯಲು ಅನುಕೂಲಕರ ಭಾಷೆಯೆಂದರೆ ಇಂಗ್ಲಿಷ್ ಎಂಬುದರಲ್ಲಿ ಸಂಶಯವಿಲ್ಲ. ಪಾಲಕರು ಸಹಜವಾಗಿಯೇ ಇಂಗ್ಲಿಷ್ ಕಲಿಸುವ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುತ್ತಿದ್ದರು.

ಎಲ್ಲಾ ಪಾಲಕರಿಗೂ ಇರುವ ತಮ್ಮ ಮಕ್ಕಳು ಐಐಟಿ, ಐಐಎಂನಂಥ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯಬೇಕು ಎಂಬ ಆಸೆ ಮತ್ತು ಅದಕ್ಕೆ ಇಂಗ್ಲಿಷ್ ಅಗತ್ಯ ಮನೋಭಾವವಿರುತ್ತದೆ. ಇದನ್ನು ಸರಿ ಅಥವಾ ತಪ್ಪು ಎಂದು ಹೇಳುವುದಕ್ಕಿಂತ ಇದೊಂದು ಯುಗಧರ್ಮ ಎಂದು ಭಾವಿಸುವುದೇ ಹೆಚ್ಚು ಸೂಕ್ತ. ಇಂಥದ್ದೊಂದು ಸ್ಥಿತಿಯಲ್ಲಿ ಮಕ್ಕಳು ತಮ್ಮ ಸಂಸ್ಕೃತಿಯ ಜೊತೆಗಿನ ಸಂಬಂಧ ಕಳೆದುಕೊಳ್ಳದಂತೆ ಒಂದನೇ ತರಗತಿಯಿಂದಲೇ ಮಲಯಾಳಂ ಹಾಗೂ ಇಂಗ್ಲಿಷ್ ಎರಡರನ್ನೂ ಕಲಿಸುವ ದ್ವಿಭಾಷಾ ಮಾಧ್ಯಮವನ್ನು ಕಾರ್ಯರೂಪಕ್ಕೆ ತರುವ ಸಲಹೆಯನ್ನು ಸಮಿತಿ ನೀಡಿತು. ಇಂಗ್ಲಿಷ್ ಬೋಧನೆ ಹೇಗೆ? ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದು

ಎಂದರೆ 'ಅ, ಆ, ಇ, ಈ' ಕಲಿಸುವ ಬದಲಿಗೆ 'A B C D, ಕಲಿಸುವುದಲ್ಲ. ಕನ್ನಡ ಅಕ್ಷರಗಳನ್ನು ಕನ್ನಡ ಬಾರದವರಿಗೆ ಕಲಿಸಿದರೂ ಅವರು ಕನ್ನಡವನ್ನು ಓದಬಹುದು. ಆದರೆ ಇಂಗ್ಲಿಷ್ ಗೊತ್ತಿಲ್ಲದವರು ರೋಮನ್ ಅಕ್ಷರಗಳನ್ನು ಕಲಿತ ಮಾತ್ರಕ್ಕೆ ಇಂಗ್ಲಿಷ್ ಓದಲು ಸಾಧ್ಯವಿಲ್ಲ. cut ಎಂಬುದನ್ನು 'ಕಟ್' ಎಂದು, but ಎಂದು ಬರೆದಾಗ 'ಬಟ್' ಎಂದೂ ಓದಲು ಸಾಧ್ಯವಾಗಬೇಕಾದರೆ ಇಂಗ್ಲಿಷ್ ಭಾಷೆ ಗೊತ್ತಿರಬೇಕಾಗುತ್ತದೆ.

ಇದನ್ನು ಸಾಧಿಸುವುದಕ್ಕಾಗಿ ತರಗತಿಗಳಲ್ಲಿ ಇಂಗ್ಲಿಷ್‌ನಲ್ಲಿ ಸುಲಭವಾಗಿ ಅಭಿವ್ಯಕ್ತಿಸಲು ಸಾಧ್ಯವಿರುವ ವಿಷಯಗಳನ್ನು ಮಾತನಾಡಬೇಕು. ಮಕ್ಕಳು ಅದಕ್ಕೆ ಇಂಗ್ಲಿಷ್‌ನಲ್ಲೇ ಪ್ರತಿಕ್ರಿಯಿಸಬೇಕು ಎಂಬ ಸಲಹೆ ನಮ್ಮದಾಗಿತ್ತು. ಈ ಪ್ರಕ್ರಿಯೆಯಲ್ಲಿ ಕಲಿಯುವುದನ್ನು ನಾನು 'ಅಬ್ಯೂಸಿಂಗ್ ಇಂಗ್ಲಿಷ್' ಎಂದು ಕರೆಯುತ್ತೇನೆ. ಇಂಗ್ಲಿಷನ್ನು 'ಯೂಸ್' ಮಾಡುವುದಕ್ಕೆ ಮೊದಲು ಅದನ್ನು 'ಅಬ್ಯೂಸ್' ಮಾಡುವ ಅಗತ್ಯವಿದೆ.

ಇಂಗ್ಲಿಷ್ ಮಾತನಾಡುವಾಗ ತಪ್ಪಾಗುವುದು ಸಹಜ ಎಂದು ಎಲ್ಲರಿಗೂ ಅನ್ನಿಸುವಂತೆ ಇಂಗ್ಲಿಷನ್ನು ಹಗುರಗೊಳಿಸಬೇಕು. ಬೆಂಗಳೂರಿನ ಮಕ್ಕಳು ಪಕ್ಕದ ಮನೆಯಲ್ಲಿ ತಮಿಳು ಮಾತನಾಡುವ ಮಕ್ಕಳಿದ್ದರೆ ಅವರೊಂದಿಗೆ ತಪ್ಪು ತಪ್ಪಾಗಿ ಮಾತನಾಡುತ್ತಾ ತಮಿಳು ಕಲಿತಂತೆ, ಮಂಗಳೂರಿನ ಮಕ್ಕಳು ಕನ್ನಡ, ಕೊಂಕಣಿ, ತುಳುಗಳನ್ನು ಒಟ್ಟೊಟ್ಟಿಗೇ ಕಲಿತಂತೆ ಇಂಗ್ಲಿಷನ್ನೂ ಕಲಿಯುತ್ತಾರೆ.

ಇದಕ್ಕಾಗಿ ಮಾತನಾಡುವುದು, ಸಿನಿಮಾಗಳನ್ನು ನೋಡುವುದು, ಹಾಡುಗಳನ್ನು ಕೇಳುವುದು, ಕ್ರಿಕೆಟ್ ಕಮೆಂಟರಿ ಕೇಳುವುದು ಇಂಥ ಅನೇಕ ಚಟುವಟಿಕೆಗಳನ್ನು ಬಳಸಿಕೊಳ್ಳಬಹುದು. ಒಮ್ಮೆ ಮಕ್ಕಳಿಗೆ ಇಂಗ್ಲಿಷ್‌ನಲ್ಲಿ ಸಂವಹನ ಸಾಧ್ಯವಾದ ಮೇಲೆ ಅದನ್ನು ಓದಲು ಮತ್ತು ಬರೆಯಲು ಸುಲಭವಾಗಿ ಕಲಿಸಬಹುದು. ಈ ವಿಧಾನ ಕೇವಲ ಸರ್ಕಾರಿ ಶಾಲೆಗಳಿಗೆ ಮಾತ್ರ ಸೀಮಿತವಾಗಬಾರದು ಇದು ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕ ನೀತಿಯಾಗಬೇಕು.

ಭಾರತದ ಸಂದರ್ಭದಲ್ಲಿ ಮಾತೃಭಾಷೆ ಎಂಬ ಪರಿಕಲ್ಪನೆಯನ್ನು ಬಳಸುವುದು ಕಷ್ಟ. ನಮ್ಮಲ್ಲಿರುವುದು ಮನೆ ಮಾತು, ಬೀದಿ ಮಾತು ಮತ್ತು ಅಟ್ಟದ ಮಾತುಗಳು ಮಾತ್ರ ಎಂದು ಈ ಹಿಂದೆಯೂ ಅನೇಕ ಬಾರಿ ನಾನು ಹೇಳಿದ್ದೇನೆ.

ಮಕ್ಕಳು ಹೆಚ್ಚು ಕಲಿಯುವುದು ಮನೆಯ ಹೊರಗೆ. ಈ ಕಲಿಕೆಯ ಭಾಷೆ ಕರ್ನಾಟಕದ ಮಟ್ಟಿಗೆ ಕನ್ನಡ. ವಾಸ್ತವದಲ್ಲಿ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮುಖ್ಯವಾಗುವ ಬಹುತೇಕ ವಿಷಯಗಳನ್ನು ಬೀದಿಯ ಭಾಷೆಯಲ್ಲಿ ಕಲಿಸುವುದು ಅಗತ್ಯ.

ಸಮಾಜ ವಿಜ್ಞಾನಗಳೆಂದು ವಿಭಾಗೀಕರಿಸಿರುವ ಎಂದು ನಾವು ಕರೆಯುವ ಇತಿಹಾಸ, ಪೌರನೀತಿಯಂಥ ವಿಷಯಗಳನ್ನು ಬೀದಿಯ ಭಾಷೆ ಅಥವಾ ಪರಿಸರದ ಭಾಷೆಯಲ್ಲಿ ಕಲಿಸುವುದೇ ಸೂಕ್ತ.

ಕರ್ನಾಟಕದಲ್ಲೇನು ಮಾಡಬಹುದು? ಮೇಲೆ ವಿವರಿಸಿದ ಅಂಶಗಳ ಆಧಾರದಲ್ಲಿ ಕರ್ನಾಟಕದಲ್ಲಿ ಏನು ಮಾಡಬಹುದು ಎಂಬುದನ್ನು ಯೋಚಿಸಬಹುದು. ನಾವು ಕನ್ನಡ ಮಾಧ್ಯಮ ಶಾಲೆಗಳು ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳು

ವಿಭಾಗೀಕರಿಸಿ ಯೋಚಿಸುವುದರ ಬದಲಿಗೆ ಎಲ್ಲಾ ಶಾಲೆಗಳಲ್ಲೂ ಎರಡೂ ಮಾಧ್ಯಮಗಳಲ್ಲಿ ಶಿಕ್ಷಣ ನೀಡುವ ವ್ಯವಸ್ಥೆಯೊಂದನ್ನು ರೂಪಿಸಬೇಕು.

ಇದೇ ಸಲಹೆಯನ್ನು ನನ್ನ ನೇತೃತ್ವದ ಸಮಿತಿ ಕೇರಳ ಸರ್ಕಾರಕ್ಕೂ ನೀಡಿತ್ತು. ಆದರೆ ಖಾಸಗಿ ಇಂಗ್ಲಿಷ್ ಶಾಲೆಗಳ ಲಾಬಿ ಇದಕ್ಕೆ ತಡೆಯೊಡ್ಡಿತು. ಎಲ್ಲಾ ಶಾಲೆಗಳಲ್ಲಿ ದ್ವಿ ಮಾಧ್ಯಮ ಎಂಬುದು ಸಾಧಿಸಲಾಗದ ಗುರಿಯೇನೂ ಅಲ್ಲ. ಇದು ಸಾಮಾನ್ಯ ಶಾಲೆಗಳನ್ನು ಸ್ಥಾಪಿಸುವ ಹಾದಿಯಲ್ಲಿ ಒಂದು ಮುಖ್ಯ ಹೆಜ್ಜೆಯಾಗುತ್ತದೆ.

ಒಂದು ವೇಳೆ ಸಾಮಾನ್ಯ ಶಾಲೆ ಎಂಬ ಪರಿಕಲ್ಪನೆ ತಕ್ಷಣಕ್ಕೆ ಕಾರ್ಯರೂಪಕ್ಕೆ ಬಾರದೇ ಇದ್ದರೂ ಶ್ರೀಮಂತ ಕುಟುಂಬದ ವಿದ್ಯಾರ್ಥಿಗಳಿಗೆ ಒಂದು ಬಗೆಯ ಶಿಕ್ಷಣ, ಬಡ ಕುಟುಂಬದ ಮಕ್ಕಳಿಗೆ ಮತ್ತೊಂದು ಬಗೆಯ ಶಿಕ್ಷಣ ಎಂಬ ಸ್ಥಿತಿಯನ್ನಾದರೂ ದ್ವಿಮಾಧ್ಯಮವನ್ನು ಸಾರ್ವತ್ರಿಕ ಶಿಕ್ಷಣ ನೀತಿಯನ್ನಾಗಿಸುವ ಮೂಲಕ ತಪ್ಪಿಸಬಹುದು.

ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಕನ್ನಡವನ್ನು ಕೇವಲ ಒಂದು ಭಾಷೆಯಾಗಿ ಕಲಿಸುವುದರಿಂದ ಹೆಚ್ಚು ಉಪಯೋಗವಿಲ್ಲ. ಕೆಲವು ವಿಷಯಗಳನ್ನೇ ಕನ್ನಡದಲ್ಲಿ ಕಲಿಸಬೇಕು. ಮಾನವಿಕ ವಿಷಯಗಳು ಇದಕ್ಕೆ ಹೆಚ್ಚು ಸೂಕ್ತ. ಹಾಗೆಯೇ ವಿಜ್ಞಾನ ವಿಷಯಗಳನ್ನು ಇಂಗ್ಲಿಷ್‌ನಲ್ಲಿ ಹೇಳಿಕೊಡಬೇಕು.

ಇದರ ಅರ್ಥ ವಿಜ್ಞಾನ ಇಂಗ್ಲಿಷ್‌ನಲ್ಲಿದೆ ಎಂದಲ್ಲ. ಭೌತಶಾಸ್ತ್ರ, ಗಣಿತ, ರಸಾಯನಶಾಸ್ತ್ರಗಳಂಥವಕ್ಕೆ ಅವುಗಳದ್ದೇ ಒಂದು ಭಾಷೆ ಇದೆ. ಆ ಭಾಷೆ ಇಂಗ್ಲಿಷ್‌ನ ಒಳಗಿದೆ ಅಷ್ಟೇ. ಇಂಗ್ಲಿಷ್ ಗೊತ್ತಾದ ಮಾತ್ರಕ್ಕೆ ಈ ವಿಷಯಗಳೇನೂ ಅರ್ಥವಾಗುವುದಿಲ್ಲ.

ಇಂಗ್ಲಿಷ್‌ನ ಒಳಗಿರುವ ಈ ವಿಷಯಗಳ ಭಾಷೆಯನ್ನು ವಿದ್ಯಾರ್ಥಿ ಅರಿತುಕೊಂಡಾಗ ಮಾತ್ರ ಅವನು ಕಲಿಯುತ್ತಾನೆ. ಹಾಗೆಯೇ ನಿರ್ದಿಷ್ಟ ವಿಷಯವನ್ನು ಅದರ ಮೂಲ ಭಾಷೆಯಲ್ಲೇ ಕಲಿಯುವ ಅನುಕೂಲವೂ ಇದರಲ್ಲಿದೆ.

ಮಾನವಿಕಗಳನ್ನು ಕನ್ನಡದಲ್ಲಿ ಬೋಧಿಸುವುದರಿಂದ ಆಗುವ ಅನುಕೂಲವೂ ಇದುವೇ. ಕರ್ನಾಟಕದ ಇತಿಹಾಸದ ಬಗ್ಗೆ, ಕರ್ನಾಟಕದ ಭೌಗೋಳಿಕ ಸ್ಥಿತಿಯ ಬಗ್ಗೆ ಇಂಗ್ಲಿಷ್‌ನಲ್ಲಿ ಏನನ್ನು ಹೇಳಿದರೂ ಅದನ್ನು ಕನ್ನಡಕ್ಕೆ ಅನುವಾದಿಸಿಕೊಂಡೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಇದಕ್ಕೆ ಸಂಬಂಧಿಸಿದ ಆಕರಗಳೆಲ್ಲವೂ ಕನ್ನಡದಲ್ಲಿಯೇ ಇರುತ್ತವೆಯಾದ್ದರಿಂದ ಕನ್ನಡದಲ್ಲಿ ಇವುಗಳನ್ನು ಕಲಿಯುವುದು ವಿದ್ಯಾರ್ಥಿಗೆ ಹೆಚ್ಚು ಅನುಕೂಲ. ಉನ್ನತ ಶಿಕ್ಷಣಕ್ಕೆ ಹೋಗುವ ಹೊತ್ತಿಗೆ ಇಂಗ್ಲಿಷ್‌ನಲ್ಲಿ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಗಳಿಸಿಕೊಂಡಿರುವ ವಿದ್ಯಾರ್ಥಿಗಳು ಬಹಳ ಸುಲಭವಾಗಿ ಮೂಲ ಆಕರಗಳಿಂದಲೇ ವಿಷಯ ಸಂಗ್ರಹಿಸಿ ಇಂಗ್ಲಿಷ್‌ನಲ್ಲಿ ಮಂಡಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಕನ್ನಡವಷ್ಟೇ ಇರುವ ಒಂದು ಜಗತ್ತಿನಿಂದ ನಮ್ಮ ಮಕ್ಕಳು ದೂರವಾಗುವುದಿಲ್ಲ.

ತಂತ್ರಜ್ಞಾನವೆಂದರೆ ಇಂಗ್ಲಿಷ್ ಎಂಬ ಭ್ರಮೆಯೊಂದಿದೆ. ವಾಸ್ತವ ಹಾಗಿಲ್ಲ. ಕಂಪ್ಯೂಟರ್ ಸಾಫ್ಟ್‌ವೇರ್ ರೂಪಿಸುವವರಿಗೆ ಮಾತ್ರ ಇಂಗ್ಲಿಷ್ ಒಂದು ಕೌಶಲವಾಗಿ ಅಗತ್ಯ ಎನ್ನುವುದು ಬಿಟ್ಟರೆ ಉಳಿದ ತಂತ್ರಜ್ಞಾನಕ್ಕೆ ಭಾಷೆಗಿಂತ ಕೌಶಲ ಮುಖ್ಯ. ಆರ್ಕಿಟೆಕ್ಚರ್‌ನಲ್ಲಿ ಪದವಿ ಪಡೆದವನು ತನ್ನ ಅರಿವಿನಿಂದ ಕಟ್ಟಡವನ್ನು ಕಾಗದದ

ಮೇಲೆ ವಿನ್ಯಾಸಗೊಳಿಸಬಹುದು.

ಆದರೆ ಅದನ್ನು ಕಟ್ಟಿಸುವ ಕ್ರಿಯೆಯಲ್ಲಿ ಅವನು ಮೇಸ್ತ್ರಿಯ ಜೊತೆಗೆ ಮಾತನಾಡಬೇಕಾಗಿರುವುದು ಯಾವ ಭಾಷೆಯಲ್ಲಿ? ಸಹಜವಾಗಿಯೇ ಅದು ಕನ್ನಡ, ತೆಲುಗು, ತಮಿಳಿನಂಥ ಒಂದು ಭಾಷೆಯಾಗಿರುತ್ತದೆ. ಆಗ ಆರ್ಕಿಟೆಕ್ಟ್ ತನ್ನ 'ವೈಜ್ಞಾನಿಕ ಪಾರಿಭಾಷಿಕ'ಗಳನ್ನು ಮೇಸ್ತ್ರಿಯ ಭಾಷೆಗೆ ಅನುವಾದಿಸಿಕೊಂಡು ವಿವರಿಸಬೇಕು. ಹಾಗೆ ನೋಡಿದರೆ ಆರ್ಕಿಟೆಕ್ಚರ್ ಕಲಿಯುವ ಪ್ರಕ್ರಿಯೆಯಲ್ಲಿ ಆತ ಮೇಸ್ತ್ರಿಯ ಭಾಷೆಯನ್ನು ತನ್ನ ಪಾರಿಭಾಷಿಕ ಭಾಷೆಗೆ ಅನುವಾದಿಸಿಕೊಂಡಿರುತ್ತಾನೆ ಎಂಬುದೇ ನಿಜ.

ನಮ್ಮ ಶಿಕ್ಷಣ ಪದ್ಧತಿಯನ್ನು ವಿನ್ಯಾಸಗೊಳಿಸುವಾಗ ದೈಹಿಕ ಕೌಶಲದ ಮೂಲಕ ಕನ್ನಡದಂಥ ಭಾಷೆಗಳಲ್ಲೇ ಬದುಕು ಕಂಡುಕೊಂಡಿರುವವರಲ್ಲಿ ಇರುವದೂ ಜ್ಞಾನ ಎಂದು ನಾವು ಭಾವಿಸದೇ ಇದ್ದುದರಿಂದ ಈ ಕಂದಕವಿದೆ. ದ್ವಿಭಾಷಾ ಮಾಧ್ಯಮವನ್ನು ಬಳಸುವುದರಿಂದ ಈ ಕಂದಕವನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಬಹುದು.

ಕನ್ನಡವಷ್ಟೇ ಬಲ್ಲ ಮೇಸ್ತ್ರಿಯ ಜ್ಞಾನಕ್ಕೂ ಆರ್ಕಿಟೆಕ್ಚರ್ ಪದವೀಧರನ ಆಧುನಿಕ ಅರಿವಿಗೂ ಸಂಬಂಧ ಕಲ್ಪಿಸುವ ಒಂದು ಸಾಧ್ಯತೆಯನ್ನಾದರೂ ತೆರೆಯಬಹುದು.

ಇಂಗ್ಲಿಷ್‌ನ ಸಮಸ್ಯೆ: ಒಂದೊಂದು ಕಾಲದಲ್ಲಿ ಕೆಲವು ಭಾಷೆಗಳು ಜ್ಞಾನದ ಭಾಷೆಗಳಾಗಿಬಿಡುತ್ತವೆ.

ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿದ್ದಾಗ ಭೌತಶಾಸ್ತ್ರವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳು ಜರ್ಮನ್ ಭಾಷೆಯನ್ನು ಕಲಿಯುವುದು ಕಡ್ಡಾಯವಾಗಿತ್ತು. ಸಿ.ವಿ. ರಾಮನ್‌ರಂಥ ವಿಜ್ಞಾನಿಗಳು ಜರ್ಮನ್ ಕಲಿಯದಿದ್ದರೆ ಭೌತಶಾಸ್ತ್ರ ಅರ್ಥವೇ ಆಗುವುದಿಲ್ಲ ಎಂದು ಭಾವಿಸಿದ್ದರು.

ಒಂದು ಕಾಲದಲ್ಲಿ ಭಾರತದ ವೈದ್ಯರು ಉನ್ನತ ಶಿಕ್ಷಣಕ್ಕಾಗಿ ರಷ್ಯಾಕ್ಕೆ ಹೋಗಿ ರಷ್ಯನ್ ಭಾಷೆ ಕಲಿತು ಉನ್ನತ ಶಿಕ್ಷಣವನ್ನು ಮುಗಿಸಿಕೊಂಡು ಬರುತ್ತಿದ್ದರು. ಈಗ ಅಂಥದ್ದೊಂದು ಸ್ಥಾನ ಇಂಗ್ಲಿಷ್‌ಗೆ ಬಂದುಬಿಟ್ಟಿದೆ. ಯೂರೋಪಿನ ವಿಜ್ಞಾನಿಗಳು ಮತ್ತು ಸಂಶೋಧಕರು ಇಂಗ್ಲಿಷ್‌ನಲ್ಲಿ ಬರೆದರಷ್ಟೇ ಜಗತ್ತಿನ ಜೊತೆಗೆ ಸಂವಹನ ಸಾಧ್ಯ ಎಂಬ ಸ್ಥಿತಿ ತಲುಪಿದ್ದಾರೆ (ಜಗತ್ತಿನ ಬೇರೆ ಭಾಗಗಳಲ್ಲೂ ಇದೇ ಸ್ಥಿತಿ ಇದೆ).

ಆ ಕಾರಣದಿಂದಾಗಿಯೇ ಅವರು ತಮ್ಮ ಭಾಷೆಯಲ್ಲಿರುವುದನ್ನು ಅಷ್ಟೇ ಸುಲಭವಾಗಿ ಇಂಗ್ಲಿಷ್‌ನಲ್ಲಿ ಹೇಳುವ ಕೌಶಲವನ್ನು ಕಲಿತುಕೊಂಡಿದ್ದಾರೆ. ಯಾವುದಾದರೊಂದು ಭಾಷೆ ಸದಾ ಕಾಲ ತನ್ನ ಈ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಸಾಧ್ಯ ಎನ್ನುವಂತಿಲ್ಲ. ಭಾರತದಲ್ಲಿ ಸಂಸ್ಕೃತಕ್ಕಿದ್ದ ಪ್ರಾಬಲ್ಯ ಈಗ ಇಲ್ಲ.

ಯೂರೋಪಿನಲ್ಲಿ ಲ್ಯಾಟಿನ್‌ಗೆ ಇಂಥದ್ದೇ ಸ್ಥಾನವಿತ್ತು. ಈಗ ಅದನ್ನು ಇಂಗ್ಲಿಷ್ ಆಕ್ರಮಿಸಿಕೊಂಡಿದೆ. ಇಂಗ್ಲಿಷ್‌ನ ಇಂಟರ್ ನ್ಯಾಷನಲ್ ಲಾಂಗ್ವೇಜ್ ಸ್ಥಾನ ಶಾಶ್ವತ ಎಂದುಕೊಳ್ಳಲು ಯಾವ ಆಧಾರವಿದೆ? ಮುಂದೊಂದು ದಿನ ಈ ಸ್ಥಾನ ಚೀನೀ ಭಾಷೆಗೆ ದೊರೆಯಲೂಬಹುದು ಎಂಬುದನ್ನು ನಾವು ಮರೆಯುವಂತಿಲ್ಲ.

ಆದ್ದರಿಂದ ನಮಗೆ ಈಗ ಗ್ರಹಿಕೆಗೆ ಇಂಗ್ಲಿಷ್‌ಮುಖ್ಯ. ವಿಷಯ ಜ್ಞಾನ ಪಡೆಯಲು ನಮ್ಮ ಭಾಷೆ ಅಷ್ಟೇ ಮುಖ್ಯ.

* * *

ಮಾತೃಭಾಷೆಯ ಬೇರಿಗೆ ಜಾಗತಿಕ ಭಾಷೆಯ ನೀರು

– ಡಾ.ಎಂ.ಎಸ್.ತಿಮ್ಮಪ್ಪ

'ಭಾಷೆ ಅಭಿವ್ಯಕ್ತಿಯ ಮಾಧ್ಯಮ, ನಮ್ಮ ವಿಚಾರ, ಆಲೋಚನೆಗಳನ್ನು ಅಭಿವ್ಯಕ್ತಿಗೊಳಿಸುವ ಭಾಷೆ ಸಂದೇಶ ಮುಟ್ಟಿಸುವ ವಾಹಕ.....' ನಿಲ್ಲಿ, ಭಾಷೆ ಅಂದರೆ ಅದಷ್ಟೇ ಅಲ್ಲ. ಅದಕ್ಕಿಂತ ಹೆಚ್ಚಿನದು. 'ಭಾಷೆ ಅಂದರೆ ಆಲೋಚನೆಗಳ ಅಭಿವ್ಯಕ್ತಿ ಮಾತ್ರವಲ್ಲ, ಅದೇ ಒಂದು ಆಲೋಚನೆ' ಎಂದು ರಷ್ಯಾದ ಮನಶಾಸ್ತ್ರಜ್ಞ ವ್ಯಗೊಟೊಸ್ಕಿ ಹೇಳಿದ್ದಾನೆ.

ಈ ಭಾಷಾ ಪ್ರಯೋಗ ನೋಡಿ: ಪಾಶ್ಚಿಮಾತ್ಯ ದೇಶಗಳ ಬಹುತೇಕ ಜನ 'ಐ ಆಮ್ ಆ?ಯಂಗ್ರಿ' ಎನ್ನುತ್ತಾರೆ. ಇದನ್ನು ಶಬ್ದಶಃ ಅನುವಾದ ಮಾಡಿದಲ್ಲಿ 'ನಾನೇ ಸಿಟ್ಟು' ಎಂಬ ಅರ್ಥ ಬರುತ್ತದೆ. ಅದೇ ಪೌರ್ವಾತ್ಯ ದೇಶಗಳ ಜನ 'ನನಗೆ ಕೋಪ ಬಂತು' ಎಂದು ಹೇಳುತ್ತಾರೆ (ಹಿಂದಿಯಲ್ಲಾದರೆ 'ಮುಜೆ ಗುಸ್ಸಾ ಆಗಯಾ').

ಈ ಎರಡೂ ವಾಕ್ಯಗಳು ಒಂದೇ ಅರ್ಥ ನೀಡುತ್ತಿದ್ದರೂ ದೃಷ್ಟಿಕೋನ ಬೇರೆಯಾಗಿದೆಯಲ್ಲವೇ? ಇಂಗ್ಲಿಷ್ ವಾಕ್ಯವನ್ನು ಹೇಳುತ್ತಿರುವ ವ್ಯಕ್ತಿ ಆ ಭಾವನೆಯ ಜತೆ ತನ್ನನ್ನು ಗುರುತಿಸಿಕೊಂಡಿದ್ದಾನೆ. ಮತ್ತೊಂದರಲ್ಲಿ ಭಾವನೆ ಮತ್ತು ವ್ಯಕ್ತಿ ಬೇರೆಯಾಗಿದ್ದಾರೆ. ಭಾಷೆ ನಮ್ಮ ದೃಷ್ಟಿಕೋನವನ್ನು ರೂಪಿಸುತ್ತದೆ.

ಮಾತೃಭಾಷೆಯ ಮೂಲಕವೇ ನಾವು ನಮ್ಮೊಳಗಿನ ಹಾಗೂ ನಮ್ಮ ಸುತ್ತಲಿನ ಜಗತ್ತಿನ ಬಗ್ಗೆ ಅರಿವು ಪಡೆದುಕೊಳ್ಳುತ್ತೇವೆ. ಒಬ್ಬ ವ್ಯಕ್ತಿಗೆ ಸಾಮಾಜಿಕ ಪರಿಸರದ ಪರಿಕಲ್ಪನೆ ಭಾಷೆಯಿಂದಲೇ ಬರುತ್ತದೆ. ನಮ್ಮ ಮಾತೃಭಾಷೆಯನ್ನು ಅರಿತುಕೊಳ್ಳದಿದ್ದಲ್ಲಿ ನಮ್ಮ ಜನ, ಸಂಸ್ಕೃತಿ ಹಾಗೂ ಸಮಾಜದಿಂದಲೇ ನಾವು ದೂರವಾಗಿ ಒಬ್ಬಂಟಿಯಾಗಿಬಿಡುತ್ತೇವೆ. ಇದೇ ಕಾರಣಕ್ಕೆ ನಮ್ಮ ಶಾಲೆಗಳಲ್ಲಿ ಬೋಧನಾ ಮಾಧ್ಯಮವಾಗಿ ಮಾತೃಭಾಷೆಯನ್ನು ಅಳವಡಿಸುವುದು ಸೂಕ್ತ.

ಆದರೆ, ಇಂದಿನ ಬಹುಮುಖಿ, ಬಹು ಆಯಾಮದ, ಜಾಗತೀಕರಣಗೊಂಡ ವಿಶ್ವದಲ್ಲಿ ನಾನು ಮತ್ತು ನನ್ನ ಸಂಸ್ಕೃತಿಯ ದೃಷ್ಟಿಕೋನದಿಂದ ಜಗತ್ತನ್ನು ನೋಡಿದರೆ ಸಾಕೆ? ಕೇವಲ ಮಾತೃಭಾಷಾ ಸಂಸ್ಕೃತಿಯ ದೃಷ್ಟಿಕೋನ ಹೊಂದಿದ ನಾನು ಬಹು ಸಂಸ್ಕೃತಿಯ ಜನರನ್ನು ಅರ್ಥ ಮಾಡಿಕೊಳ್ಳುವುದು, ಸಹಿಸಿಕೊಳ್ಳುವುದು ಹೇಗೆ? ಭಾಷೆ ಎಂಬುದು ನನ್ನ ಬೆಳವಣಿಗೆಗಾಗಿ ವೈವಿಧ್ಯಮಯ ಜಗತ್ತಿನ ಜತೆ ವ್ಯವಹರಿಸಲು ಅನುವು ಮಾಡಿಕೊಡುವ ಒಂದು ಸಾಧನ.

ಅಲ್ಲದೇ ನನ್ನ ಮಾತೃಭಾಷೆ ಕನ್ನಡದಂತೆ ಯಾವುದೇ ಒಂದು ಭಾಷೆಯ ಮೂಲಕ ಜಗತ್ತನ್ನು, ಜಗತ್ತಿನ ಆಗುಹೋಗುಗಳನ್ನು, ಜ್ಞಾನವನ್ನು ಸಂಪೂರ್ಣವಾಗಿ ಪಡೆದುಕೊಳ್ಳಲು ಸಾಧ್ಯವಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ

ಕನ್ನಡದಲ್ಲಿ ಅತ್ಯುತ್ತಮ ಪುಸ್ತಕಗಳು ಈಗಲೂ ಇಲ್ಲ.

ಮಾತೃಭಾಷೆ ಹೊರತಾಗಿ ಬೇರೆ ಭಾಷೆ ತಿಳಿದಿಲ್ಲ ಎಂಬ ಒಂದೇ ಕಾರಣಕ್ಕೆ ವಿಜ್ಞಾನದ ಬಗ್ಗೆ ಅರಿಯುವ ಹಕ್ಕಿನಿಂದ ನಾನು ವಂಚಿತನಾಗಬೇಕೆ? ಕನ್ನಡದ ಜನರು ಜಗತ್ತಿನಲ್ಲಿ ಎರಡನೇ ದರ್ಜೆ ಪ್ರಜೆಗಳಾಗದೇ ಮೊದಲ ದರ್ಜೆಯ ಪ್ರಜೆಗಳಾಗಬೇಕು. ವಿಶ್ವದ ಮೊದಲ ದರ್ಜೆ ಪ್ರಜೆಯಾಗುವ ಅವಕಾಶದಿಂದ ಕನ್ನಡಿಗರನ್ನು ವಂಚಿಸಬಾರದು.

ನಮ್ಮ ಭಾರತದಲ್ಲಿ ಒಂದು ವಿಚಿತ್ರ ಸನ್ನಿವೇಶವಿದೆ. ಇಂಗ್ಲಿಷ್ ಅರಿತವರು, ಇಂಗ್ಲಿಷ್‌ನಲ್ಲಿ ಶಿಕ್ಷಣ ಪಡೆದವರು ಪ್ರತಿಷ್ಠಿತ ಉದ್ಯೋಗ ಗಿಟ್ಟಿಸಿಕೊಳ್ಳುತ್ತಾರೆ. ಮಾತೃಭಾಷೆಯಲ್ಲಿ ಶಿಕ್ಷಣ ಪಡೆದವರಿಗೆ ಕಡಿಮೆ ಸಂಬಳದ, ಚಿಕ್ಕ ಉದ್ಯೋಗ ದೊರಕುತ್ತದೆ. ಬಡವರು, ದಲಿತರು ಈ ವರ್ಗದಲ್ಲಿ ಬರುತ್ತಾರೆ.

ಉಳ್ಳವರು ಮತ್ತು ಇಲ್ಲದವರ ನಡುವಿನ ಸಾಮಾಜಿಕ ಅಂತರವನ್ನು ನಾವು ಸಹ ಹೆಚ್ಚಿಸುತ್ತಿಲ್ಲವೇ? ನಮ್ಮ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಮಾತೃಭಾಷೆಯ ಜತೆಯಲ್ಲಿ ಇಂಗ್ಲಿಷ್ ಅನ್ನು ವಿಷಯವಾಗಿ ಕಲಿಸುವುದು ಸೂಕ್ತವಲ್ಲವೇ?
ಏಕಭಾಷೆ, ದ್ವಿಭಾಷೆ ಹಾಗೂ ಬಹುಭಾಷೆಗಳು ಚಿಕ್ಕ ಮಕ್ಕಳ ಮೇಲೆ ಮಾಡುವ ಪರಿಣಾಮಗಳ ಕುರಿತ ಅಧ್ಯಯನದಲ್ಲಿ ಆಸಕ್ತಿಕರ ಸಂಗತಿ ಹೊರಬಿದ್ದಿದೆ.

ಒಂದು ಭಾಷೆಗಿಂತ ಹೆಚ್ಚಿನ ಭಾಷೆ ಕಲಿಯುವುದರಿಂದ ಮಕ್ಕಳ ಮನಸ್ಸು ಚುರುಕಾಗುತ್ತದೆ. ಅದಕ್ಕೆ ಉತ್ತೇಜನ ದೊರಕುತ್ತದೆ. ಮುಕ್ತ ವಿಚಾರಧಾರೆಯ ಸೃಜನಶೀಲ ವ್ಯಕ್ತಿಯಾಗಿ ಮಗು ರೂಪುಗೊಳ್ಳುತ್ತದೆ.

ಮಾತೃಭಾಷೆ ಬೇರು ಇದ್ದಂತೆ. ಅದು ನನ್ನ ಅಸ್ತಿತ್ವ ಹಾಗೂ ಅಸ್ಮಿತೆ. ಈ ಬೇರು ಹೆಮ್ಮರವಾಗಿ ಬೆಳೆಯಬೇಕು. ಕಾಂಡ, ರೆಂಬೆ, ಕೊಂಬೆ, ಎಲೆ, ಹೂವು, ಹಣ್ಣು ಈ ಮರದಲ್ಲಿ ಬೆಳೆಯಬೇಕು. ಅದಕ್ಕೆ ಬೆಳೆಯಲು ನೀರು ಬೇಕು. ಗಾಳಿ, ಸೂರ್ಯನ ಬೆಳಕು, ಮಣ್ಣು ಎಲ್ಲವೂ ಬೇಕು. ಜಾಗತಿಕ ಭಾಷೆ ಈ ಎಲ್ಲವನ್ನೂ ಒದಗಿಸುತ್ತದೆ. ನಾನು ನಾನಾಗಿ ಉಳಿಯಬಯಸುತ್ತೇನೆ. ಆ 'ನಾನು' ಜಗತ್ತಿನ ಎಲ್ಲವನ್ನೂ ಸ್ವೀಕರಿಸಬಯಸುತ್ತದೆ. ಜಗತ್ತಿನ ಎಲ್ಲರಿಗೆ, ಎಲ್ಲ ವಿದ್ಯಮಾನಗಳಿಗೆ ಸ್ಪಂದಿಸಬಯಸುತ್ತದೆ.

ಮಗುವಿನ ಬೆಳವಣಿಗೆ ಮತ್ತು ಭವಿಷ್ಯದ ದೃಷ್ಟಿಯಿಂದ ಮಾತೃಭಾಷೆ ಮತ್ತು ಇಂಗ್ಲಿಷ್‌ನಂತಹ ಜಾಗತಿಕ ಭಾಷೆಯನ್ನು ಶಾಲೆಯ ಮೊದಲ ದಿನದಿಂದಲೇ ಪರಿಚಯಿಸಬೇಕು. ಸಮಾಜ ಹಾಗೂ ಜಗತ್ತಿನ ದೃಷ್ಟಿಯಿಂದಲೂ ಇದು ಒಳಿತು. ದೇವರ ದೃಷ್ಟಿಯಲ್ಲಿಯೂ ಇದು ಅತ್ಯುತ್ತಮ. ಏಕೆಂದರೆ ಆತ 'ವಿಶ್ವಾತ್ಮ'. ಇಡೀ ಜಗತ್ತಿಗೆ ಸೇರಿದ ವ್ಯಕ್ತಿ. ವಿಶ್ವವೆಲ್ಲ ಒಂದೇ ಕುಟುಂಬ. ವಸುದೈವ ಕುಟುಂಬಕಂ...!

(ಲೇಖಕರು ಬೆಂಗಳೂರು ವಿವಿ ನಿವೃತ್ತ ಕುಲಪತಿ ಹಾಗೂ ಮನಶಾಸ್ತ್ರಜ್ಞ)

* * *

ವಿವಾದದ ಚೆಂಡು ಸುಪ್ರೀಂ ಕೋರ್ಟ್ ಅಂಗಳದಲ್ಲಿ

– ಬಸವಪ್ರಭು ಹೊಸಕೇರಿ

ಸಂವಿಧಾನದ ನಿರ್ದೇಶನ ಮತ್ತು ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣವಿರಬೇಕೆಂಬ ಹೈಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ೨೨.೦೬.೧೯೮೯ ರಂದು ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯೇ ಬೋಧನಾ ಮಾಧ್ಯಮವಾಗಿರಬೇಕು ಎಂದು ಆದೇಶ ಹೊರಡಿಸಿತು.ಇದನ್ನು ಸುಪ್ರೀಂಕೋರ್ಟ್ ಕೂಡಾ ಎತ್ತಿ ಹಿಡಿಯಿತು.

ನಂತರ ಕರ್ನಾಟಕ ಸರ್ಕಾರ ದಿನಾಂಕ ೮.೧೨.೧೯೯೩ ರ ಸುಪ್ರೀಂ ಕೋರ್ಟ್ ತೀರ್ಪಿನ ಆಧಾರದ ಮೇರೆಗೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ೧೯೯೪-೯೫ನೇ ಶೈಕ್ಷಣಿಕ ವರ್ಷದಿಂದ ಅನುಸರಿಸಬೇಕಾದ ಭಾಷಾ ನೀತಿಯನ್ನು ಘೋಷಿಸಿತು.

ಅದರಲ್ಲಿ ಪ್ರಮುಖವಾಗಿ ೧ ರಿಂದ ೪ನೇ ತರಗತಿಯವರೆಗೆ ಅನುಬಂಧದಲ್ಲಿರುವ (ಇದರಲ್ಲಿ ತಮಿಳು, ಮಲೆಯಾಳಿ, ತೆಲುಗು ಸೇರಿದಂತೆ ಹತ್ತು ಭಾಷೆಗಳಿವೆ) ಒಂದು ಮಾತೃಭಾಷೆ ಅಥವಾ ಕನ್ನಡದಲ್ಲಿ ಬೋಧಿಸುವುದು ಕಡ್ಡಾಯ ಎಂದು ಸರ್ಕಾರ ಸ್ಪಷ್ಟಪಡಿಸಿತು.

ಸರ್ಕಾರದ ಈ ಆದೇಶವನ್ನು ಹಲವು ಇಂಗ್ಲಿಷ್ ಮಾಧ್ಯಮ ಶಾಲೆಗಳ ಮಾಲೀಕರು ಮತ್ತು ಪಾಲಕರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದರು. ಇದರ ವಿಚಾರಣೆ ನಡೆಸಿದ ಹೈಕೋರ್ಟ್, ರಾಜ್ಯ ಸರ್ಕಾರದ ಆದೇಶದಲ್ಲಿ ಹೇಳಲಾಗಿದ್ದ ಭಾಷಾ ನೀತಿಯ ಬಹುತೇಕ ಭಾಗಗಳನ್ನು ರದ್ದುಗೊಳಿಸಿತು.

ಕರ್ನಾಟಕ ಸರ್ಕಾರ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ವಿಶೇಷ ಅನುಮತಿ ಅರ್ಜಿಯನ್ನು (ಎಸ್. ಎಲ್.ಪಿ) ಸುಪ್ರೀಂ ಕೋರ್ಟ್ ಮುಂದೆ ದಾಖಲಿಸಿದೆ. ಪ್ರಶ್ನಿತ ತೀರ್ಪಿನ ಪ್ರಕರಣದಲ್ಲಿ ಗೋ.ರು.ಚ, ಜಿ.ಎಸ್. ಶಿವರುದ್ರಪ್ಪ, ಬರಗೂರು ರಾಮಚಂದ್ರಪ್ಪ, ಡಾ. ಚಿದಾನಂದ ಮೂರ್ತಿ, ಎಚ್. ಎಸ್. ದೊರೆಸ್ವಾಮಿ ಸೇರಿದಂತೆ ನೂರಕ್ಕೂ ಹೆಚ್ಚು ಸಾಹಿತಿಗಳು ಮತ್ತು ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ಪ್ರತಿವಾದಿಗಳಾಗಿದ್ದಾರೆ. ಹಿರಿಯ ಪತ್ರಕರ್ತ ಡಾ.ಪಾಟೀಲ ಪುಟ್ಟಪ್ಪ ಕೂಡಾ ಎಸ್. ಎಲ್. ಪಿ. ಹಂತದಲ್ಲಿ ಸುಪ್ರೀಂ ಕೋರ್ಟ್ ಮುಂದೆ ಅವರನ್ನು ಸೇರಲಿದ್ದಾರೆ.

ಮುಂದಿನ ಆಗಸ್ಟ್‌ನಲ್ಲಿ ಸುಪ್ರೀಂ ಕೋರ್ಟ್ ಪ್ರಕರಣದ ವಿಚಾರಣೆ ಪ್ರಾರಂಭಿಸಲಿದ್ದು, ಪ್ರಮುಖವಾಗಿ ಸಂವಿಧಾನದ ಪರಿಚ್ಛೇದಗಳಾದ ೧೪, ೧೯(೧)(ಎ), ೧೯(೧)(ಜಿ), ೨೧(ಎ), ೨೯, ೩೦ ಮತ್ತು ೩೫೦ (ಅ) ಇವುಗಳು ಹೇಗೆ ಅನ್ವಯಿಸುತ್ತದೆ ಎಂಬ ವಿಷಯವೂ ಸೇರಿದಂತೆ ಪ್ರಾಥಮಿಕ ಶಾಲಾ ಹಂತದಲ್ಲಿ ಮಾತೃ ಭಾಷಾ ಮಾಧ್ಯಮ ನಿಗದಿ ಪಡಿಸುವ ಕುರಿತು ಸರ್ಕಾರದ ಪಾತ್ರ ಏನೆಂಬುದು ನಿರ್ಧಾರವಾಗಲಿದೆ.

ಭಾಷೆಯ ಉಳಿವಿಗೆ ದೂರಗಾಮಿ ಪರಿಣಾಮ ಬೀರಬಲ್ಲ ಈ ಮಹತ್ವದ

ವಿಚಾರಣೆಯಲ್ಲಿ ಕನ್ನಡದ ಕಾಳಜಿಯುಳ್ಳ ಕಾನೂನು ತಜ್ಞರು ಸುಪ್ರೀಂ ಕೋರ್ಟ್‌ನಲ್ಲಿ ಮಾತೃಭಾಷೆಯ ನಿಲುವನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರೆ ಕನ್ನಡ ಉಳಿದೀತು. ಇಲ್ಲವಾದರೆ ಕನ್ನಡಿಗನೂ ಉಳಿಯಲಾರ, ಕರ್ನಾಟಕವೂ ಉಳಿಯದು.

ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕ ಸರ್ಕಾರ ಸಲ್ಲಿಸಿರುವ ವಿಶೇಷ ಅನುಮತಿ ಅರ್ಜಿಯಲ್ಲಿ ಅಡಕವಾಗಿರುವ ಮುಖ್ಯ ಕಾನೂನು ಪ್ರಶ್ನೆಗಳು ಇಂತಿವೆ :

–ಪ್ರಾಥಮಿಕ ಶಿಕ್ಷಣದ ಮಾಧ್ಯಮ ಮಾತೃಭಾಷೆಯಲ್ಲಿರತಕ್ಕದ್ದು ಎಂಬ ಕರ್ನಾಟಕ ಸರ್ಕಾರದ ಆದೇಶವನ್ನು ಇಂಗ್ಲಿಷ್ ಮಾಧ್ಯಮ ವಿದ್ಯಾರ್ಥಿ–ಪಾಲಕರ ಸಂಘದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸರ್ಕಾರದ ಮಾತೃಭಾಷಾ ನೀತಿಯನ್ನು ಎತ್ತಿ ಹಿಡಿಯುವ ಸಂದರ್ಭದಲ್ಲಿ ವಿದ್ಯಾರ್ಥಿ/ಪಾಲಕರ ಶಿಕ್ಷಣ ಮಾಧ್ಯಮದ ಆಯ್ಕೆಯ ಹಕ್ಕಿನ ವಿಷಯವನ್ನು ಪರಿಗಣಿಸಲಾಗಿಲ್ಲ ಎನ್ನುವ ಕರ್ನಾಟಕ ಹೈಕೋರ್ಟ್ ಆದೇಶವನ್ನು ಒಪ್ಪಲಾಗದು.

ಕಾರಣವೇನೆಂದರೆ ಸುಪ್ರೀಂ ಕೋರ್ಟ್ ಮುಂದೆ ಉಲ್ಲೇಖಿತ ಪ್ರಕರಣದ ಅರ್ಜಿದಾರರು ಮಾಧ್ಯಮ ಆಯ್ಕೆಯ ಹಕ್ಕನ್ನೇ ಪ್ರಮುಖವಾಗಿ ಪ್ರತಿಪಾದಿಸಿದ್ದರು ಮತ್ತು ಸುಪ್ರೀಂ ಕೋರ್ಟ್ ಅದನ್ನು ಸ್ಪಷ್ಟವಾಗಿ ತಳ್ಳಿಹಾಕಿದೆ. ವಾಸ್ತವ ಹೀಗಿರುವಾಗ ಹೈಕೋರ್ಟ್ ತೀರ್ಪು ನೀಡುವಾಗ ಸುಪ್ರೀಂ ಕೋರ್ಟ್ ಉಲ್ಲೆ?ಖಿತ ಆದೇಶವನ್ನು ಪಾಲಿಸದೇ ಸಾರಾಸಗಟಾಗಿ ಪ್ರಮಾದವೆಸಗಿದೆಯೆ?

– ರಾಜ್ಯವು ತನ್ನ ಶಿಕ್ಷಣ ನೀತಿಯ ಅಂಗವಾಗಿ ಒಂದರಿಂದ ನಾಲ್ಕನೆಯ ತರಗತಿಯವರೆಗಿನ ಪ್ರಾಥಮಿಕ ಶಿಕ್ಷಣ ಮಗುವಿನ ಮಾತೃಭಾಷೆಯಲ್ಲಿರಬೇಕೆಂದು ನಿರ್ಧರಿಸುವ ಅಧಿಕಾರ ಹೊಂದಿದೆ ಎಂದು ಹೈಕೋರ್ಟ್ ಘೋಷಿಸದೇ ತಪ್ಪೆಸಗಿದೆಯೆ?

–ಮಕ್ಕಳ ಸಮಗ್ರ ರಾಷ್ಟ್ರೀಯ ಮತ್ತು ಶೈಕ್ಷಣಿಕ ಹಿತಾಸಕ್ತಿಯಡಿ ತೆಗೆದುಕೊಂಡ ಪ್ರಾಥಮಿಕ ಹಂತದ ಶಿಕ್ಷಣ ಮಾಧ್ಯಮದ ನಿರ್ಧಾರದ ವಿರುದ್ಧ ಮಗು ಮತ್ತು ಪಾಲಕರು ತಮ್ಮ ಇಚ್ಛೆಯ ಮಾಧ್ಯಮ ಆಯ್ಕೆಯ ಮೂಲಭೂತ ಹಕ್ಕು ಹೊಂದಿದ್ದಾರೆ ಎಂಬ ಹೈಕೋರ್ಟ್ ನಿಲುವು ದೋಷಪೂರಿತವೆ?

–ಸಂವಿಧಾನದ ಪರಿಚ್ಛೇದ ೩೫೦ (ಅ) ಪ್ರಕಾರ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಲು ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳು ಶ್ರಮಿಸತಕ್ಕದ್ದೆಂಬ ನಿರ್ದೇಶನವು, ಅವಶ್ಯಕವಾಗಿ ರಾಜ್ಯಕ್ಕೆ ತನ್ನ ಶಿಕ್ಷಣ ನೀತಿಯಡಿ ಪ್ರಾಥಮಿಕ ಹಂತದ ಶಿಕ್ಷಣ ಮಾತೃಭಾಷೆಯಲ್ಲಿರಬೇಕೆಂದು ನಿರ್ಧರಿಸುವ ಅಧಿಕಾರ ಕೊಟ್ಟಿದೆ ಎಂದು ತೀರ್ಮಾನಿಸದೇ ಹೈಕೋರ್ಟ್ ಎಡವಿದೆಯೆ?

–ಸಂವಿಧಾನದ ಪರಿಚ್ಛೇದ ೩೫೦ (ಅ) ಕೇವಲ ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿ ರಕ್ಷಿಸುವುದಕ್ಕಾಗಿದೆ ಮತ್ತು ಅದು ರಾಜ್ಯಕ್ಕೆ ಪ್ರಾಥಮಿಕ ಶಿಕ್ಷಣದ ಮಾಧ್ಯಮ ಕುರಿತಾಗಿ ಭಾಷಾ ನೀತಿ ರೂಪಿಸಲು ಸ್ವಾತಂತ್ರ್ಯ ಅಥವಾ ಹಕ್ಕು ನೀಡಿಲ್ಲ ಎಂಬ ಹೈಕೋರ್ಟ್ ತೀರ್ಪು ಸರಿಯೆ?

–ಪ್ರಶ್ನಿತ ತೀರ್ಪಿನಲ್ಲಿ ಇಂಗ್ಲಿಷ್ ಮಾತ್ರ ಆಧುನಿಕ ಜ್ಞಾನದ ನಿಧಿ ಎಂಬ ಹೈಕೋರ್ಟ್‌ನ ಹೇಳಿಕೆ ಸುಪ್ರೀಂ ಕೊರ್ಟ್ (೧೯೯೪(೧) ಎಸ್.ಸಿ.ಸಿ ೫೫೦ರಲ್ಲಿ)

ರೂಪಿಸಿದ ಕಾಯ್ದೆಗೆ ವಿರುದ್ಧವಾಗಿದೆಯೇ?

–ಮೂಲಭೂತ ಹಕ್ಕು ಆಗಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ಪ್ರತಿಯೋರ್ವನು ಪ್ರಾಥಮಿಕ ಶಿಕ್ಷಣವನ್ನು ತನ್ನ ಇಚ್ಛೆಯ ಭಾಷೆಯಲ್ಲಿ ಕಲಿಯುವುದನ್ನು ಖಾತ್ರಿಪಡಿಸುತ್ತದೆಂಬ ಹೈಕೋರ್ಟ್ ನಿಲುವು ರಾಷ್ಟ್ರದ ಒಟ್ಟಾರೆ ಶೈಕ್ಷಣಿಕ ವ್ಯವಸ್ಥೆಯನ್ನು ಹಾಳುಮಾಡಿ, ಶಿಕ್ಷಣದಲ್ಲಿ ಅರಾಜಕತೆಯನ್ನುಂಟು ಮಾಡುವುದಿಲ್ಲವೆ?

–ಸಂವಿಧಾನ ನೀಡಿರುವ ವೃತ್ತಿ, ಉದ್ಯೋಗ, ವ್ಯಾಪಾರ ಮಾಡುವ ಸ್ವಾತಂತ್ರ್ಯದಡಿಯಲಿ; ಭಾಷೆ, ಸಂಸ್ಕೃತಿಯನ್ನು ಕಾಪಾಡುವ ರಾಷ್ಟ್ರೀಯ ಶಿಕ್ಷಣ ನೀತಿಗೆ ಪ್ರತಿಯಾಗಿ ತನ್ನ ಇಚ್ಛೆಯ ಮಾಧ್ಯಮ ಆಯ್ಕೆಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಹಕ್ಕು ಪ್ರಜೆಗಳಿಗಿದೆ ಎನ್ನುವ ಹೈಕೋರ್ಟ್ ತೀರ್ಮಾನ ದೋಷಪೂರ್ಣವಲ್ಲವೆ?

–ಮಾನ್ಯತೆ ಪಡೆದ ಶಾಲೆಗಳಷ್ಟೇ ಶಿಕ್ಷಣ ನೀಡಬಹುದೆಂಬ ನಿಯಮವಿದ್ದರೂ, ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿರತಕ್ಕದೆಂಬ ಆದೇಶ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಿಗೆ ಮಾತ್ರ ಅನ್ವಯವಾಗುತ್ತದೆಂಬ ಹೈಕೋರ್ಟ್ ನಿರ್ಧಾರ ದೋಷಯುಕ್ತಲ್ಲವೆ?

–ಪ್ರಾಥಮಿಕ ಶಿಕ್ಷಣಕ್ಕೆ ಅನ್ವಯವಾಗುವ ಸರ್ಕಾರದ ಏಕರೂಪದ ಶಿಕ್ಷಣ ನೀತಿ ಸರ್ಕಾರಿ ಮತ್ತು ಸರ್ಕಾರದ ಅನುದಾನಿತ ಶಾಲೆಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಅದು ಅನುದಾನರಹಿತ ಶಾಲೆಗಳಿಗೆ ಅನ್ವಯವಾಗುವುದಿಲ್ಲವೆಂಬ ಮಾನ್ಯ ಹೈಕೋರ್ಟ್ ನಿಲುವು, ಸುಪ್ರೀಂ ಕೋರ್ಟ್ ಈಗಾಗಲೇ ಒಪ್ಪಿಕೊಂಡಿರುವ ಏಕರೂಪದ ಶಿಕ್ಷಣ ನೀತಿಗೆ ವಿರುದ್ಧವಲ್ಲವೇ?

(ಲೇಖಕರು: ಧಾರವಾಡದಲ್ಲಿ ವಕೀಲರು)

* * *

ಮಾತೃಭಾಷೆ: ಗಾಂಧಿ ವಿಚಾರಗಳನ್ನೆಲ್ಲ ಹೊರಗಿಟ್ಟ 'ಭಾರತೀಯ ಬ್ರಿಟಿಷರು'

– ದೇವಿದಾಸ ಪ್ರಭು, ಭಟ್ಕಳ

ಭಾರತೀಯ ಭಾಷೆಗಳಲ್ಲಿ ಶಿಕ್ಷಣವನ್ನು ಕೇವಲ ಶಾಲಾ ಮಟ್ಟಕ್ಕೆ ಮಾತ್ರ ಸೀಮಿತವಾಗಿಟ್ಟು ಉನ್ನತ ಮತ್ತು ತಾಂತ್ರಿಕ ಶಿಕ್ಷಣವನ್ನು ನಮ್ಮ ಭಾಷೆಗಳಲ್ಲಿ ಅಭಿವೃದ್ಧಿ ಪಡಿಸದೇ ಇರುವುದರಿಂದ ಇಂದು ಭಾರತೀಯ ಭಾಷಾಮಾಧ್ಯಮ ಶಾಲೆಗಳು ಮುಚ್ಚಿ ಹೋಗುತ್ತಿವೆ.

(ಈ ಸ್ಥಿತಿಯು ಕೇವಲ ಕನ್ನಡಶಾಲೆಗಳಿಗೆ ಮಾತ್ರ ಸೀಮಿತ ವಾಗಿಲ್ಲ). ಮಹಾತ್ಮ ಗಾಂಧಿಯವರು ತೋರಿಸಿ ಕೊಟ್ಟ ಮಾರ್ಗದಲ್ಲಿ ನಡೆದ್ದದೇ ಆದರೆ ಇಂದು ದೇಶಕ್ಕೆ ಇಂತಹ ಸ್ಥಿತಿಯು ಬರುತ್ತಿರಲಿಲ್ಲ. ಗಾಂಧೀಜಿಯವರು ದೇಶದಲ್ಲಿ ಎಲ್ಲ ಶಿಕ್ಷಣವು ಮಾತೃಭಾಷೆಯಲ್ಲಿಯೇ ಇರಬೇಕೆಂದು ವಾದಿಸಿದ್ದರು.

ಅವರ ವಿಚಾರಗಳನ್ನು ಅವರು 'ಯಂಗ್ ಇಂಡಿಯಾ' ಹಾಗೂ 'ಹರಿಜನ' ಪತ್ರಿಕೆಗಳಲ್ಲಿ ಬರೆದಿರುವ ಲೇಖನಗಳು ಹಾಗೂ ಅವರು ನೀಡಿರುವ ಭಾಷಣಗಳ ಮೂಲಕ ಸಂಗ್ರಹಿಸಬಹುದು.

ಮನೆಯಿಂದ ಶಾಲೆಗೆ ಹೊರಟಾಗ ಮಗುವಿಗೆ ಶಾಲೆಯು ಮನೆಯ ಮುಂದಿನ ಭಾಗವಾಗಿ ಮುಂದಿನ ಶಿಕ್ಷಣವನ್ನು ಒದಗಿಸಬೇಕು. ಅದು ಮಾತೃಭಾಷೆಯಲ್ಲಿ ಶಿಕ್ಷಣವನ್ನು ಒದಗಿಸಿದಾಗ ಮಾತ್ರ ಸಾಧ್ಯವಾಗುತ್ತದೆ.

ವಿದೇಶಿ ಭಾಷೆಯಲ್ಲಿ ಶಿಕ್ಷಣವನ್ನು ಒದಗಿಸಿದರೆ ಮನೆ ಮತ್ತು ಶಾಲೆಯ ನಡುವಿನ ಸಂಬಂಧವೇ ಕಡಿದು ಹೋಗುತ್ತದೆ. ಹೀಗೆ ಮಾಡುವವರು ಜನರ ಶತ್ರುಗಳೇ ಆಗಿರುತ್ತಾರೆ. ಹೀಗೆ ಕಡಿದು ಹೋಗುವ ಸಂಬಂಧವು ಅಲ್ಲಿಗೆ ನಿಲ್ಲುವುದಿಲ್ಲ.

ಮುಂದೆ ಅದು ಶಿಕ್ಷಿತ ಹಾಗೂ ಸಾಮಾನ್ಯ ಜನರ ನಡುವಿನ ಸಂಬಂಧವನ್ನೆ ಕಡಿದು ಹಾಕುತ್ತದೆ. ನಾವು ಶಾಲೆಯಲ್ಲಿ ಏನನ್ನು ಕಲಿಯುತ್ತೇವೆಯೋ ಅದನ್ನು ಮನೆಯಲ್ಲಿ ಚರ್ಚಿಸುವಂತಿಲ್ಲ. ನಾವು ಶಾಲೆಯಲ್ಲಿ ಕಲಿತ ಜ್ಞಾನವನ್ನು ಜನಸಾಮಾನ್ಯರಿಗೆ ವರ್ಗಾಯಿಸುವಂತಿಲ್ಲ.

ಇಂಗ್ಲೆಂಡಿನಲ್ಲಾದರೆ ನಾವು ಯಾವುದೇ ರಾಜಕೀಯ ವಿಷಯವನ್ನು ಯಾರೊಂದಿಗಾದರೂ ಚರ್ಚಿಸಬಹುದು. ಆದರೆ ಭಾರತದಲ್ಲಿ ಇಂಗ್ಲಿಷ್ ಶಿಕ್ಷಣದಿಂದಾಗಿ ಶಿಕ್ಷಿತರು ಮತ್ತು ಜನಸಾಮಾನ್ಯರ ನಡುವೆ ಅಗಾಧವಾದ ಅಂತರವು ಕಂಡುಬರುತ್ತಿದೆ.

ಗಾಂಧೀಜಿಯವರ ಪ್ರಕಾರ ಭಾರತೀಯ ಭಾಷೆಗಳಲ್ಲಿ ತಾಂತ್ರಿಕ ಶಿಕ್ಷಣವನ್ನು ನೀಡುವುದು ಕಷ್ಟಕರ ಎನ್ನುವದು ಕೇವಲ ಒಂದು ಮೂಢನಂಬಿಕೆ ಅಷ್ಟೆ. 'ಭಾರತೀಯ ಭಾಷೆಗಳಲ್ಲಿ ತಾಂತ್ರಿಕ ಶಿಕ್ಷಣವನ್ನು ನೀಡಬೇಕಾದರೆ ಅನೇಕ ರೀತಿಯ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಎಂದು ವಾದಿಸುವವರಿದ್ದಾರೆ.

ಅವರಿಗೆ ನನ್ನ ಸಲಹೆ ಇಷ್ಟೆ. ಶಬ್ದಗಳಿಗಾಗಿ ಸಂಸ್ಕೃತ ಅಥವಾ ಪಾರ್ಸಿ ಭಾಷೆಗಳ ಮೊರೆ ಹೋಗುವ ಅಗತ್ಯವಿಲ್ಲ. ನಮ್ಮ ಗ್ರಾಮೀಣ ಜನರ ಭಾಷೆಗಳಲ್ಲಿಯೇ ಎಲ್ಲ ಶಬ್ದಗಳು ಸಿಗುತ್ತವೆ. ಗ್ರಾಮೀಣ ಜನರು ಯಾವುದೇ ಇಂಗ್ಲಿಷ್ ಶಬ್ದಗಳನ್ನು ಬಳಸದೆ ಸರಾಗವಾಗಿ ಮಾತನಾಡುತ್ತಾರೆ.

ಯಾವುದೇ ಹೊಸ ಸಂಗತಿಗೆ ತಾವೇ ಹೊಸ ಹೆಸರನ್ನು ಹುಡುಕಿಕೊಳ್ಳುತ್ತಾರೆ. ನಾನು ಅಂಕಗಣಿತ, ಬೀಜಗಣಿತ, ರೇಖಾಗಣಿತ, ರಸಾಯನಶಾಸ್ತ್ರ ಇತ್ಯಾದಿಗಳನ್ನು ನಾಲ್ಕು ವರ್ಷಗಳಲ್ಲಿ ಏನನ್ನು ಕಲಿತೆನೋ ಅದನ್ನು ನನ್ನ ಮಾತೃಭಾಷೆ ಗುಜರಾತಿಯಲ್ಲಾದರೆ ಕೇವಲ ಒಂದೇ ವರ್ಷದಲ್ಲಿ ಕಲಿಯುತ್ತಿದ್ದೆ.

ಸುಲಭವಾಗಿ ವಿಷಯವನ್ನು ಗ್ರಹಿಸಲು ಸಾಧ್ಯವಾಗುತ್ತಿತ್ತು, ಕಲಿತಿರುವ ವಿಷಯಗಳನ್ನು ನನ್ನ ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ನನಗೆ ಸಾಧ್ಯವಾಗುತ್ತಿತ್ತು' ಎಂದು ಗಾಂಧಿಜಿಯವರು ಹೇಳಿಕೊಂಡಿದ್ದಾರೆ. ಗಾಂಧಿಜಿಯವರ ಅಭಿಪ್ರಾಯವನ್ನು ಭಾರತೀಯ ಬ್ರಿಟಿಷರು ತಿರಸ್ಕರಿಸಿದರು.

ಇಂದು ಭಾರತವು ತಾಂತ್ರಿಕವಾಗಿ ತೀರ ಹಿಂದುಳಿದ ದೇಶವಾಗಿದೆ. ತಮ್ಮ ತಮ್ಮ ಭಾಷೆಯಲ್ಲಿಯೇ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕಲಿಯುವ ದೇಶಗಳೆಲ್ಲವೂ ತಾಂತ್ರಿಕವಾಗಿ ಮುಂದುವರಿದ ದೇಶಗಳಾಗಿವೆ.

ದೇಶದ ರಾಷ್ಟ್ರಭಾಷೆ ಯಾವುದಿರಬೇಕೆನ್ನುವುದರ ಕುರಿತೂ ಗಾಂಧಿಯವರು ಚರ್ಚಿಸಿದ್ದಾರೆ. 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ೧-೧೨-೧೯೩೩ರಲ್ಲಿ ಅವರು

ಈ ರೀತಿಯಾಗಿ ಬರೆದಿದ್ದಾರೆ. 'ಶಿಕ್ಷಿತ ಜನರು ಇಂಗ್ಲಿಷನ್ನು ಒಪ್ಪಿಕೊಂಡಿದ್ದಾರೆ. ಇದನ್ನು ಬದಲಾಯಿಸಿದರೆ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಎನ್ನುವುದು ಅವರ ಆಲೋಚನೆ.

ಆದರೆ ಇದು ಕೇವಲ ಮೂಢನಂಬಿಕೆ ಅಷ್ಟೆ. ಬಹುಸಂಖ್ಯಾತರನ್ನು ಗಮನಿಸಿದಾಗ ಇಂಗ್ಲಿಷ್ ಭಾರತದ ರಾಷ್ಟ್ರಭಾಷೆಯಾಗಲು ಸಾಧ್ಯವಿಲ್ಲ. ಗಾಂಧೀಜಿಯವರ ಪ್ರಕಾರ ರಾಷ್ಟ್ರಭಾಷೆಯಾಗಲು ಕೆಲವು ಅರ್ಹತೆಗಳಿರಬೇಕು. ಮೊದಲನೆಯದಾಗಿ ಸರ್ಕಾರಿ ಅಧಿಕಾರಿಗಳಿಗೆ ಅದು ಸುಲಭವಾಗಿ ಅರ್ಥವಾಗುತ್ತಿರಬೇಕು.

ಎರಡನೆಯದಾಗಿ ಧಾರ್ಮಿಕ, ಆರ್ಥಿಕ ಹಾಗೂ ರಾಜಕೀಯವಾಗಿ ದೇಶದ ಎಲ್ಲ ಜನರನ್ನು ಸಂಪರ್ಕಿಸುವಂತಿರಬೇಕು. ಮೂರನೆಯದಾಗಿ ಅದು ಬಹುಸಂಖ್ಯಾತ ಜನರ ಭಾಷೆಯಾಗಿರಬೇಕು.

ನಾಲ್ಕನೆಯದಾಗಿ ಎಲ್ಲರೂ ಸುಲಭವಾಗಿ ಅದನ್ನು ಅರ್ಥ ಮಾಡಿಕೊಳ್ಳಬೇಕು. ಐದನೆಯದಾಗಿ ಈ ಭಾಷೆಯನ್ನು ಆಯ್ಕೆಮಾಡುವಾಗ ತಾತ್ಕಾಲಿಕ ಸನ್ನಿವೇಶವನ್ನು ಗಣನೆಗೆ ತೆಗೆದುಕೊಳ್ಳಬಾರದು. ಈ ಎಲ್ಲ ಅವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಇಂಗ್ಲಿಷ್ ಹೊಂದಿಲ್ಲ.

ಎಲ್ಲ ಸಂಗತಿಗಳನ್ನು ಗಮನಿಸಿದಾಗ ರಾಷ್ಟ್ರಭಾಷೆಯಾಗಲು ಸೂಕ್ತವಾದ ಭಾಷೆಯೆಂದರೆ ಹಿಂದಿ ಮಾತ್ರ. ಈ ಭಾಷೆಯು ಮಾತ್ರ ಐದು ಅವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಹೊಂದಿದೆ. ಭಾರತದ ಬೇರೆ ಯಾವುದೇ ಭಾಷೆಯು ಈ ಐದೂ ಅವಶ್ಯಕತೆಗಳನ್ನು ಈಡೇರಿಸುವ ಸಾಮರ್ಥ್ಯವನ್ನು ಹೊಂದಿಲ್ಲ.

ಮರಾಠಿ, ಗುಜರಾತಿ, ಬಂಗಾಲಿ, ಸಿಂಧಿ ಇತ್ಯಾದಿ ಜನರು ಸುಲಭವಾಗಿ ಹಿಂದಿಯನ್ನು ಅರ್ಥಮಾಡಿಕೊಳ್ಳುತ್ತಾರೆ. ಆದರೆ ತಮಿಳರಿಗೆ ಹಾಗೂ ಇತರ ದಕ್ಷಿಣ ಭಾರತೀಯರಿಗೆ ಹಿಂದಿ ಸ್ವಲ್ಪ ಕಷ್ಟವಾಗಬಹುದು.

ಆದರೆ ಈ ವಿಷಯದಲ್ಲಿ ರಾಷ್ಟ್ರೀಯತೆಯ ಭಾವನೆಯು ಅವಶ್ಯಕ, ಇದು ಸಾಧ್ಯವಾದರೆ ಮದ್ರಾಸಿನ ಎಲ್ಲ ಶಾಲೆಗಳಲ್ಲಿಯೂ ಹಿಂದಿ ಕಲಿಕೆಯನ್ನು ಪ್ರಾರಂಭಿಸಬಹುದು. ಇಂಗ್ಲಿಷಿನಿಂದ ಭಾರತವನ್ನು ಜೋಡಿಸಲು ಸಾಧ್ಯವಾಗಲಿಲ್ಲ ಆದರೆ ಹಿಂದಿಯ ಮೂಲಕ ಭಾರತವನ್ನು ಜೋಡಿಸಬಹುದು.'

ಮಹಾತ್ಮ ಗಾಂಧೀಜಿಯವರು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಸೆಪ್ಟೆಂಬರ್೧, ೧೯೨೧ ರಲ್ಲಿ ಈ ರೀತಿಯಾಗಿ ಪ್ರತಿಕ್ರಿಯಿಸಿದ್ದಾರೆ. 'ವಿದೇಶಿ ಮಾಧ್ಯಮವು ನಮ್ಮ ಮಕ್ಕಳ ಮೆದುಳಿನ ಮೇಲೆ ಅನವಶ್ಯಕ ಒತ್ತಡವನ್ನು ಹೇರುತ್ತಿದ್ದು, ಅವರು ಸೀಮಿತ ವಿಷಯವನ್ನು ತಿಳಿದುಕೊಂಡು, ಇತರರನ್ನು ಅನುಸರಿಸುವಂತೆ ಮಾಡಿದ್ದು ಸ್ವತಂತ್ರವಾಗಿ ಆಲೋಚನೆ ಮಾಡುವ ಸಾಮರ್ಥ್ಯವನ್ನೇ ನಾಶಮಾಡಿದೆ.

ವಿದೇಶಿ ಮಾಧ್ಯಮವು ಭಾರತೀಯರನ್ನು ತನ್ನ ನೆಲದಲ್ಲಿಯೇ ವಿದೇಶಿಯರನ್ನಾಗಿ ಮಾಡಿದೆ. ಇದು ಇಂದಿನ ವ್ಯವಸ್ಥೆಯ ಅತ್ಯಂತ ದೊಡ್ಡ ಅನಾಹುತ. ವಿದೇಶಿ ಮಾಧ್ಯಮವು ನಮ್ಮ ಭಾಷೆಗಳ ಬೆಳವಣಿಗೆಗೆ ತೊಡಕಾಗಿದೆ.

ನನಗೊಂದು ವೇಳೆ ಸರ್ವಾಧಿಕಾರಿ ಅಧಿಕಾರವಿದ್ದಿದ್ದರೆ ನಾನು ಈ ಕ್ಷಣದಲ್ಲಿಯೇ ನಮ್ಮ ವಿದ್ಯಾರ್ಥಿಗಳು ವಿದೇಶೀ ಮಾಧ್ಯಮದಿಂದ ಕಲಿಯುವುದನ್ನು

ನಿಲ್ಲಿಸುತ್ತಿದ್ದೆ ಹಾಗೂ ಶಿಕ್ಷಕರ ಮೇಲೆ ತಕ್ಷಣ ಬದಲಾವಣೆಗಾಗಿ ಒತ್ತಡವನ್ನು ಹೇರುತ್ತಿದ್ದೆ. ನಾನು ಪಠ್ಯಪುಸ್ತಕಗಳ ತಯಾರಿಕೆಗೂ ಸಹ ಕಾಯುತ್ತಿರಲಿಲ್ಲ.

ಶಿಕ್ಷಕರೇ ಆ ಬದಲಾವಣೆಗೆ ಹೊಂದಿಕೊಳ್ಳುತ್ತಿದ್ದರು. ಈ ಒಂದು ಸಮಸ್ಯೆಗೆ ತಕ್ಷಣ ಪರಿಹಾರ ಹುಡುಕಬೇಕಾಗಿದೆ. ವಿದೇಶೀ ಆಡಳಿತದ ಎಲ್ಲ ದುಷ್ಪರಿಣಾಮಗಳಲ್ಲಿ ಈ ವಿನಾಶಕ ವಿದೇಶೀ ಭಾಷಾ ಶಿಕ್ಷಣ ವ್ಯವಸ್ಥೆಯ ಹೇರಿಕೆಯು ಅತ್ಯಂತ ದೊಡ್ಡ ದುಷ್ಪರಿಣಾಮವೆನ್ನುವುದನ್ನು ಇತಿಹಾಸದಲ್ಲಿ ಸ್ಮರಿಸಬೇಕಾಗುತ್ತದೆ. ಇದು ದೇಶದ ಸಾಮರ್ಥ್ಯವನ್ನೇ ಹೀರುತ್ತಿದೆ ಹಾಗೂ ಶಿಕ್ಷಣದ ವೆಚ್ಚವನ್ನು ಹೆಚ್ಚಿಸುತ್ತಿದೆ.

ಈ ವ್ಯವಸ್ಥೆ ಇನ್ನೂ ಹೀಗೆಯೇ ಮುಂದುವರೆದರೆ ಅದು ದೇಶದ ಆತ್ಮವನ್ನೇ ಲೂಟಿಮಾಡುತ್ತದೆ.' ನಮ್ಮ ದೇಶದ ವಿಶ್ವವಿದ್ಯಾಲಯಗಳು ಭಾರತೀಯ ಭಾಷೆಗಳಲ್ಲಿ ಶಿಕ್ಷಣವನ್ನು ನೀಡಬೇಕೆಂದು ಗಾಂಧೀಜಿಯವರು ಬಲವಾಗಿ ಪ್ರತಿಪಾದಿಸಿದ್ದಾರೆ. 'ಯಾವುದೇ ವಿಷಯವನ್ನು ಮಂಡಿಸಲು ನಮ್ಮ ಭಾಷೆಗಳು ಪರಿಪೂರ್ಣವಾಗಿವೆ.

ನಮ್ಮ ಭಾಷೆಗಳು ನಮ್ಮನ್ನು ಪ್ರತಿನಿಧಿಸುತ್ತವೆ. ನಮ್ಮ ಭಾಷೆಗಳು ಒಳ್ಳೆಯ ವಿಚಾರಗಳನ್ನು ವ್ಯಕ್ತಪಡಿಸಲು ಅಯೋಗ್ಯವೆಂತಾದರೆ ನಾವು ನಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತೇವೆ.' ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುವ ನಮ್ಮ ದೇಶದ ಯುವಕರು ಬ್ರಿಟಿಷ್ ಯುವಕರೊಂದಿಗೆ ಪೈಪೋಟಿ ಮಾಡಲಾರರು.

ಪೂನಾದ ಕೆಲವು ಅಧ್ಯಾಪಕರೊಂದಿಗೆ ಚರ್ಚಿಸುವಾಗ ತಿಳಿದು ಬಂದ ವಿಷಯವೆಂದರೆ, ಇಂಗ್ಲಿಷ್ ಭಾಷೆಯಿಂದಾಗಿ ಪ್ರತಿಯೊಬ್ಬ ಭಾರತೀಯ ಯುವಕನು ಜ್ಞಾನವನ್ನು ಸಂಪಾದಿಸಲು ಸರಾಸರಿಯಾಗಿ ಆರು ವರ್ಷಗಳನ್ನು ಕಳೆದು ಕೊಳ್ಳುತ್ತಾನೆ.

ಎಲ್ಲವನ್ನೂ ಲೆಕ್ಕ ಹಾಕಿದರೆ ಎಷ್ಟೆಲ್ಲ ಮಾನವವರ್ಷಗಳು ನಷ್ಟವಾಗುತ್ತಿವೆ. ಒಂದುವೇಳೆ ಕಳೆದ ೫೦ ವರ್ಷಗಳಲ್ಲಿ ನಾವು ಭಾರತೀಯ ಭಾಷೆಗಳಲ್ಲಿಯೇ ಕಲಿತಿದ್ದರೆ ನಾವು ಏನಾಗಿರುತ್ತಿದ್ದೆವು? ನಾವು ಸ್ವತಂತ್ರ ಭಾರತವನ್ನು ಕಾಣುತ್ತಿದ್ದೆವು.

ನಮ್ಮ ಯುವಕರು ಸ್ವದೇಶದಲ್ಲಿಯೇ ವಿದೇಶಿಯರಂತೆ ಬದುಕಬೇಕಾಗಿರಲಿಲ್ಲ. ಗಾಂಧೀಜಿಯವರ ಈ ಮಾತಿನಿಂದ ಸ್ಪಷ್ಟವಾಗುವುದೇನೆಂದರೆ ನಮ್ಮ ಭಾಷೆಯಲ್ಲಿ ಎಲ್ಲ ಶಿಕ್ಷಣವು ದೊರೆತಾಗ ಮಾತ್ರ ದೇಶವು ಸ್ವತಂತ್ರ ದೇಶವೆನಿಸುವುದು.

ಗಾಂಧೀಜಿಯವರ ವಿಚಾರ ಇಂದಿಗೂ ಎಷ್ಟು ಪ್ರಸ್ತುತ ಎನ್ನುವುದನ್ನು ನಾವು ಯುರೋಪಿನ ಅಭಿವೃದ್ಧಿ ಹೊಂದಿದ ದೇಶಗಳು, ಜಪಾನ್, ಕೊರಿಯಾ, ಮಲೇಷ್ಯಾ, ಥೈವಾನ್ ದಂತಹ ದೇಶಗಳ ಪ್ರಗತಿಯಿಂದ ತಿಳಿದುಕೊಳ್ಳಬಹುದು.

ಇಂದು ವಿಶ್ವದಲ್ಲಿ ತಮ್ಮ ತಮ್ಮ ಭಾಷೆಯಲ್ಲಿಯೇ ಎಲ್ಲ ಶಿಕ್ಷಣವನ್ನು ಪಡೆಯುವ ದೇಶಗಳು ಮಾತ್ರ ಅಭಿವೃದ್ಧಿ ಹೊಂದಿವೆ ಹಾಗೂ ಇಂಗ್ಲಿಷ್, ಫ್ರೆಂಚ್, ಪೋರ್ಚುಗೀಸ್ ಸ್ಪಾನಿಷ್ ಇತ್ಯಾದಿ ವಿದೇಶಿ ಭಾಷೆಗಳಿಂದ ಶಿಕ್ಷಣ ಪಡೆಯುವ ಭಾರತ ಹಾಗೂ ಆಫ್ರಿಕಾದ ದೇಶಗಳು ತೀರ ಬಡದೇಶಗಳಾಗಿವೆ. ಸ್ವಾತಂತ್ರ್ಯ ದೊರೆತು ೬೪ ವರ್ಷಗಳು ಕಳೆದರೂ ಸಹ ಭಾರತೀಯರಿಗೆ ಈ ಸತ್ಯ ಅರಿವಾಗಿಲ್ಲ.

(ಸಾಭಾರ : ಪ್ರಜಾವಾಣಿ)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಸರ್ವೋದಯ ಆಂದೋಲನದ ಸಂಘಟನೆ ಕೆಲಸದ ನಿಮಿತ್ತ ಕಳೆದ ಹಲವಾರು ತಿಂಗಳುಗಳಿಂದ ರಾಜ್ಯಾದ್ಯಂತ ಸುರೇಂದ್ರ ಕೌಲಗಿಯವರು ಪ್ರವಾಸ ಮಾಡುತ್ತಿದ್ದರು ಮತ್ತು ಜೂನ್ ಒಂದರಿಂದ ಐದನೇ ತಾರೀಖಿನವರೆಗೆ ಮೈಸೂರಿನಲ್ಲಿ "ಗಾಂಧೀಕಥಾ" ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಈ ಕಥಾ ಕಾರ್ಯಕ್ರಮ ನಡೆಸಲು ಗುಜರಾತ್‌ನಿಂದ ಶ್ರೀ ನಾರಾಯಣದೇಸಾಯಿ ಬಂದಿದ್ದರು. ಶ್ರೀ ನಾರಾಯಣ ದೇಸಾಯಿ, ಮಹದೇವ ದೇಸಾಯಿಯವರ ಪುತ್ರರು. ಮಹದೇವ ದೇಸಾಯಿ ಗಾಂಧೀಜಿಯವರ ಆಪ್ತಕಾರ್ಯದರ್ಶಿಯಾಗಿದ್ದವರು.

ಶ್ರೀ ನಾರಾಯಣ ದೇಸಾಯಿಯವರ ಗಾಂಧೀ ಕಥಾ ಕಾರ್ಯಕ್ರಮದ ಸಿದ್ಧತೆಗಾಗಿ ಸುರೇಂದ್ರ ಕೌಲಗಿಯವರು ಪರಿಶ್ರಮ ಪಟ್ಟಿದ್ದರು. ಈ ಎಲ್ಲ ಕಾರಣಗಳಿಂದ ಜೂನ್ ೫ ಗಾಂಧೀ ಕಥಾದ ಕೊನೆಯ ದಿನದಂದು ಅವರ ರಕ್ತದ ಒತ್ತಡ ಹೆಚ್ಚಾಗಿ ಆಸ್ಪತ್ರೆ ಸೇರಬೇಕಾಯಿತು. ಒಂದು ವಾರದ ನಂತರ ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಹದಿನೈದು ದಿನಗಳ ಕಾಲ ಆಯುರ್ವೇದ ಉಪಚಾರ ಪಡೆದರು. ಇನ್ನೊಂದೆರೆಡು ತಿಂಗಳುಗಳಲ್ಲಿ ಪೂರ್ಣ ಗುಣಮುಖರಾಗುವ ಸಾಧ್ಯತೆಯಿದೆ. ಅವರು ಜನಪದ ವಿಚಾರದ ಸಂಪಾದಕರು ಆಗಿರುವುದರಿಂದ ೨೦೧೨ ಜುಲೈ ತಿಂಗಳ ಸಂಚಿಕೆ ಪ್ರಕಟವಾಗಲು ಸಾಧ್ಯವಾಗಲಿಲ್ಲ ಅದಕ್ಕಾಗಿ ವಿಷಾದವಿದೆ. ಇಲ್ಲಿಗೆ ಜನಪದ ವಿಚಾರದ ಹನ್ನೆರಡನೇ ಸಂಪುಟ ಮುಗಿಯುತ್ತದೆ. ಈಗ ಅಗಸ್ಟ್ ತಿಂಗಳ ಸಂಚಿಕೆ ಬಿಡುಗಡೆ ಗೊಂಡಿದೆ. ಆಗಸ್ಟ್ ಮಾಹೆಯಿಂದ ಹದಿಮೂರನೇ ಸಂಪುಟ ಆರಂಭವಾಗಲಿದೆ. ಈ ಹನ್ನೆರೆಡು ವರ್ಷ ಜನಪದ ವಿಚಾರ ಪ್ರಕಟ ಗೊಳ್ಳುವುದ್ದಕ್ಕೆ ಓದುಗರ ಮತ್ತು ಅಭಿಮಾನಿಗಳ ಪ್ರೋತ್ಸಾಹವೇ ಕಾರಣ. ಅದಕ್ಕಾಗಿ ಅವರನ್ನು ಈ ಮೂಲಕ ಅಭಿನಂದಿಸುತ್ತೇನೆ. ಜನಪದ ವಿಚಾರ ಪ್ರಕಟವಾಗುತ್ತಿರುವಾಗಲಿನಿಂದಲೂ ಚಂದಾ ಮೊತ್ತವನ್ನು ಕೇವಲ ನೂರು ರೂಪಾಯಿ ಇರಿಸಿ ಕೊಂಡು ಬರಲಾಗಿದೆ. ಇಷ್ಟು ಚಿಕ್ಕ ಮೊತ್ತದ ಚಂದಾದಲ್ಲಿ ಪತ್ರಿಕೆಯನ್ನು ಪ್ರಕಟಿಸುವುದು ಇಂದಿನ ದುಬಾರಿ ಕಾಲದಲ್ಲಿ ಕಷ್ಟ ಸಾಧ್ಯವಾಗುತ್ತದೆ. ಆದರೆ ಜನಪದ ವಿಚಾರ ಇರಿಸಿಕೊಂಡಿರುವ ಸರ್ವೋದಯ ವಿಚಾರವು ಹೆಚ್ಚು ಜನರಿಗೆ ತಲುಪಬೇಕೆಂಬುದೆ ಗುರಿಯಾಗಿದೆ. ಪತ್ರಿಕೆಯ ಪ್ರಸಾರ ಹೆಚ್ಚಿದ್ದಲ್ಲಿ. ಖರ್ಚುಕೂಡಿ ಬರಲು ಸಾಧ್ಯವಿದೆ. ಆದ್ದರಿಂದ ಈಗಿರುವ ಚಂದಾದಾರರು ಹೊಸ ಚಂದಾದಾರರನ್ನು ಮಾಡಿಸಿದಲ್ಲಿ ಪತ್ರಿಕೆಯ ಆರ್ಥಿಕ ಪರಿಸ್ಥಿತಿ ತಕ್ಕ ಮಟ್ಟಿಗೆ ಸುಧಾರಿಸುವುದು. ಆ ಪ್ರಯತ್ನವನ್ನು ತಾವು ಮಾಡುವಿರೆಂದು ಆಶಿಸುತ್ತೇವೆ.

ಸುರೇಂದ್ರ ಕೌಲಗಿಯವರು. ಆಸ್ಪತ್ರೆಯಲ್ಲಿದ್ದಾಗ ಶ್ರೀ ಎಸ್.ಪ್ರಾಣೇಶ್, ಶ್ರೀ ಜನಾರ್ಧನ್, ಶ್ರೀ ಮಂಜುನಾಥ್, ಶ್ರೀ ಕೆ. ಶ್ರೀನಿವಾಸ, ಶ್ರೀಮತಿ ಕಣ್ಣಮ್ಮ ಶ್ರೀ ಕೆ. ನಾಗಾನಂದ ಮತ್ತು ಇನ್ನು ಕೆಲವು ಸ್ನೇಹಿತರು ಧನ ಸಹಾಯ ಮಾಡಿದರು ಇವರೆಲ್ಲರಿಗೂ ಕೃತಜ್ಞತೆಗಳು. ಅನೇಕ ಸ್ನೇಹಿತರು ಆಸ್ಪತ್ರೆಗೆ ಭೇಟಿಕೊಟ್ಟು ಗುಣ ಮುಖವಾಗಲೆಂದು ಹಾರೈಸಿದರು. ಈ ಎಲ್ಲ ಮಿತ್ರರಿಗೆ ಆಭಾರಿಯಾಗಿದ್ದೇವೆ.
ಡಾ॥ ರಾಜೇಂದ್ರರವರು ತಮ್ಮ ಅಮೃತ ಆಯುರ್ವೇದ ಕ್ಲಿನಿಕ್‌ನಲ್ಲಿ ಇರಿಸಿಕೊಂಡು ಆಯುರ್ವೇದ ಪದ್ಧತಿಯ ಉಪಚಾರ ಮಾಡಿದರು. ಡಾ॥ ರಾಜೇಂದ್ರರವರಿಗೂ ಹಾರ್ದಿಕ ಕೃತಜ್ಞತೆಗಳು.

ಬೆಂಗಳೂರಿನಲ್ಲಿರುವ ಕರ್ನಾಟಕ ಸರ್ವೋದಯ ಸಂಘದ ಪದಾಧಿಕಾರಿಗಳು ಟ್ರಸ್ಟ್‌ಗೆ ಭೇಟಿಕೊಟ್ಟು ಟ್ರಸ್ಟಿನಲ್ಲಿ ಆಗುತ್ತಿರುವ ಖಾದಿ ಉದ್ಯಮವನ್ನು ವೀಕ್ಷಿಸಿದರು. ಒಳ್ಳೆ ದರ್ಜೆಯ ಖಾದಿ ಬಟ್ಟೆ ತಯಾರಿಸುತ್ತಿರುವ ಬಗ್ಗೆ ತಮ್ಮ ಸಂತೋಷ ವ್ಯಕ್ತ ಪಡಿಸಿದರಲ್ಲದೇ ತಮ್ಮ ಸಂಘದ ಖಾದಿ ಭಂಡಾರಗಳಲ್ಲಿ ಮಾರಾಟ ಮಾಡಲು ಖಾದಿ ಬಟ್ಟೆಯನ್ನು ಖರೀದಿಸಿದರು. ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸರ್ವೋದಯ ಚಿಂತಕರೂ ಆದ ಶ್ರೀ ಎಚ್.ಎಸ್.ದೊರೆಸ್ವಾಮಿಯವರು ಭೇಟಿಕೊಟ್ಟರು.

೨೦೧೨ ಜೂನ್ ಮತ್ತು ಜುಲೈ ಮಾಹೆಯ ದಾನಿಗಳು

ಶ್ರೀಮತಿ ಸುಧಾ ಮೋರ್ಚಿಂಗ್, ಶ್ರೀ ಅರವಿಂದ ಬ್ರಹ್ಮಕಲ್, ಶ್ರೀ ಅಶೋಕ್ ಬ್ರಹ್ಮಕಲ್,
ಶ್ರೀ ಭೀಮಸೇನ ಅಥಣೀಕರ್, ಶ್ರೀ ಪಿ.ವಿ. ನಾಗೇಶ್, ಶ್ರೀ ಸಿ.ಪಿ.ಶೇಷಾದ್ರಿ,
ಶ್ರೀ ವಿಕ್ರಮ್ ಕಾರ್ಯಪ್ಪ, ಶ್ರೀ ರಘುನಂದನ್, ಶ್ರೀ ಅನಿಲ್‌ಕುಮಾರ್ – ಬೆಂಗಳೂರು
ಶ್ರೀಮತಿ ಎಚ್.ಎಸ್.ಅಪರ್ಣ, ಶ್ರೀ ರಾಮಚಂದ್ರಶಾಸ್ತ್ರಿ,
ಶ್ರೀಮತಿ ಸಿ.ಕೆ.ಮಮತಾ – ಮೈಸೂರು
ಶ್ರೀ ಎಂ.ಸಿ.ಕೃಷ್ಣಾಚಾರ್ – ಮದ್ದೂರು
ಶ್ರೀ ಸುಧೀರ್‌ರಾವ್ – ಮುಂಬಯಿ
ಶ್ರೀಮತಿ ಸವಿತಾ ನಾಗಭೂಷಣ್ – ಶಿವಮೊಗ್ಗ
ಶ್ರೀ ಬಿ.ರಾಧಾಕೃಷ್ಣ – ತಿಪಟೂರು
ಶ್ರೀಮತಿ ಲೀಲಾ ಪ್ರಕಾಶ್, ಶ್ರೀಮತಿ ಶಾಂತಮ್ಮ ನಗುವಿನಹಳ್ಳಿ ಮತ್ತು ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಸರ್ವೋದಯ ಆಂದೋಲನದ ಮುನ್ನಡೆ

ಸರ್ವ ಸೇವಾ ಸಂಘದ ಅಧಿವೇಶನವು ರಾಜಾಸ್ಥಾನದ ಕೋಟಾ ಎಂಬಲ್ಲಿ ಬರುವ ಅಗಸ್ಟ್ ೧೨ ಮತ್ತು ೧೩ರಂದು ನಡೆಯುವುದು. ರಾಧಾಭಟ್ ಅಧ್ಯಕ್ಷತೆ ವಹಿಸುವರು. ಸಮ್ಮೇಳನವನ್ನು ಮೇಧಾ ಪಾಟ್ಕರ್ ಉದ್ಘಾಟಿಸುವರು. ಪ್ರಾಕೃತಿಕ ಸಂಪನ್ಮೂಲಗಳ ಒಡೆತನ ಸಮಾಜಕ್ಕೆ ಸೇರಿದ್ದು ಎಂಬ ವಿಷಯವಾಗಿ ಡಾ॥ ರಾಜೇಂದ್ರಸಿಂಗ್ ಮಾತನಾಡುವರು. ಎಲ್ಲ ರಾಜ್ಯಗಳ ಸರ್ವೋದಯ ಮಂಡಲಿಗಳ ಕಾರ್ಯವರದಿಯನ್ನು ಮಂಡಿಸಲಾಗುವುದು ಹಾಗೂ ಸರ್ವ ಸೇವಾ ಸಂಘದ ಸಂವಿಧಾನಕ್ಕೆ ಸಂಬಂಧಿಸಿದ ತಿದ್ದುಪಡಿ ಬಗ್ಗೆ ಚರ್ಚಿಸಲಾಗುವುದು. ಅಧಿವೇಶನಕ್ಕೆ ಹೋಗಲು ಆಸಕ್ತಿಯುಳ್ಳ ಲೋಕ ಸೇವಕರು, ಸರ್ವೋದಯ ಮಿತ್ರರು, ಕಾರ್ಯಕರ್ತರು ಶ್ರೀ ದಶರಥ್ ಕುಮಾರ್ - ೯೪೧೪೨೫೨೨೫೧ ಅಥವಾ ಅರವಿಂದ್ ಭಾರದ್ವಾಜ್ - ೯೩೧೪೨೭೬೩೩೬ ಇವರನ್ನು ಸಂಪರ್ಕಿಸಬಹುದು.

ಖಾದಿ ವಿಚಾರ

ಶಿಶುವನ ಎಂಬುದು ಒಂದು ಐ.ಸಿ.ಎಸ್.ಸಿ. ಶಾಲೆ. ಇದು ಮುಂಬೈ ನಗರದ ಹೃದಯ ಭಾಗದಲ್ಲಿದೆ. ಈ ಶಾಲೆ ಭಾರತದ ಅಸ್ಮಿತೆಯ ಪ್ರತೀಕವಾಗಿ ಮಹಾತ್ಮ ಗಾಂಧೀಜಿಯವರ ವಿಚಾರಗಳನ್ನು ಅಳವಡಿಸಿಕೊಂಡಿದೆ.

ಈ ಶಾಲೆಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಖಾದಿ ಸಮವಸ್ತ್ರವನ್ನು ಧರಿಸುತ್ತಾರೆ. ಈ ಶಾಲೆ ಪ್ರಾರಂಭವಾದ್ದು ಹನ್ನೆರಡು ವರ್ಷಗಳ ಹಿಂದೆ. ಖಾದಿ ಸಮವಸ್ತ್ರದ ಯೋಜನೆ ಇಡೀ ಭಾರತದಲ್ಲಿ ಇದೊಂದೇ ಇರಬೇಕೆನಿಸುತ್ತದೆ.

"ಈ ರೀತಿಯ ಯೋಜನೆಯು ಒಂದು ಸವಾಲಾಗಿದೆ, ಸಮವಸ್ತ್ರವಾಗಿ ಖಾದಿ ಬಳಕೆಯ ಯೋಜನೆಯನ್ನು ಕಾಪಾಡಿಕೊಂಡುಬರುವುದು ಒಂದು ಸವಾಲಾಗಿದೆ. ಖಾದಿ ಬಟ್ಟೆಯ ಬಣ್ಣ ಮಂಕಾಗದಂತೆ ಮತ್ತು ಬಟ್ಟೆಯ ವಿನ್ಯಾಸ ಹಾಳಾಗದಂತೆ ನಾವು ಖಾತ್ರಿ ಮಾಡಿಕೊಳ್ಳಬೇಕಾಯಿತು" ಎಂದು ಶಾಲೆಯ ಕಾರ್ಯ ನಿರ್ವಾಹಕರಾದ ಕವಿತಾ ಆನಂದ್‌ರವರು ಹೇಳುತ್ತಾರೆ.

ಈ ಕಾರ್ಯಕ್ರಮ ಪ್ರಾರಂಭ ಮಾಡುವ ಮುನ್ನ ಅವರು 'ಉದ್ಯೋಗ ಭಾರತಿ' ಸಂಪರ್ಕಿಸಿದರು. 'ಉದ್ಯೋಗ ಭಾರತಿ' ಕಛ್‌ನಲ್ಲಿ ಒಂದು ದೊಡ್ಡ ಸಹಕಾರಿ ಸಂಸ್ಥೆ. ಈ ಸಂಸ್ಥೆಯು ಶೇಕಡ ಎಂಭತ್ತೈದರಷ್ಟು ಬಟ್ಟೆಯನ್ನು ಹತ್ತಿಯಿಂದಲೇ ತಯಾರಿಸುತ್ತದೆ. ಈ ಸಹಕಾರಿ ಸಂಸ್ಥೆ ಗೊಂದಾಲ್‌ನಲ್ಲಿದೆ. ಈ ಸಂಸ್ಥೆಯನ್ನು ಓರ್ವ ಗಾಂಧಿ ಅನುಯಾಯಿ ಆ ಊರಿನ ಬಡ ಹೆಂಗಸರನ್ನು ಆರ್ಥಿಕವಾಗಿ ಬಲಪಡಿಸುವುದಕ್ಕಾಗಿ ಪ್ರಾರಂಭಿಸಿದರು. ಐ.ಸಿ.ಎಸ್.ಸಿ. ಶಾಲೆಯು ತನ್ನ ಐದನೇ

ದರ್ಜೆಯ ವಿದ್ಯಾರ್ಥಿಗಳನ್ನು ವರ್ಷಕ್ಕೊಮ್ಮೆ ಹತ್ತು ದಿನಗಳ ಕಾಲ ಶಾಲಾ ಪ್ರವಾಸಕ್ಕಾಗಿ ಕಛ್‌ಗೆ ಕರೆದೊಯ್ಯುವ ಪರಿಪಾಠ ಇಟ್ಟುಕೊಂಡಿದೆ. ಆ ಪ್ರವಾಸದ ಕೊನೆಯ ಭೇಟಿ ಗೊಂದಾಲ್‌ಗೆ, "ಅಲ್ಲಿ ವಿದ್ಯಾರ್ಥಿಗಳು ಖಾದಿ ಸಮವಸ್ತ್ರ ಹೇಗೆ ತಯಾರಾಗುತ್ತದೆ ಮತ್ತು ಆ ಬಡ ಹೆಂಗಸರು ಹೇಗೆ ಆ ಸಹಕಾರಿ ಸಂಸ್ಥೆಯಲ್ಲಿ ದುಡಿಯುತ್ತಾ ಅದರಿಂದ ಅವರು ಆಡು, ಕುರಿ, ದನ ಮತ್ತು ಮನೆ ಖರೀದಿಸಿ ಸ್ವಲ್ಪ ಹಣವನ್ನೂ ಸಂಪಾದಿಸುತ್ತಾರೆಂಬುದನ್ನು ತಿಳಿಯುತ್ತಾರೆ" ಎಂದು ಕವಿತಾರವರು ಹೇಳುತ್ತಾರೆ.

"ಸಮವಸ್ತ್ರವು ಹುಡುಗರಿಗೆ ಮತ್ತು ಹುಡುಗಿಯರಿಗೆ ಒಂದೇ ತೆರನಾಗಿದೆ. ಸಮವಸ್ತ್ರವು ಕುರ್ತಾ ಮತ್ತು ಪ್ಯಾಂಟನ್ನು ಹೊಂದಿದೆ, ನೆಹರೂ ಕಾಲರ್ ಮತ್ತು ಮರದ ಗುಂಡಿಗಳನ್ನು ಹೊಂದಿದೆ. ಸಮವಸ್ತ್ರ ತಿಳಿಹಳದಿ ಹಾಗೂ ಹಸಿರು ಬಣ್ಣದಿಂದ ಕೂಡಿದ್ದಾಗಿದೆ. ಈ ಬಣ್ಣ ಸೂರ್ಯಕಾಂತಿ ಹೂವನ್ನು ಪ್ರತಿಬಿಂಬಿಸುತ್ತದೆ, ಸೂರ್ಯಕಾಂತಿ ಹೂವೇ ಆ ಶಾಲೆಯ ಗುರುತು ಕೂಡಾ" ಎಂದು ಕವಿತಾರವರು ಹೇಳುತ್ತಾರೆ. ಸಾಮಾಜಿಕವಾಗಿ ಉಪಯುಕ್ತವಾದ ಉತ್ಪಾದನೆಯನ್ನು ಮಾಡುವುದು ಈ ಶಾಲೆಯ ಒಂದು ಮುಖ್ಯ ಚಟುವಟಿಕೆ. ಇದು ಮಕ್ಕಳ ಮುಂದಿನ ವ್ಯಾಸಂಗಕ್ಕೆ ಅನುಕೂಲಕರವಾಗಿದೆ. ಶಾಲೆಯು ತಕಲಿಯಿಂದ ನೂಲುವುದನ್ನು ಪ್ರಾರಂಭಿಸಿತು. ತಕಲಿ ಪಾಠವನ್ನು ಸುಪ್ರಸಿದ್ಧ ಗಾಂಧೀವಾದಿ 'ಉಷಾ ಬೆಹನ್' ಸ್ವತಃ ಮಾಡುತ್ತಾರೆ. ವಿದ್ಯಾರ್ಥಿಗಳು ಖಾದಿಯನ್ನು ಸ್ವೀಕರಿಸುವಂತೆ ಮಾಡುವುದು ಒಂದು ಸವಾಲಾಗಿದೆ ಎಂಬುದು ಅವರ ಹೇಳಿಕೆ. ಕೆಲ ಹಿರಿಯ ವಿದ್ಯಾರ್ಥಿಗಳು ಚರಕದಿಂದ ನೂಲುವುದುನ್ನು ಕಲಿಯುತ್ತಿದ್ದಾರೆ.

(ಸಂಗ್ರಹಾನುವಾದ : ಸುಪ್ರಜ್ ಕೌಲಗಿ; ಸಾಭಾರ : ಲೈಫ್ ಪಾಸಿಟಿವ್)

* * *

ಪರ್ಯಾಯ ಖಾದಿ ಪ್ರಮಾಣ ಪತ್ರ

ಪರ್ಯಾಯ ಖಾದಿ ಮತ್ತು ಅ-ಸರ್ಕಾರಿ ಖಾದಿಯನ್ನು ಉತ್ಪಾದಿಸುವ ಸಂಸ್ಥೆಗೆ ಸರ್ವ ಸೇವಾ ಸಂಘದ ಖಾದಿ ಸಮಿತಿಯು ಪರ್ಯಾಯ ಪ್ರಮಾಣ ಪತ್ರವನ್ನು ಕೊಡುವುದು. ತನ್ಮೂಲಕ ಖಾದಿ ಆಯೋಗ ಮತ್ತು ಮಂಡಲಿಯಿಂದ ಮುಕ್ತವಾಗಿ ಜನಾಧಾರಿತ ಖಾದಿ ಬೆಳೆಯುವಂತೆ ಮಾಡುವುದು ಇದರ ಉದ್ದೇಶ್ಯವಾಗಿದೆ. ಸದ್ಯದಲ್ಲಿಯೇ ಕರ್ನಾಟಕ ರಾಜ್ಯ ಮಟ್ಟದಲ್ಲಿ ಖಾದಿ ಸಂಸ್ಥೆಗಳ ಸಭೆಯನ್ನು ಈ ವಿಷಯವಾಗಿ ನಡೆಸಲಾಗುವುದು. ಸರ್ವ ಸೇವಾ ಸಂಘದ ಖಾದಿ ಸಮಿತಿಯ ಸಂಯೋಜಕ ಶ್ರೀ ಜಯಂತ್ ಮಠಕರ್ ಈ ಸಭೆಗೆ ಬರುವ ನಿರೀಕ್ಷೆಯಿದೆ. ಸಭಾ ದಿನಾಂಕ ಮತ್ತು ಸ್ಥಳವನ್ನು ಸದ್ಯದಲ್ಲಿಯೇ ಎಲ್ಲ ಖಾದಿ ಸಂಸ್ಥೆಗಳಿಗೆ ಮತ್ತು ಆಸಕ್ತರಿಗೆ ತಿಳಿಸಲಾಗುವುದು.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀಮತಿ ಭಾರತೀ ದೇಸಾಯಿ – ಬೆಂಗಳೂರು;
ಶ್ರೀ ಎಂ.ಎಸ್.ಸತೀಶ್,
ಶ್ರೀ ಸಿ.ಎನ್.ಕೃಷ್ಣರಾವ್,
ಶ್ರೀ ಆದಿನಾರಾಯಣಶೆಟ್ಟರು– ಮೈಸೂರು;
ಶ್ರೀ ಕೆ.ಯಶವಂತ – ಮಂಗಳೂರು;
ಶ್ರೀ ಎಂ.ರಾಜು – ಶಿವಮೊಗ್ಗ;
ಶ್ರೀ ಎಚ್.ಎನ್.ರಾಮಕೃಷ್ಣಯ್ಯ – ಹೊಳೆನರಸೀಪುರ;

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ–ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.